ಮಂಗಳವಾರ, ಮೇ 24, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 143 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಯುಎಪಿಎ: ಪರಿಷ್ಕರಣೆಗೆ ಕೂಗು
ಉಕ್ರೇನ್ ಪೂರ್ವದಲ್ಲಿ ದಾಳಿ ಹೆಚ್ಚಿಸಿದ ರಷ್ಯಾ 11
ಬಿ.ವೈ. ವಿಜಯೇಂದ್ರಗೆ ಟಿಕೆಟ್ ನಕಾರ? 4B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,288 ▼	16,215 ▼	₹ 52,960 (ಬೆಂಗಳೂರು)	₹ 63,700 (ಬೆಂಗಳೂರು)	77.55 ▲

ಅಮೆರಿಕ, ಇಂಡೊ–ಪೆಸಿಫಿಕ್ ದೇಶಗಳ ಕೂಟ: ಚೀನಾದ ಪ್ರಾಬಲ್ಯ ತಡೆ ಉದ್ದೇಶ

ಹೊಸ ಆರ್ಥಿಕ ವೇದಿಕೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಮೃದ್ಧಿಗಾಗಿ ಇಂಡೊ–ಪೆಸಿಫಿಕ್ ಆರ್ಥಿಕ ವೇದಿಕೆ'ಯನ್ನು (ಐಪಿಇಎಫ್) ಸೋಮವಾರ ಆರಂಭಿಸಲಾಗಿದ್ದು, ಭಾರತ, ಅಮೆರಿಕ ಮತ್ತು ಇತರ 10 ದೇಶಗಳು ಇದರ ಸದಸ್ಯ ರಾಷ್ಟ್ರಗಳಾಗಿವೆ. ಸದಸ್ಯ ದೇಶಗಳ ನಡುವಣ ಆರ್ಥಿಕ ಸಂಬಂಧವನ್ನು ಬಲಪಡಿಸುವುದು ಈ ವೇದಿಕೆ ಸ್ಥಾಪನೆಯ ಘೋಷಿತ ಉದ್ದೇಶ. ಆದರೆ, ಈ ಪ್ರದೇಶದಲ್ಲಿ ಚೀನಾದ ಆರ್ಥಿಕ ಪ್ರಭಾವವನ್ನು ತಡೆಯುವುದು ಹಿನ್ನೆಲೆಯಲ್ಲಿರುವ ಉದ್ದೇಶ ಎಂದು ಹೇಳಲಾಗಿದೆ.

ಅಮೆರಿಕದ ಉಮೇದಿನಂತೆ ಈ ವೇದಿಕೆ ಆರಂಭವಾಗಿದೆ. ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ವ್ಯಾಪಾರ ಪ್ರಾಬಲ್ಯ ತಗ್ಗಿಸಲು ಇಲ್ಲಿನ ದೇಶಗಳಿಗೆ ಬಲವಾದ ಆರ್ಥಿಕ ಕಾರ್ಯಸೂಚಿಯನ್ನು ಅಮೆರಿಕ ರೂಪಿಸಿದೆ.

'ಜಾಗತಿಕ ಆರ್ಥಿಕ ಪ್ರಗತಿಯ ಎಂಜಿನ್ ಆಗಿ ಇಂಡೊ–ಪೆಸಿಫಿಕ್ ಪ್ರದೇಶವನ್ನು ರೂಪಿಸುವ ಸಾಮೂಹಿಕ ಇಚ್ಛೆಯೇ ಐಪಿಇಎಫ್ ಉದ್ದೇಶವಾಗಿದೆ. ಚಾರಿತ್ರಿಕವಾಗಿ, ಈ ಪ್ರದೇಶದಲ್ಲಿ ನಡೆಯುವ ವ್ಯಾಪಾರದ ಕೇಂದ್ರ ಸ್ಥಾನದಲ್ಲಿ ಭಾರತ ಇದೆ. ಜಗತ್ತಿನ ಅತ್ಯಂತ ಹಳೆಯ ವಾಣಿಜ್ಯ ಬಂದರು ಗುಜರಾತ್‌ನ ಲೊಥಲ್‌ನಲ್ಲಿ ಇತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಜಪಾನ್‌ನ ಪ್ರಧಾನಿ ಫುಮಿಯೊ ಕಿಶಿಡಾ ಅವರು ವೇದಿಕೆಗೆ ಚಾಲನೆ ಕೊಡುವ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಇಂಡೊ–ಪೆಸಿಫಿಕ್ ಪ್ರದೇಶದ ದೇಶಗಳ ನೆಲೆಗಟ್ಟು ಗಟ್ಟಿಗೊಳಿಸುವುದು, ಸುಸ್ಥಿರತೆ ಕಾಯ್ದುಕೊಳ್ಳುವುದು, ಎಲ್ಲರನ್ನೂ ಒಳಗೊಳ್ಳುವುದು, ಆರ್ಥಿಕ ಪ್ರಗತಿ, ನ್ಯಾಯಬದ್ಧತೆ ಮತ್ತು ಸ್ಪರ್ಧಾತ್ಮಕತೆ ಹೆಚ್ಚಿಸುವುದು ವೇದಿಕೆಯು ಇರಿಸಿಕೊಂಡಿರುವ ಗುರಿ ಎಂದು ವಿದೇಶಾಂಗ ಸಚಿವಾಲಯವು ಹೇಳಿದೆ.

ಜಗತ್ತಿನ ಜನಸಂಖ್ಯೆಯ ಶೇ 60ರಷ್ಟು ಇಂಡೊ–ಪೆಸಿಫಿಕ್ ಪ್ರದೇಶದಲ್ಲಿಯೇ ಇದೆ. ಹಾಗಾಗಿ ಮುಂದಿನ 30 ವರ್ಷಗಳವರೆಗೆ ಜಾಗತಿಕ ಪ್ರಗತಿಗೆ ಈ ಪ್ರದೇಶದ ಕೊಡುಗೆಯೇ ಅತ್ಯಂತ ಹೆಚ್ಚು ಇರಲಿದೆ.

'ಮುಕ್ತ, ನ್ಯಾಯಸಮ್ಮತ, ಎಲ್ಲರನ್ನೂ ಒಳಗೊಂಡ, ಪರಸ್ಪರ ಸಂಪರ್ಕಿತ, ಪುಟಿದೇಳಬಲ್ಲ, ಸುರಕ್ಷಿತ ಮತ್ತು ಸಮೃದ್ಧ ಇಂಡೊ–ಪೆಸಿಫಿಕ್ ಪ್ರದೇಶಕ್ಕೆ ಸುಸ್ಥಿರ ಮತ್ತು ಎಲ್ಲರನ್ನೂ ಒಳಗೊಂಡ ಆರ್ಥಿಕ ಪ್ರಗತಿಯ ಸಾಮರ್ಥ್ಯ ಇದೆ' ಎಂದು ವೇದಿಕೆಗೆ ಚಾಲನೆ ನೀಡಿದ ಬಳಿಕ ನೀಡಿದ ಜಂಟಿ ಹೇಳಿಕೆಯಲ್ಲಿ ವಿವರಿಸಲಾಗಿದೆ.

ಟ್ರಾನ್ಸ್–ಪೆಸಿಫಿಕ್ ಪಾರ್ಟ್ನರ್‌ಶಿಪ್ ಎಂಬ ವೇದಿಕೆಯೊಂದು ಹಿಂದೆ ಇತ್ತು. ಆದರೆ, ಐದು ವರ್ಷಗಳ ಹಿಂದೆ, ಅಮೆರಿಕದ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವೇದಿಕೆಯಿಂದ ಹೊರನಡೆದಿದ್ದರು.

ಟ್ರಂಪ್ ಅವರಿಗೂ ಹಿಂದೆ ಅಮೆರಿಕದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮಾ ಅವರು ಈ ವೇದಿಕೆಯನ್ನು ರೂಪಿಸಿದ್ದರು. ಆಗ, ಬೈಡನ್ ಅವರು ಉಪಾಧ್ಯಕ್ಷರಾಗಿದ್ದರು.

ಇನ್ನಷ್ಟು ಸುದ್ದಿಗಳು 11

ಭಾರತದ ಬೇಡಿಕೆಗೆ ಒಪ್ಪಿಗೆ

ವೇದಿಕೆಗೆ ಸಂಬಂಧಿಸಿದ ಹಲವು ವಿಚಾರಗಳ ಬಗ್ಗೆ ಭಾರತ ಮತ್ತು ಅಮೆರಿಕದ ಅಧಿಕಾರಿಗಳ ನಡುವೆ ಹಲವು ದಿನಗಳಿಂದ ಸಮಾಲೋಚನೆ ನಡೆದಿದೆ.

ಈ ವೇದಿಕೆಯು ಈಗಲೂ ಸಮಾಲೋಚನಾ ಹಂತದಲ್ಲಿಯೇ ಇದೆ. ಇತರ ದೇಶಗಳು ಸೇರ್ಪಡೆಯಾಗುವ ಅವಕಾಶ ಮುಕ್ತವಾಗಿದೆ ಎಂಬುದನ್ನು ಬಿಂಬಿಸುವಂತೆ ಒಪ್ಪಂದವನ್ನು ಬದಲಾಯಿಸಲಾಗಿದೆ. ಭಾರತದ ಬೇಡಿಕೆಯಂತೆ ಈ ಬದಲಾವಣೆ ಮಾಡಲಾಗಿದೆ. ಇದಾದ ಬಳಿಕವೇ ಭಾರತವು ಒಪ್ಪಂದಕ್ಕೆ ಸಹಿ ಹಾಕಿದೆ.

ಚೀನಾದ ವೇದಿಕೆಯೂ ಇದೆ

ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ ಎಂಬ ವೇದಿಕೆಯನ್ನು ಚೀನಾ ನೇತೃತ್ವದಲ್ಲಿ ಕೆಲ ತಿಂಗಳ ಹಿಂದೆ ಆರಂಭಿಸಲಾಗಿದೆ. ಈ ವೇದಿಕೆಯಲ್ಲಿ ಏಷ್ಯಾ–ಪೆಸಿಫಿಕ್ ಪ್ರದೇಶದ 15 ದೇಶಗಳು ಇವೆ. ಚೀನಾ ನೇತೃತ್ವದ ವೇದಿಕೆಯಲ್ಲಿ ಇರುವ ಹಲವು ದೇಶಗಳು ಅಮೆರಿಕವು ಹೊಸದಾಗಿ ಆರಂಭಿಸಿದ ವೇದಿಕೆಯಲ್ಲಿಯೂ ಇವೆ.

ಸದಸ್ಯ ರಾಷ್ಟ್ರಗಳು ಯಾವುವು?

ಭಾರತ, ಅಮೆರಿಕ, ಆಸ್ಟ್ರೇಲಿಯಾ, ಬ್ರೂನೈ, ಇಂಡೊನೇಷ್ಯಾ, ಜಪಾನ್, ದಕ್ಷಿಣ ಕೊರಿಯಾ, ಮಲೇಷ್ಯಾ, ನ್ಯೂಜಿಲೆಂಡ್, ಫಿಲಿಪ್ಪೀನ್ಸ್, ಥಾಯ್ಲೆಂಡ್ ಮತ್ತು ವಿಯೆಟ್ನಾಂ

ಜಬ್ಬಾರ್, ಯಾದವ್‌ಗೆ ಕಾಂಗ್ರೆಸ್ ಟಿಕೆಟ್

ವಿಧಾನ ಪರಿಷತ್ ಚುನಾವಣೆ: ರಾಜ್ಯ ಮುಖಂಡರಿಗೆ ಹಿನ್ನಡೆ

ನವದೆಹಲಿ: ಕರ್ನಾಟಕದ ವಿಧಾನ ಸಭೆಯಿಂದ ವಿಧಾನ ಪರಿಷತ್ ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಅಭ್ಯರ್ಥಿಗಳನ್ನಾಗಿ ಕೆ.ಅಬ್ದುಲ್ ಜಬ್ಬಾರ್ ಹಾಗೂ ಎಂ.ನಾಗರಾಜು ಯಾದವ್ ಹೆಸರು ಪ್ರಕಟಿಸುವ ಮೂಲಕ ಕಾಂಗ್ರೆಸ್ ಹೈಕಮಾಂಡ್ ಅಚ್ಚರಿ ಮೂಡಿಸಿದೆ.

ತಾವು ಸೂಚಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂದು ಪರಸ್ಪರ ಮೇಲಾಟ ನಡೆಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಹೈಕಮಾಂಡ್‌ನ ಈ ನಡೆಯಿಂದ ತೀವ್ರ ಹಿನ್ನಡೆ ಆಗಿದೆ ಎಂದು ಪಕ್ಷದ ವಲಯದಲ್ಲಿ ವ್ಯಾಖ್ಯಾನಿಸಲಾಗಿದೆ.

ಕೆ.ಅಬ್ದುಲ್ ಜಬ್ಬಾರ್

ನಾಗರಾಜು ಯಾದವ್

6ನೇ ಪುಟ ನೋಡಿ

ಉಕ್ಕಿನ ಬೆಲೆ ಶೇ 15ರವರೆಗೆ ಇಳಿಕೆ ಸಾಧ್ಯತೆ

ನವದೆಹಲಿ (ಪಿಟಿಐ): ದೇಶಿ ಮಾರುಕಟ್ಟೆಯಲ್ಲಿ ಉಕ್ಕಿನ ಬೆಲೆಯು ಶೇಕಡ 10ರಿಂದ ಶೇ 15ರವರೆಗೂ ಇಳಿಕೆ ಆಗುವ ಸಾಧ್ಯತೆ ಇದೆ ಎಂದು ಎಂಜಿನಿಯರಿಂಗ್ ರಫ್ತು ಉತ್ತೇಜನ ಮಂಡಳಿ (ಇಇಪಿಸಿ) ಸೋಮವಾರ ಹೇಳಿದೆ.

ಕೆಲವು ಉಕ್ಕು ಉತ್ಪನ್ನಗಳ ರಫ್ತಿನ ಮೇಲೆ ಸುಂಕ ಹೆಚ್ಚಿಸಿರುವ ಕೇಂದ್ರ ಸರ್ಕಾರದ ನಿರ್ಧಾರದ ಬಗ್ಗೆ ಮಂಡಳಿಯ ಭಾರತದ ಅಧ್ಯಕ್ಷ ಮಹೇಶ್ ದೇಸಾಯಿ ಸೋಮವಾರ ಪ್ರತಿಕ್ರಿಯೆ ನೀಡಿದ್ದಾರೆ.

'ಎಂಜಿನಿಯರಿಂಗ್ ಸರಕುಗಳ ತಯಾರಕರು ಮತ್ತು ರಫ್ತುದಾರರಿಗೆ ಇದರಿಂದ ಪ್ರಯೋಜನ ಆಗಲಿದೆ. ದೇಶಿ ಕಂಪನಿಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಇನ್ನಷ್ಟು ಸ್ಪರ್ಧಾತ್ಮಕ ಆಗಲು ಸಾಧ್ಯವಾಗಲಿದೆ' ಎಂದಿದ್ದಾರೆ. ಉಕ್ಕು ಉದ್ಯಮದಲ್ಲಿ ಬಳಸುವ ಕೋಕಿಂಗ್ ಕಲ್ಲಿದ್ದಲು ಮತ್ತು ಫೆರಾನಿಕಲ್ ಮೇಲಿನ ಆಮದು ಸುಂಕವನ್ನು ಸರ್ಕಾರ ತೆಗೆದು ಹಾಕಿದೆ. ಕಬ್ಬಿಣದ ಅದಿರು ರಫ್ತು ಸುಂಕವನ್ನು ಶೇ 50ಕ್ಕೆ ಹೆಚ್ಚಿಸಿದೆ.

11ನೇ ಪುಟ ನೋಡಿ

ಚಕ್ರತೀರ್ಥ ಸಮಿತಿಗೆ ಪಿಯು ಪಠ್ಯ ಪರಿಷ್ಕರಣೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿಯ ಇತಿಹಾಸ ವಿಷಯದ ಪಠ್ಯಪುಸ್ತಕ ಪರಿಷ್ಕರಣೆಗೆ ಶಿಕ್ಷಣ ಇಲಾಖೆ ಚಾಲನೆ ನೀಡಿದೆ. ಪರಿಷ್ಕರಣೆಯ ಕಾರ್ಯವನ್ನು ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿಗೆ ವಹಿಸಲಾಗಿದೆ.

ಶಾಲಾ ಪಠ್ಯಪುಸ್ತಕಗಳ ವಿವಾದದ ಬೆನ್ನಲ್ಲೇ ಶಿಕ್ಷಣ ಇಲಾಖೆ ಈ ಕ್ರಮ ಕೈಗೊಂಡಿರುವುದು ಚರ್ಚೆಗೆ ಗ್ರಾಸವಾಗಿದೆ. ದ್ವಿತೀಯ ಪಿಯುಸಿ ಕಲಾ ವಿಭಾಗದ ಭಾರತದ ಇತಿಹಾಸ ಅಧ್ಯಯನ ಪಠ್ಯ ಪುಸ್ತಕದ ಪರಿಷ್ಕರಣೆಯನ್ನು ಕೈಗೊಳ್ಳುವಂತೆ ಸಮಿತಿಗೆ ಸೂಚಿಸಲಾಗಿದೆ.

ಕರ್ನಾಟಕದ ಬಗ್ಗೆ ವಿಶೇಷ ಉಲ್ಲೇಖ ಇರುವ ಭಾರತದ ಇತಿಹಾಸ ಅಧ್ಯಾಯದ 4.2 ರ 'ಹೊಸ ಧರ್ಮಗಳ ಉದಯ' ಪಠ್ಯಭಾಗವನ್ನು ಪರಿಷ್ಕರಣೆ ಕೈಗೊಳ್ಳುವಂತೆ ಇದೇ ವರ್ಷ ಫೆಬ್ರುವರಿ 17 ರಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಶಿಕ್ಷಣ ಸಚಿವ ಬಿ. ಸಿ. ನಾಗೇಶ್ ಪತ್ರ ಬರೆದಿದ್ದರು.

'ದ್ವಿತೀಯ ಪಿಯುಸಿ ಇತಿಹಾಸ ವಿಭಾಗಕ್ಕೆ ನಿಗದಿಪಡಿಸಿದ ಹೊಸ ಧರ್ಮಗಳ ಉದಯ ಪಠ್ಯದಲ್ಲಿ ನಿರ್ದಿಷ್ಟ ಸಮುದಾಯಗಳ ಭಾವನೆಗಳಿಗೆ ಧಕ್ಕೆಯಾಗುವಂತಹ ವಿಷಯಗಳಿರುವ ಬಗ್ಗೆ ದೂರುಗಳು ಬಂದಿವೆ. ಈ ಪಠ್ಯಭಾಗವನ್ನು ಪರಿಶೀಲಿಸಿ ಸೂಕ್ತವಾಗಿ ಪರಿಷ್ಕರಿಸುವ ಹೊಣೆಗಾರಿಕೆಯನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಗೆ ವಹಿಸಬೇಕು ಹಾಗೂ ಪರಿಷ್ಕೃತ ಪಠ್ಯಪುಸ್ತಕವನ್ನು 2022–23 ನೇ ಸಾಲಿನಲ್ಲಿ ಮುದ್ರಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸಚಿವರು ಪತ್ರದಲ್ಲಿ ಉಲ್ಲೇಖಿಸಿದ್ದರು.

ಸಚಿವರ ಪತ್ರಕ್ಕೆ ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಸಕಾರಾತ್ಮಕವಾಗಿ ಉತ್ತರ ನೀಡಿದ್ದರು. ಸಚಿವರ ಸೂಚನೆಯಂತೆ ದ್ವಿತೀಯ ಪಿಯುಸಿ ಇತಿಹಾಸ ಪಠ್ಯಪುಸ್ತಕ ರಚನಾ ಸಮಿತಿಗೆ ಮಾಹಿತಿ ಸಲ್ಲಿಸಿ ಅಭಿಪ್ರಾಯ ಕೋರಿದ್ದರು. ಈ ಬಗ್ಗೆ ಚರ್ಚಿಸಿದ್ದ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು, ಪ್ರಸ್ತಾಪಿಸಿರುವ ಅಂಶಗಳಲ್ಲಿ ಯಾವುದೇ ವಿವಾದಿತ ಅಂಶಗಳಿಲ್ಲ. ಆದರೆ, ಇಲಾಖೆ ಈ ಅಂಶಗಳ ಬಗ್ಗೆ ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಸಮಿತಿಯು ಅಭ್ಯಂತರ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದರು.

ಈ ವಿಷಯವನ್ನು ಉಲ್ಲೇಖಿಸಿ ಸಚಿವರಿಗೆ ಪತ್ರ ಬರೆದಿದ್ದ ನಿರ್ದೇಶಕರು, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಆಧರಿಸಿ ಪಠ್ಯಕ್ರಮ ರಚಿಸಲಾಗುವುದು. ಯಾವುದೇ ವಿವಾದಿತ ಅಂಶಗಳಿಲ್ಲದಂತೆ ಕ್ರಮಕೈಗೊಳ್ಳಲಾಗುವುದು' ಎಂದು ತಿಳಿಸಿದ್ದರು.

6ನೇ ಪುಟ ನೋಡಿ

'ಗಾಂಧಿ, ಕುವೆಂಪು ಪಾಠ ಬಿಟ್ಟಿದ್ದ ಬರಗೂರು'

ಬೆಂಗಳೂರು: ಪಠ್ಯದಲ್ಲಿ ನೈಜ ಇತಿಹಾಸ ಬಿಂಬಿಸಿದ್ದೇವೆ. ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ಯವರು ಮಹಾತ್ಮ ಗಾಂಧಿ, ಬಾಬಾ ಸಾಹೇಬ್ ಅಂಬೇಡ್ಕರ್, ಮೈಸೂರು ಮಹಾರಾಜರು, ಸಂಗೊಳ್ಳಿ ರಾಯಣ್ಣ, ರಾಣಿ ಅಬ್ಬಕ್ಕ, ಮದಕರಿ ನಾಯಕ, ಕುವೆಂಪು ಮುಂತಾದ ಮಹನೀಯರ ಪಾಠಗಳನ್ನು ಕೈ ಬಿಟ್ಟಿದ್ದರು. ಆ ಅನ್ಯಾಯ ಸರಿಪಡಿಸುವ ಕೆಲಸ ಮಾಡಿದ್ದೇವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಈಗ ಪಠ್ಯ ಪುಸ್ತಕದ ಬ್ರಾಹ್ಮಣೀಕರಣ ಆಗಿದೆ ಎಂದು ಪ್ರಗತಿಪರರು ಮತ್ತು ಕಾಂಗ್ರೆಸ್‌ನವರು ಹುಯಿಲೆಬ್ಬಿಸಿದ್ದಾರೆ. ಬರಗೂರು ಪರಿಷ್ಕರಿಸಿದ ಪಠ್ಯಪುಸ್ತಕಗಳಲ್ಲಿ 19 ಜನ ಬ್ರಾಹ್ಮಣ ಲೇಖಕರ ಪಠ್ಯಗಳಿದ್ದವು. ಹಾಗಿದ್ದರೆ, ಅದು ಬ್ರಾಹ್ಮಣ್ಯವಲ್ಲವೇ? ಪ್ರಗತಿಪರರ ಕಣ್ಣಿಗೆ ಅದೇಕೆ ಕಾಣಿಸಿಲ್ಲ? ಲೇಖಕರಿಗೆ ಜಾತಿಹಣೆ ಪಟ್ಟಿ ಹಚ್ಚುವುದು ಸರಿಯಲ್ಲ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

6ನೇ ಪುಟ ನೋಡಿ

ಜ್ಞಾನವಾಪಿ ಮಸೀದಿ: ಇಂದು ಕೋರ್ಟ್ ಆದೇಶ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದಂತೆ ಹಿಂದೂಗಳು ಸಲ್ಲಿಸಿದ ಅರ್ಜಿಯನ್ನು ಮೊದಲು ವಿಚಾರಣೆ ನಡೆಸಬೇಕೇ ಅಥವಾ ಮುಸ್ಲಿಮರು ಸಲ್ಲಿಸಿರುವ ಅರ್ಜಿಯನ್ನು ಮೊದಲು ವಿಚಾರಣೆಗೆ ಒಳಪಡಿಸಬೇಕೇ ಎಂಬುದರ ಬಗ್ಗೆ ವಾರಾಣಸಿ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಮಂಗಳವಾರ ಆದೇಶ ನೀಡಲಿದೆ.

'ಜ್ಞಾನವಾಪಿ ಮಸೀದಿಯಲ್ಲಿ ದೇವತೆಗಳ ವಿಗ್ರಹಗಳಿವೆ. ಅವುಗಳ ಪೂಜೆಗೆ ಅವಕಾಶ ಕಲ್ಪಿಸಿ' ಎಂದು ಹಿಂದೂ ಮಹಿಳೆಯರು ಸಲ್ಲಿಸಿರುವ ಸಿವಿಲ್ ಅರ್ಜಿಯು ನ್ಯಾಯಾಲಯದ ಮುಂದೆ ಇದೆ. ಮಸೀದಿಯಲ್ಲಿ ಹಲವು ದಶಕಗಳಿಂದ ನಮಾಜ್ ಮಾಡಲಾಗುತ್ತಿದೆ. 1991ರ ಪೂಜಾ ಸ್ಥಳಗಳ ಕಾಯ್ದೆಯ ಅನ್ವಯ ಮಸೀದಿಯ ಮೇಲೆ ಸಿವಿಲ್ ದಾವೆ ಹೂಡಲು ಸಾಧ್ಯವಿಲ್ಲ. ಹೀಗಾಗಿ ಹಿಂದೂಗಳ ಅರ್ಜಿಯನ್ನು ತಕ್ಷಣವೇ ವಜಾ ಮಾಡಬೇಕು ಎಂದು ಜ್ಞಾನವಾಪಿ ಮಸೀದಿ ನಿರ್ವಹಣೆಯ ಹೊಣೆ ಹೊತ್ತಿರುವ ಅಂಜುಮಾನ್ ಇಂತೆ ಝಾಮಿಯಾ ಸಮಿತಿಯು ಸಲ್ಲಿಸಿರುವ ಮತ್ತೊಂದು ಅರ್ಜಿಯು ಜಿಲ್ಲಾ ನ್ಯಾಯಾಲಯದ ಮುಂದೆ ಇದೆ.

ಈ ಎರಡೂ ಅರ್ಜಿಗಳನ್ನು ಮೊದಲು ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಲಾಗಿತ್ತು. ಮಸೀದಿಯಲ್ಲಿ ವಿಡಿಯೊ ಸಮೀಕ್ಷೆ ನಡೆಸುವಂತೆ ಸಿವಿಲ್ ನ್ಯಾಯಾಲಯವು ಆದೇಶಿಸಿತ್ತು. ಇದಕ್ಕಾಗಿ ನ್ಯಾಯಾಲಯ ಕಮಿಷನ್ ಅನ್ನು ನೇಮಿಸಿತ್ತು. ಈ ಆದೇಶದ ವಿರುದ್ಧ ಮಸೀದಿ ಸಮಿತಿಯು ಅಲಹಾಬಾದ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಅದು ತಿರಸ್ಕೃತವಾಗಿತ್ತು. ಆನಂತರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ಈ ಮಧ್ಯೆ, ನ್ಯಾಯಾಲಯವು ನೇಮಿಸಿದ್ದ ಕಮಿಷನ್ ಮಸೀದಿಯಲ್ಲಿ ಸಮೀಕ್ಷೆ ನಡೆಸಿತ್ತು. ಸಮೀಕ್ಷೆಯ ವಿವರಗಳು ಸೋರಿಕೆಯಾಗಿದ್ದವು. ಮಸೀದಿಯ ಕೊಳದಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂದು ಹೇಳಲಾಗಿತ್ತು. ವರದಿ ಸಲ್ಲಿಕೆಯಾಗುವುದಕ್ಕೆ ಮುನ್ನವೇ ಸಿವಿಲ್ ನ್ಯಾಯಾಲಯವು, ಶಿವಲಿಂಗ ಪತ್ತೆಯಾಗಿದೆ ಎಂದು ಹೇಳಲಾದ ಸ್ಥಳದಲ್ಲಿ ನಿರ್ಬಂಧ ವಿಧಿಸಿತ್ತು.

4Bನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ರೋಹಿತ್ ಚಕ್ರತೀರ್ಥ ವಜಾಕ್ಕೆ ಆಗ್ರಹ 6
ವಿನಯ್ ಸಕ್ಸೇನಾ ದೆಹಲಿಯ ನೂತನ ಲೆ.ಗವರ್ನರ್ 6
ಸಾಮಾಜಿಕ ಮಾಧ್ಯಮಗಳಲ್ಲಿ 'ಯೋಗದಿನ' ನೇರ ಪ್ರಸಾರ 10
ಶ್ರೀಲಂಕಾದಲ್ಲಿ ನೂತನ ಸಚಿವ ಸಂಪುಟ ವಿಸ್ತರಣೆ 11

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099. ದೂ.: 080–27835122
ಫ್ಯಾಕ್ಸ್: 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಸಾ.ಪ್ರ/01/2022–23 ದಿನಾಂಕ: 21.05.2022

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 72 ಬೆಂರೂಪ್ರಾ 2003, ದಿನಾಂಕ: 03.03.2006ರಂದು ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016ರಲ್ಲಿ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಲುವಾಗಿ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ 170 ಗ್ರಾಮಗಳ ಪೈಕಿ 47 ಗ್ರಾಮಗಳನ್ನು ಹಿಂಪಡೆದಿದ್ದು, ಪ್ರಸ್ತುತ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ 123 ಗ್ರಾಮಗಳನ್ನು ಒಳಗೊಂಡಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ದಿನಾಂಕ: 03.09.2014ರಲ್ಲಿ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ–2021ಅನ್ನು ಅನುಮೋದಿಸಲಾಗಿರುತ್ತದೆ.

ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಭೂ ಪರಿವರ್ತಿತ ಜಮೀನುಗಳನ್ನು ಅಭಿವೃದ್ಧಿಪಡಿಸುವ ಮುಂಚೆ ಅಂದರೆ ವಿನ್ಯಾಸ ಅಭಿವೃದ್ಧಿ, ಕಟ್ಟಡಗಳ ನಿರ್ಮಾಣ ಮುಂತಾದ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರಡಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಖಾಸಗಿಯವರು ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಕ್ರಯಕ್ಕೆ ಪಡೆಯುವ ಮೊದಲು ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ಆಗಿರುವ ಕುರಿತು ಖಚಿತಪಡಿಸಿಕೊಂಡು ಖರೀದಿಸಲು ತಿಳಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ/ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ಪ್ರಾಧಿಕಾರದ / ಸ್ಥಳೀಯ ಸಂಸ್ಥೆಯ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರಿಂದ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಲಾಗುವುದು ಹಾಗೂ ಸದರಿ ಮೂಲ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ.

ಈ ಪ್ರಾಧಿಕಾರದಿಂದ ಅನುಮೋದನೆಯಾಗದ ವಿನ್ಯಾಸಗಳನ್ನು ಹಾಗೂ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ನಿವೇಶನಗಳನ್ನು ಬಿಡುಗಡೆ ಪಡೆಯದ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಅನುಮೋದಿತ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿರುವ ರಸ್ತೆಗಳು, ಉದ್ಯಾನವನ ಹಾಗೂ ಬಯಲು ಪ್ರದೇಶ ಮತ್ತು ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗಗಳು ಸಾರ್ವಜನಿಕ ಆಸ್ತಿಗಳಾಗಿದ್ದು, ಅವುಗಳನ್ನು ಅತಿಕ್ರಮಿಸುವುದು, ಅನಧಿಕೃತವಾಗಿ ಬಳಸುವುದು ಕಾನೂನು ಬಾಹಿರವಾಗಿರುತ್ತದೆ. ಆದ ಕಾರಣ ಅವುಗಳನ್ನು ಅತಿಕ್ರಮಿಸಿದಲ್ಲಿ ಅಥವಾ ಅನಧಿಕೃತವಾಗಿ ಉಪಯೋಗಿಸುತ್ತಿದ್ದಲ್ಲಿ ಕೂಡಲೇ ಸ್ವಯಂ ತೆರವುಗೊಳಿಸಿಕೊಳ್ಳಲು ತಿಳಿಸಲಾಗಿದೆ.

ಈ ಮೇಲ್ಕಂಡ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/624/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಜೀವನ್ಮುಖಿ ಪ್ರಶಸ್ತಿ’ಗೆ ನಾಲ್ವರು ಆಯ್ಕೆ

ಬೆಂಗಳೂರು: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯು ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆ ಸಹಯೋಗದಲ್ಲಿ ನೀಡುತ್ತಿರುವ 11ನೇ ವರ್ಷದ ‘ಜೀವನ್ಮುಖಿ’ ಪ್ರಶಸ್ತಿಗೆ ನಾಲ್ವರು ಆಯ್ಕೆಯಾಗಿದ್ದಾರೆ.

‘ಸಾಹಿತಿ ಗೊ.ರು.ಚನ್ನಬಸಪ್ಪ, ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ, ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ ಇಲಾಖೆಯ ಪೂರ್ವ ವಲಯದ ಉಪ ಆಯುಕ್ತ ಎಸ್. ಶಶಿಕಿರಣ್, ಸಮಾಜ ಸೇವಕ ಬಿ.ಎಂ. ಶಶಿಧರ್ ಅವರನ್ನು 2022ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದೇ 29ರಂದು ಪ್ರಶಸ್ತಿ ನೀಡಲಾಗುವುದು.

ಕ್ಷೇಮ ಕುಶಲ ಓದಿರಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 14/MYS/2022
ದಿನಾಂಕ: 18.05.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	**ಉಪ ಕಾಮಗಾರಿ–I:** ಮೈಸೂರು ನಿಲ್ದಾಣ– ಪ್ಲಾಟ್‌ಫಾರ್ಮ್ ಸಂಖ್ಯೆ 1, 2 & 3, 4 & 5 ಮತ್ತು 6 ರಲ್ಲಿ ಪಿಎಫ್ ಶೆಲ್ಟರ್‌ಗೆ ದುರಸ್ತಿ ಮತ್ತು ಬಣ್ಣ ಹಚ್ಚುವುದು. **ಉಪ ಕಾಮಗಾರಿ–II:** ಮೈಸೂರು ನಿಲ್ದಾಣ– ಪ್ಲಾಟ್‌ಫಾರ್ಮ್ ಸಂಖ್ಯೆ 1& 2 ರಲ್ಲಿ ಎಫ್‌ಓಬಿ ಮೆಟ್ಟಿಲುಗಳ ದುರಸ್ತಿ. **ಉಪ ಕಾಮಗಾರಿ–III:** ಮೈಸೂರು ನಿಲ್ದಾಣ– ಮೈಸೂರು ನಿಲ್ದಾಣದ ಕಟ್ಟಡದ ಮುಂಭಾಗದ ಕಾರಿಡಾರ್ ಮತ್ತು ಪೋರ್ಟಿಕೋ ದುರಸ್ತಿ. **ಉಪ ಕಾಮಗಾರಿ–IV:** ಮೈಸೂರು ನಿಲ್ದಾಣ– ಸಹಾಯಕರ ವಿಶ್ರಾಂತಿ ಕೊಠಡಿಯ ಪ್ರಸ್ತಾವಿತ ನಿರ್ಮಾಣ.	ರೂ. 1,74,52,253/-
2	ಹಾಸನ–ಮಂಗಳೂರು: ಕಬಕ ಪುತ್ತೂರು ಸ್ಟೇಷನ್ ಯಾರ್ಡ್ ನ ಕಿ.ಮೀ. 139/100–200 ರಲ್ಲಿರುವ ಮಾನವಸಹಿತ ಲೆವೆಲ್ ಕ್ರಾಸಿಂಗ್ ಸಂಖ್ಯೆ 105 ರ ಸ್ಥಾನದಲ್ಲಿ 29.15 ಎಂ ಪಿಎಸ್‌ಸಿ ಸ್ಲ್ಯಾಬ್ ನಿಂದ ಸೇತುವೆ ಕೆಳ ರಸ್ತೆಯ ಉದ್ದೇಶಿತ ನಿರ್ಮಾಣ.	ರೂ. 11,42,33,543/-
3	ಹಾಸನ–ಮಂಗಳೂರು ವಿಭಾಗ: ಸುಬ್ರಹ್ಮಣ್ಯ ರಸ್ತೆಯಿಂದ ಕಬಕ ಪುತ್ತೂರು ನಿಲ್ದಾಣಗಳ ನಡುವೆ ಕಿಮೀ 98.00 ರಿಂದ 139.000 ವರೆಗಿನ ಪ್ರತ್ಯೇಕ ಸ್ಥಳದಲ್ಲಿ ಹಾನಿಗೊಳಗಾದ / ಮುರಿದ ಪಿಎಸ್‌ಸಿ ಸ್ಲೀಪರ್‌ಗಳ ನವೀಕರಣ.	ರೂ. 1,68,36,384/-
4	**ಉಪ ಕಾಮಗಾರಿ–I:** ಕೃಷ್ಣರಾಜನಗರ– ಕೃಷ್ಣರಾಜನಗರದಲ್ಲಿ 2 ಬುಕಿಂಗ್ ಕೌಂಟರ್‌ಗಳು, ಸ್ಟೋರ್ ರೂಂ ಮತ್ತು ಅಟ್ಯಾಚ್ಡ್ ಶೌಚಾಲಯದೊಂದಿಗೆ ಬುಕ್ಕಿಂಗ್ ಕಚೇರಿಯ ವಿಸ್ತರಣೆ. **ಉಪ ಕಾಮಗಾರಿ II:** ಹಾಸನ–ಸಿ ಮತ್ತು ಡಬ್ಲ್ಯೂ ನಿರ್ವಹಣೆ ಚಟುವಟಿಕೆಗಳಿಗಾಗಿ ಸೇವಾ ಕೊಠಡಿಯ ನಿರ್ಮಾಣ.	ರೂ. 38,80,203/-
5	**ಉಪ ಕಾಮಗಾರಿ–I:** ಸಕಲೇಶಪುರ – ಎಸ್‌ಎಸ್‌ಇ/ವರ್ಕ್ಸ್/ಕಚೇರಿ ನಿರ್ಮಾಣ. **ಉಪ ಕಾಮಗಾರಿ–II:** ಸಕಲೇಶಪುರ – ಕ್ಯಾಂಟೀನ್ ಅನ್ನು ಸರಿಯಾಗಿ ಸ್ಥಳಾಂತರಿಸಿ ಬುಕಿಂಗ್ ಆಫೀಸ್ ಅನ್ನು ಪಕ್ಕದ ಕ್ಯಾಂಟೀನ್ ಸ್ಥಳಕ್ಕೆ ಸ್ಥಳಾಂತರಿಸುವುದು . **ಉಪ ಕಾಮಗಾರಿ–III:** ಸಕಲೇಶಪುರ – ಪಿಎಫ್ ಸಂಖ್ಯೆ 2 ರಲ್ಲಿ ಪಿಎಫ್ ಶೆಲ್ಟರ್ ಒದಗಿಸುವುದು. **ಉಪ ಕಾಮಗಾರಿ–IV:** ಸಕಲೇಶಪುರ – ಪಿಎಫ್ ನಂ. 1 ನಲ್ಲಿ ಅಡುಗೆ ಸ್ಟಾಲ್ ನಿರ್ಮಾಣ. **ಉಪ ಕಾಮಗಾರಿ-V:** ಸಕಲೇಶಪುರ – ಸಿಕ್ ಲೈನ್ ಶೆಡ್‌ನ ಹಾನಿಗೊಳಗಾದ ನೆಲಹಾಸುಗಳನ್ನು ಸುಧಾರಿಸುವುದು. **ಉಪ ಕಾಮಗಾರಿ–VI:** ಸುಬ್ರಹ್ಮಣ್ಯ ರಸ್ತೆ – ಪಿಎಫ್ ಸಂಖ್ಯೆ 2 ರಲ್ಲಿ ಐಆರ್‌ಎಸ್ ಪಿಎಫ್ ಶೆಲ್ಟರ್ ಒದಗಿಸುವುದು (ಉದ್ದ 32.0ಮೀ x 7.0 ಮೀ ಅಗಲ) (2 ಬೇಗಳು).	ರೂ. 1,05,71,553/-
6	ಸೇತುವೆ ಸಂಖ್ಯೆ 706ಎ ಲೋಕಪಾವನಿ, ಸೇತುವೆ ಸಂಖ್ಯೆ 725ಎ ಕಾವೇರಿ ಉತ್ತರ, ಸೇತುವೆ ಸಂಖ್ಯೆ 726ಎ, ಕಾವೇರಿ ದಕ್ಷಿಣ, ಸೇತುವೆ ಸಂಖ್ಯೆ 104ಎ ಯುಟಿಪಿಗಾಗಿ ಪ್ಲಾಟ್‌ಫಾರ್ಮ್‌ನ ಪರಿಶೀಲನೆಯನ್ನು ಒದಗಿಸುವುದು.	ರೂ. 2,97,02,957/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09–06–2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನೀಯರ್/ಕೋ–ಆರ್ಡ್ ಮೈಸೂರು
PUB/101/AAV/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 08/SBC/22
ದಿನಾಂಕ: 19.05.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಪೆನುಕೊಂಡ–ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ–ಧರ್ಮಾವರಂ: ಸಹಾಯಕ ವಿಭಾಗೀಯ ಇಂಜಿನೀಯರ್/ ಹಿಂದೂಪುರ ಉಪ ವಿಭಾಗದಲ್ಲಿ ಕಿ.ಮೀ 21/500–800 ರಲ್ಲಿ ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ–ಕೊತ್ತಚೆರುವು ನಿಲ್ದಾಣಗಳ ನಡುವೆ ಬಂಡೆಗಲ್ಲು ಬೀಳುವ ಸ್ಥಳಗಳಲ್ಲಿ ರಾಕ್ ಬೋಲ್ಟಿಂಗ್, ತಂತಿ ಜಾಲರಿ ಸರಿಪಡಿಸುವುದು ಮತ್ತು ಶಾಟ್‌ಕ್ರೆಟಿಂಗ್ ವಿಧಾನದ ಮೂಲಕ ಸುರಂಗದ ಉದ್ದೇಶಿತ ದುರಸ್ತಿ. ನಿರ್ವಹಣಾ ಅವಧಿಯು 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ಮೊದಲಾಗುವುದೋ ಅದು.	ರೂ. 3,79,38,702/-
2	ಯಶವಂತಪುರ: ಸಹಾಯಕ ವಿಭಾಗೀಯ ಇಂಜಿನೀಯರ್ / ಯಶವಂತಪುರ ಉಪ ವಿಭಾಗದಲ್ಲಿ ತುಮಕೂರು ಕಡೆಗೆ ಪ್ಲಾಟ್‌ಫಾರ್ಮ್ 4/5 ಗಳಲ್ಲಿ ಮೇಲಕ್ಕೆ ಮತ್ತು ಕೆಳಕ್ಕೆ ಎಸ್ಕಲೇಟರ್‌ಗಳನ್ನು ಒದಗಿಸುವುದು.	ರೂ. 63,87,282/-
3	ಸಹಾಯಕ ವಿಭಾಗೀಯ ಇಂಜಿನೀಯರ್/ಹಿಂದೂಪುರ ಉಪ ವಿಭಾಗ: ಹಿಂದೂಪುರ, ಗೌರಿಬಿದನೂರು, ಪೆನುಕೊಂಡ, ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ, ದೊಡ್ಡಬಳ್ಳಾಪುರ, ವಿದುರಾಶ್ವತ್ಥ ಮತ್ತು ಒಡ್ಡರಹಳ್ಳಿ ನಿಲ್ದಾಣಗಳಲ್ಲಿ ಉದ್ದೇಶಿತ ಬೋರ್‌ವೆಲ್ ಮತ್ತು ನೀರಿನ ಪೈಪ್‌ಲೈನ್. ನಿರ್ವಹಣೆ ಅವಧಿ 3 ತಿಂಗಳುಗಳು.	ರೂ. 45,24,254/-
4	"ಹಿರಿಯ ಸೆಕ್ಷನ್ ಇಂಜಿನೀಯರ್ /ಪಿವೇ/ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ ವಿಭಾಗದಲ್ಲಿ "ಪ್ರಮಾಣಿತ ಅಗಲವನ್ನು ಒದಗಿಸುವ ಮೂಲಕ ಬ್ಯಾಂಕ್ ಅನ್ನು ಬಲಪಡಿಸುವುದು ಮತ್ತು 10.10 ಕಿಮೀ ಉದ್ದದ ಒಳಚರಂಡಿಯನ್ನು ಸುಧಾರಿಸುವ ಕಾಮಗಾರಿಗೆ ಸಂಬಂಧಿಸಿದಂತೆ" ಚರಂಡಿಯ (100 ಮೀ) ನಿರ್ಮಾಣ. ನಿರ್ವಹಣೆ ಅವಧಿ 3 ತಿಂಗಳುಗಳು.	ರೂ. 46,25,055/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–06–2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನೀಯರ್/ಕೋ–ಆರ್ಡ್ ಬೆಂಗಳೂರು
PUB/104/AAV/PRB/SWR/2022-23
S.W.Railways SWRRLY SWRRLY

ಕೆಂಪೇಗೌಡ ಬಡಾವಣೆ: ಬಿಡಿಎ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ಸೂಚನೆ

ಕಾಮಗಾರಿ ತ್ವರಿತಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೊಳ್ಳುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಅವರು ಬಿಡಿಎ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಬಿಡಿಎ ಅಧಿಕಾರಿಗಳೊಂದಿಗೆ ಬಡಾವಣೆಯ ಕಾಮಗಾರಿಯನ್ನು ಸೋಮವಾರ ಪರಿಶೀಲನೆ ನಡೆಸಿ ಮಾತನಾಡಿದ ಅವರು, ‘ಕೋವಿಡ್ ಮತ್ತು ಇತರೆ ಕಾರಣಗಳಿಂದ ಬಡಾವಣೆ ಕಾಮಗಾರಿಗೆ ಹಿನ್ನಡೆ ಉಂಟಾಗಿತ್ತು. ಇದೀಗ ಪರಿಸ್ಥಿತಿ ಸುಧಾರಣೆಯಾಗಿದ್ದು, ಕಾಮಗಾರಿಗಳನ್ನು ಕ್ಷಿಪ್ರ ಗತಿಯಲ್ಲಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಲಾಗಿದೆ’ ಎಂದು ತಿಳಿಸಿದರು.

ಬಡಾವಣೆಯ ಬಹುತೇಕ ಬ್ಲಾಕ್‌ಗಳಲ್ಲಿ ವಿದ್ಯುತ್ ಸಂಪರ್ಕ ಜಾಲ, ಒಳಚರಂಡಿ ಸೇರಿದಂತೆ ಇನ್ನಿತರೆ ಸಂಪರ್ಕ ಜಾಲಗಳ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದೆ. ಇನ್ನೂ ಕೆಲವು ಬ್ಲಾಕ್‌ಗಳಲ್ಲಿ ಕಾಮಗಾರಿ ಚಾಲ್ತಿಯಲ್ಲಿದೆ ಎಂದರು.

ಬಡಾವಣೆಯಲ್ಲಿ ನಿವೇಶನ ಪಡೆದಿರುವ ನಾಗರಿಕರು ತಮ್ಮ ಕನಸಿನ ಸೂರನ್ನು ಕಟ್ಟಿಕೊಳ್ಳಲು ಮುಂದೆ ಬಂದರೆ ಅವರಿಗೆ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಬಡಾವಣೆ ನಿರ್ಮಾಣಕ್ಕೆ ಯಾವುದೇ ರೀತಿಯ ಹಣಕಾಸಿನ ತೊಂದರೆ ಇಲ್ಲ. ಗುತ್ತಿಗೆದಾರರಿಗೆ ನೀಡಬೇಕಿರುವ ಹಣ ಮಂಜೂರಿಗೆ ಸದ್ಯದಲ್ಲಿಯೇ ಕ್ರಮ ವಹಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಬಡಾವಣೆ ಅಭಿವೃದ್ಧಿ ಕಾಮಗಾರಿ ಯನ್ನು ಮತ್ತಷ್ಟು ಚುರುಕುಗೊಳಿಸಬೇಕೆಂದು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿರುವುದಾಗಿ ಹೇಳಿದರು.

ಬಡಾವಣೆಯ ಅಭಿವೃದ್ಧಿ ಗುತ್ತಿಗೆ ಪಡೆದಿರುವ ಒಂದೆರಡು ಕಂಪನಿಗಳು ಕಾಮಗಾರಿ ನಡೆಸಲು ವಿಳಂಬ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಅಂತಹ ಕಂಪನಿಗಳಿಗೆ ಎಚ್ಚರಿಕೆ ನೀಡಿ, ಗುತ್ತಿಗೆಯನ್ನು ರದ್ದು ಮಾಡಿ ಬೇರೆ ಕಂಪನಿಗೆ ವಹಿಸುವ ಬಗ್ಗೆ ಸದ್ಯದಲ್ಲಿಯೇ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ, ಎಂಜಿನಿಯರಿಂಗ್ ಸದಸ್ಯ ಡಾ.ಶಾಂತರಾಜಣ್ಣ, ಕಾರ್ಯದರ್ಶಿ ಆನಂದ್, ಉಪ ಆಯುಕ್ತೆ ಡಾ.ಸೌಜನ್ಯ ಸೇರಿದಂತೆ ಅಧಿಕಾರಿಗಳು ಇದ್ದರು.

ಸಾಹಿತಿ ಎಚ್‌.ಎಸ್‌.ವೆಂಕಟೇಶಮೂರ್ತಿ ಅಭಿಮತ

ಹೊಸ ದಿಕ್ಕು ತೋರುವ ‘ದೇಸಿ ದರ್ಶನ ಮಾಲೆ’

ಪ್ರಜಾವಾಣಿ ವಾರ್ತೆ

ಎಚ್‌.ಎಸ್‌.ವೆಂಕಟೇಶಮೂರ್ತಿ (ಮಧ್ಯ) ಪುಸ್ತಕಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ದತ್ತಗುರು ಸೀತಾರಾಮ ಹೆಗಡೆ, ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ಮತ್ತು ರಿಜಿಸ್ಟ್ರಾರ್ ಎನ್‌.ಕರಿಯಪ್ಪ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದಿರುವ ‘ದೇಸಿ ದರ್ಶನ ಮಾಲೆ’ಯು ಕನ್ನಡ ಸಾಹಿತ್ಯಕ್ಕೆ ಹೊಸ ಬೆಳಕಿನ ದಿಕ್ಕುಗಳನ್ನು ತೋರಿಸುತ್ತದೆ. ಮಹಾಕವಿಗಳ ಬಗೆಗಿನ ಓದುಗರ ಗ್ರಹಿಕೆಯನ್ನು ಮತ್ತಷ್ಟು ಹೆಚ್ಚಿಸಲು ನೆರವಾಗುತ್ತದೆ’ ಎಂದು ಸಾಹಿತಿ ಎಚ್.ಎಸ್.ವೆಂಕಟೇಶಮೂರ್ತಿ ತಿಳಿಸಿದರು.

‘ದೇಸಿ ದರ್ಶನ ಮಾಲೆ’ಯಡಿ ರಚಿತವಾಗಿರುವ ಏಳು ಕೃತಿಗಳನ್ನು ಬಿಡುಗಡೆ ಮಾಡಿ ಸೋಮವಾರ ಮಾತನಾಡಿದರು.

‘ಅಲಕ್ಷಿತವಾಗಿದ್ದ ವಿದ್ವತ್ ಪರಂಪರೆಯನ್ನು ಮತ್ತೆ ಉಜ್ಜೀವಿಸುವ ಪ್ರಯತ್ನ ಈ ಕೃತಿಗಳ ಮೂಲಕ ಸದ್ದಿಲ್ಲದೆ ಆಗಿದೆ. ಏಳು ಪುಸ್ತಕಗಳನ್ನೂ ತಿರುವಿ ಹಾಕಿದಾಗ ನಿಗೂಢವಾದ ನಿಕ್ಷೇಪವೊಂದು ಒಮ್ಮೆಗೆ ಪತ್ತೆಯಾದ ಅನುಭವವಾಗುತ್ತದೆ. ವಿಶಿಷ್ಟ ಮಾಹಿತಿಗಳನ್ನು ಒಳಗೊಂಡಿರುವ ಈ ಪುಸ್ತಕಮಾಲೆ ಅಪರೂಪವಾದುದು’ ಎಂದರು.‘ತತ್ವದ ಮೂಲಕ ಕಾವ್ಯವೊ, ಕಾವ್ಯದ ಮೂಲಕ ತತ್ವವೊ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನೂ ಈ ಮಾಲೆ ಮಾಡುತ್ತದೆ’ ಎಂದು ಹೇಳಿದರು.

‘ಈ ಪುಸ್ತಕಗಳನ್ನು ಓದಿದಾಗ ದೇಸಿ ದರ್ಶನಗಳ ಕುರಿತು ಇಷ್ಟು ಆಳವಾಗಿ ಆಲೋಚನೆ ಮಾಡುವ ಪ್ರತಿಭಾಶಾಲಿಗಳು ನಮ್ಮಲ್ಲಿ ಇದ್ದಾರೆಯೇ ಎಂಬ ಅಚ್ಚರಿ ಮೂಡುತ್ತದೆ. ಏಳು ಮಂದಿ ಲೇಖಕರೂ ಹೊಸ ಹೊಸ ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಹೊಸ ಪರಂಪರೆಯನ್ನು ಕಟ್ಟುವ ಸಾಮರ್ಥ್ಯ ನಮ್ಮ ಹೊಸ ಲೇಖಕರಲ್ಲಿ ಇದೆ ಎಂಬುದನ್ನೂ ಈ ಕೃತಿಗಳು ಸಾಬೀತುಪಡಿಸುತ್ತವೆ’ ಎಂದು ತಿಳಿಸಿದರು.

‘ಕೆಲವು ಗ್ರಂಥಗಳ ಅಚ್ಚಿನಲ್ಲಿ ದೋಷಗಳು ಇವೆ. ಕೆಲ ಹಾಳೆಗಳು ಪುನರಾವರ್ತನೆಯಾಗಿವೆ. ಒಂದು ಪುಸ್ತಕದ ಹಾಳೆ ಮತ್ತೊಂದು ಪುಸ್ತಕದಲ್ಲಿ ಅಚ್ಚಾಗಿದೆ. ಈ ತಾಂತ್ರಿಕ ದೋಷಗಳನ್ನು ತಿದ್ದಿ ಶುದ್ಧ ಪ್ರತಿಗಳನ್ನು ಮಾರುಕಟ್ಟೆಗೆ ಬಿಡಬೇಕು’ ಎಂದು ಸಲಹೆ ನೀಡಿದರು.

ಮಾಲೆಯ ಯೋಜನಾ ಸಂಪಾದಕ ಮಲ್ಲೇಪುರಂ ಜಿ.ವೆಂಕಟೇಶ್, ‘ವ್ಯಾಸ ಪಂಥದ ಕುರಿತ ಕೃತಿಯು ಮೂರು ಬಗೆಯ ಓದಿಗೆ ಅನುಕೂಲವಾಗುತ್ತದೆ. ಸಂಶೋಧನೆಯಲ್ಲಿ ತೊಡಗಿರುವವರಿಗೆ ಈ ಮಾಲೆ ಅಗತ್ಯ ಮಾರ್ಗದರ್ಶನ ಮಾಡುತ್ತದೆ. ಚರಿತ್ರೆ ಅಭ್ಯಾಸ ಮಾಡುವವರಿಗೆ ಹಾಗೂ ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೂ ಹೆಚ್ಚು ಉಪಯುಕ್ತವಾಗಿದೆ’ ಎಂದು ಹೇಳಿದರು.

ಬಿಡುಗಡೆಯಾದ ಕೃತಿಗಳು

ಕಾಳಾಮುಖ ಪಂಥ (ಶಿವಾನಂದ ಕೆಳಗಿನಮನಿ), ವ್ಯಾಸಪಂಥ (ಸೀ.ಚ.ಯತೀಶ್ವರ), ನಾಥಪಂಥ (ಎಚ್.ಜಿ.ಶ್ರೀಧರ), ಅವಧೂತ ಪಂಥ (ಬೆಳವಾಡಿ ಮಂಜುನಾಥ), ಆರೂಢ ಪಂಥ (ಎಂ.ಬಿ.ಕಟ್ಟಿ), ಶೈವ ಪಂಥ (ಪಿ.ಆರ್.ರೇಣುಕಾ ಪ್ರಸಾದ್), ದಾಸ ಪಂಥ (ಗುರುರಾಜ ಪೋಶೆಟ್ಟಿಹಳ್ಳಿ).

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ಇಸರೋ ISRO | 150 YEARS OF CELEBRATING THE MAHATMA

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 94.
ದೂ: (080)22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಕಂಡ ಕಾಮಗಾರಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
1	ಬೆಂಗಳೂರಿನ ಮಾರತ್‌ಹಳ್ಳಿಯಲ್ಲಿರುವ ಟಿಎಫ್, ಹೆಚ್‌ಎಸ್‌ಎಫ್‌ಸಿ ಕಟ್ಟಡದಲ್ಲಿ ಒಂದು ವರ್ಷದ ಅವಧಿಗೆ ಸಿವಿಲ್, ಪಿಎಚ್, ಎಲೆಕ್ಟ್ರಿಕಲ್, ಎಸಿ, ತೋಟಗಾರಿಕೆ ಮತ್ತು ಹೌಸ್‌ಕೀಪಿಂಗ್ ಕಾಮಗಾರಿಗಳಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ನಿರ್ವಹಣಾ ಗುತ್ತಿಗೆ ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/30/2022–23 & ದಿ: 23.05.2022	61.64	12 ತಿಂಗಳು	24.05.2022 (11.00 ಗಂಟೆ) ರಿಂದ 31.05.2022 (23.58 ಗಂಟೆವರೆಗೆ)	01.06.2022 23.00 ಗಂಟೆವರೆಗೆ	02.06.2022 11.30 ಗಂಟೆವರೆಗೆ	1,23,280/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಕೊಂಡು ಟೆಂಡರ್ ಸಂಸ್ಕರಣಾ ಶುಲ್ಕ ಪಾವತಿಸುವುದರ ಮೂಲಕ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ವಿಧಾನವನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ.

ಆಸಕ್ತ ಟೆಂಡರ್‌ದಾರರು ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ವಿವರಗಳಿಗಾಗಿ ವೆಬ್‌ಸೈಟ್ **www.isro.gov.in** ನೋಡುವುದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಟೆಂಡರ್ ದಸ್ತಾವೇಜುಗಳ ಖರೀದಿಗೆ **www.tenderwizard.com/ISRO** ಗೆ ಭೇಟಿ ನೀಡುವುದು. ತೊಂದರೆಯಾದಲ್ಲಿ ಟೆಂಡರ್‌ದಾರರು ಶ್ರೀ ಧನ್‌ರಾಜ್ ರವರನ್ನು (ಮೆ॥ ಐಟಿಐ ಲಿಮಿಟೆಡ್‌ನ ಪ್ರತಿನಿಧಿ) ಮೊಬೈಲ್ ಸಂಖ್ಯೆ: 9686115308 ಮೂಲಕ ಸಂಪರ್ಕಿಸುವುದು.

ಸಹಿ/- ಸಮೂಹ ನಿರ್ದೇಶಕರು, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

CLINICAL RESEARCH UNIT (UNANI)

NATIONAL INSTITUTE OF UNANI MEDICINE,
CAMPUS KOTTIGEPALYA, MAGADI MAIN ROAD,
BENGALURU-560091
Email: id: crubangalore2000@yahoo.com

TENDER NOTICE No. 02/2022

The Deputy Director, CRU, Bengaluru inviting sealed tenders from reputed/authorized firms/companies for outsourcing of **One vehicle on rental basis. Xylo/Bolero/Innova (Non AC) Commercial Vehicle on daily basis is required for mobilization of OPD Healthcare programme under SCSP in and around Bengaluru district. Interested parties/Travel Agent / Dealer can obtain TENDER DOCUMENTS from above Clinical Research Unit, Bengaluru. Or it may be** downloaded from the CCRUM website : **www.ccrum.res.in.** Last date for submission of tender (duly filled) is **9th June 2022 at 5.00 p.m.**

Any Change / extension in due date will appear in the above website. No press note will be issued further.

Sd/- DEPUTED DIRECTOR

ನಗರಾಭಿವೃದ್ಧಿ: ತುಕಾರಾಮ ಉಪ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿಯಾಗಿ (ಬಿಬಿಎಂಪಿ) ತುಕಾರಾಮ ಕಲ್ಯಾಣಕರ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ–3 ಆಗಿದ್ದ ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿ ಎಲಿಷ ಆ್ಯಂಡ್ರೂಸ್ ಅವರನ್ನು ರಾಜ್ಯ ಸರ್ಕಾರ ಏಪ್ರಿಲ್ 22ರಂದು ಅಮಾನತು ಮಾಡಿತ್ತು. ಕಡತ ವಿಲೇವಾರಿ ವೇಳೆ ವಿಳಂಬ ಧೋರಣೆ ಅನುಸರಿಸಿದ ಹಾಗೂ ಸರ್ಕಾರಿ ನೌಕರರ ತರವಲ್ಲದ ವರ್ತನೆ ತೋರಿದ ಆರೋಪವನ್ನು ಅವರು ಎದುರಿಸುತ್ತಿದ್ದರು. ಕಳೆದ ಒಂದು ತಿಂಗಳಿಂದ ಉಪ ಕಾರ್ಯದರ್ಶಿ ಹುದ್ದೆ ಖಾಲಿ ಇತ್ತು.

ಸಂಘ ಪರಿವಾರದ ಹಿರಿಯ ಮುಖಂಡರೊಬ್ಬರ ಶಿಫಾರಸಿನ ಮೇರೆಗೆ ತುಕಾರಾಮ ಅವರನ್ನು ಉಪ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಸಚಿವಾಲಯ ಸೇವೆಗೆ ಸೇರಿದ ತುಕಾರಾಮ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯಾಗಿದ್ದರು.

ಪರಸ್ಪರ ಅಂತರ ಕಾಯ್ದುಕೊಳ್ಳಿ



भारत इलेक्ट्रॉनिक्स
BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ–ಮೇಲ್: secretary@bel.co.in, ವೆಬ್‌ಸೈಟ್: www.bel-india.in, ಫೋನ್: 080–25039300, ಫ್ಯಾಕ್ಸ್: 080–25039266

31ನೇ ಮಾರ್ಚ್ 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಪರಿಶೋಧಿತ ಲೆಕ್ಕ ಫಲಿತಾಂಶಗಳ ಸಾರಾಂಶ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್ ಅಲೋನ್					ಕ್ರೋಢೀಕೃತ				
		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ	
		31.03.2022	31.12.2021	31.03.2021	31.03.2022	31.03.2021	31.03.2022	31.12.2021	31.03.2021	31.03.2022	31.03.2021
		(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ)		(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ)	
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	6,32,490	3,69,371	6,90,834	15,31,376	14,06,383	6,33,981	3,70,165	6,91,747	15,36,818	14,10,869
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಆವಧಿಯ ನಿವ್ವಳ ಲಾಭ	1,52,656	78,833	1,93,053	3,15,780	2,93,481	1,53,113	79,085	1,93,597	3,16,624	2,94,178
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಆವಧಿಯ ನಿವ್ವಳ ಲಾಭ	1,52,656	78,833	1,93,053	3,15,780	2,93,481	1,53,113	79,085	1,93,597	3,16,624	2,94,178
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಆವಧಿಯ ನಿವ್ವಳ ಲಾಭ	1,14,181	58,337	1,35,238	2,34,893	2,06,542	1,15,509	59,611	1,36,815	2,40,022	2,09,976
5.	ಒಟ್ಟು ಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	93,482	58,850	1,29,933	2,19,972	1,97,833	94,814	60,123	1,31,463	2,25,105	2,01,225
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	24,366	24,366	24,366	24,366	24,366	24,366	24,366	24,366	24,366	24,366
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	-	-	-	11,74,060	10,56,423	-	-	-	12,04,227	10,81,592
8.	ಪ್ರತಿ ಷೇರಿನ ಗಳಿಕೆ (₹ 1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ದುರ್ಬಲಗೊಳಿಸಿದ (₹ ನಲ್ಲಿ)	4.69	2.39	5.55	9.64	8.48	4.74	2.45	5.62	9.85	8.62

ಟಿಪ್ಪಣಿಗಳು:

1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ಅಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿವರವಾದ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ ***(www.bseindia.com*** ಮತ್ತು ***www.nseindia.com)*** ಮತ್ತು ಕಂಪೆನಿಯ ವೆಬ್‌ಸೈಟ್ ***(www.bel-india.in)*** ನಲ್ಲಿಯೂ ಲಭ್ಯವಿದೆ.
2. ದಿನಾಂಕ 21 ಮೇ, 2022 ರಂದು ನಡೆದ ಸಭೆಯಲ್ಲಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಈ ಮೇಲಿನ ಹಣಕಾಸಿನ ಫಲಿತಾಂಶಗಳ ವಿವರಣೆಯನ್ನು ಅವಲೋಕನೆ ಮಾಡಲಾಯಿತು ಮತ್ತು ಅದನ್ನು ದಿನಾಂಕ 23 ಮೇ, 2022 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಯಿತು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/–
ಆನಂದಿ ರಾಮಲಿಂಗಮ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (ಹೆಚ್ಚುವರಿ ಪ್ರಭಾರಿ)

ಸ್ಥಳ: ಬೆಂಗಳೂರು
ದಿನಾಂಕ: 23 ಮೇ, 2022

PUBLIC NOTICE

My client has entered into a Development Agreement to develop the properties more particularly described in the schedule hereunder by constructing a residential apartment building thereon with its present owner M/S.ALPINE HOUSING DEVELOPMENT CORPORATION LIMITED, a company having its office at No.No.302, "Alpine Arch", No.10, Langford Road, Bangalore – 560 027 represented by its Deputy Managing Director MR.Syed Abdul Rasheed, It is represented by the present owner that they have clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities.

SCHEDULE 'A' PROPERTY

All that piece and parcel of the Industrially converted land measuring an extent of about 3 Acres 15 Guntas (after deducting an area measuring 25 Guntas acquired by KIADB for formation of the road) comprised in Sy.No.120 of Hoovinayakanahalli Village, Jala Hobli, Bangalore North (Addl) Taluk (converted vide Rectification Order bearing No.B.DS.ALN.SR(NA)107/ 2004-05, dated: 06/04/2005 issued by the Special Deputy Commissioner, Bangalore District, Bangalore) and bounded on the:

East by: Sy.No.121
West by: Sy.No.104
North by: Remaining portion of Sy.No.120
South by: Road

SCHEDULE 'B' PROPERTY

All that piece and parcel of the Industrially converted land measuring an extent of about 3 Acres 15 Guntas (after deducting an area measuring 25 Guntas acquired by KIADB for formation of the road) comprised in Sy.No.120 of Hoovinayakanahalli Village, Jala Hobli, Bangalore North (Addl) Taluk (converted vide Rectification Order bearing No.B.DS.ALN.SR(NA)108/ 2004-05, dated:27/12/2004 issued by the Special Deputy Commissioner, Bangalore District, Bangalore) and bounded on the:

East by: Remaining portion of Sy.No.120
West by: Sy.No.104
North by: Sy.No.127
South by: Road

SCHEDULE 'C' PROPERTY

All that piece and parcel of the residentially converted land measuring an extent of about 2 Acres 10 Guntas (after deducting an area measuring 30 Guntas acquired by KIADB for formation of the road)comprised in and forming a part of Sy.No.121 of Hoovinayakanahalli Village, Jala Hobli, Bangalore North (Addl) Taluk (converted vide Official Memorandum bearing No.ALN.SR(NA)96/2004-05, dated: 11/02/2005 issued by the Assistant Commissioner, Bangalore North Sub-Division, Bangalore) and bounded on the:

East by: Property of Sri.Shivakumar
West by: Property of Sri.K.L.Nagaraj Rao
North by: Government Land
South by: Hoovinayakanahalli Road

SCHEDULE 'D' PROPERTY

All that piece and parcel of the residentially converted land measuring an extent of about 3 Acres 10 Guntas (after deducting an area measuring 30 Guntas acquired by KIADB for formation of the road)comprised in Sy.No.121 of Hoovinayakanahalli Village, Jala Hobli, Bangalore North (Addl) Taluk (converted vide Official Memorandum bearing No.ALN.SR.97/2004-05, dated:11/02/2005 issued by the Assistant Commissioner, Bangalore North Sub-Division, Bangalore) and bounded on the:

East by: Property of Sri.K.Ramachandra
West by: Property of Sri.M.S.Kuppuswamy Iyengar
North by: Government Land
South by: Hoovinayakanahalli Road

SCHEDULE PROPERTY

(Composite of immovable property comprising of the Schedule A, B, C and D Properties)

All that piece and parcel of the reconverted undeveloped land measuring a total extent of about 12 Acres 10 Guntas comprised in Sy.Nos.120 and 121 of Hoovinayakanahalli Village, Jala Hobli, Bangalore North (Addl) Taluk and bounded on the:

East by: Sri.K.Ramachandra Rao's Land
West by: M.D.Ismail's land in Sy.No.104
North by: Government Land
South by: Road

ARVIND RAGHAVAN
Advocate
No.48, 'ISHITHA',
2nd Main Road, Vyalikaval,
Bangalore – 560 003.
E-mail.arvind_ncsr@yahoo.com

Bangalore.
Dated: 12/05/2022

ನಗರದಲ್ಲಿ 26 ಲೆವೆಲ್ ಕ್ರಾಸಿಂಗ್: ಸಂಚಾರ ದಟ್ಟಣೆ ನಡುವೆ ಸಿಲುಕಿ ನಿತ್ಯ ಪರದಾಡುವ ವಾಹನ ಸವಾರರು

ಸುಗಮ ಸಂಚಾರಕ್ಕೆ ಲೆವೆಲ್ ಕ್ರಾಸಿಂಗ್ ತೊಡಕು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಇಂದಿಗೂ 26 ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳಿದ್ದು, ರೈಲುಗಳು ಬಂದರೆ ವಾಹನ ಸವಾರರು ಕಾದು ನಿಲ್ಲುವುದು ತಪ್ಪಿಲ್ಲ.

ನಗರದಲ್ಲಿರುವ ಲೆವೆಲ್ ಕ್ರಾಸಿಂಗ್‌ಗಳ ಪೈಕಿ ಬಾಣಸವಾಡಿ–ಹೆಬ್ಬಾಳ ನಡುವೆಯೇ ಅತೀ ಹೆಚ್ಚು ಆರು ಲೆವೆಲ್ ಕ್ರಾಸಿಂಗ್‌ಗಳಿವೆ. ಕಾರ್ಮೆಲರಾಮ್ ರೈಲು ನಿಲ್ದಾಣ–ಬೈಯಪ್ಪನಹಳ್ಳಿ, ಹೆಬ್ಬಾಳ–ಯಶವಂತಪುರ, ಚನ್ನಸಂದ್ರ–ಯಲಹಂಕ ನಡುವೆ ತಲಾ ಮೂರು ಲೆವೆಲ್ ಕ್ರಾಸಿಂಗ್‌ಗಳು ಇವೆ.

ನಗರ ಬೆಳೆದಂತೆ ವಾಹನಗಳ ದಟ್ಟಣೆ ಸಮಸ್ಯೆ ನಗರವನ್ನು ಇನ್ನಿಲ್ಲದೆ ಕಾಡುತ್ತಿದೆ. ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳೂ ಇದಕ್ಕೆ ಕೊಡುಗೆ ನೀಡುತ್ತಿವೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಕೆಂಗೇರಿ ತಲುಪುವಷ್ಟರಲ್ಲಿ ಮೂರು ಲೆವೆಲ್ ಕ್ರಾಸಿಂಗ್‌ಗಳು ಸಿಗುತ್ತವೆ.

ನಗರದ ಮಧ್ಯಭಾಗದಲ್ಲೇ ಮಲ್ಲೇಶ್ವರ ರೈಲು ನಿಲ್ದಾಣದ ಪಕ್ಕದಲ್ಲೇ ಲೆವೆಲ್ ಕ್ರಾಸಿಂಗ್ ಉಳಿದುಕೊಂಡಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಯಶವಂತಪುರ ಮಾರ್ಗದಲ್ಲಿ ಸಾಕಷ್ಟು ರೈಲುಗಳು ಸಂಚರಿಸುತ್ತವೆ. ಪ್ರತಿ ರೈಲು ಸಂಚರಿಸುವಾಗಲೂ ಕನಿಷ್ಠ 15ರಿಂದ 20 ನಿಮಿಷ ಕಾಯಬೇಕಾದ ಅನಿವಾರ್ಯತೆ ವಾಹನ ಸವಾರರದ್ದು.

‘ವಾಹನ ದಟ್ಟಣೆ ಹೆಚ್ಚಿದ್ದು ಗೇಟ್ ಹಾಕಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಸಿಗ್ನಲ್ ಸಿಗದೆ ರೈಲುಗಳೂ ಕಾದು ನಿಲ್ಲಬೇಕಾದ ಸ್ಥಿತಿ ಎದುರಾಗುತ್ತದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಯಶವಂತಪುರ ತಲುಪಲು ಒಮ್ಮೊಮ್ಮೆ 20 ನಿಮಿಷ ಆಗುತ್ತದೆ’ ಎಂದು ರೈಲು ಪ್ರಯಾಣಿಕರು ಹೇಳುತ್ತಾರೆ.

ಕೆಂಗೇರಿ ರೈಲು ನಿಲ್ದಾಣ ತಲುಪುವ ಮಾರ್ಗದ ದುಬಾಸಿಪಾಳ್ಯ ಬಳಿ ರೈಲು ಹಳಿ ದಾಟುತ್ತಿರುವ ವಾಹನ ಸವಾರರು
–ಪ್ರಜಾವಾಣಿ ಚಿತ್ರಗಳು/ರಂಜು ಪಿ.

‘ತುಮಕೂರು ಕಡೆಯಿಂದ ಬರುವ ರೈಲುಗಳು ವೇಗವಾಗಿ ಬಂದರೂ ನಗರ ವ್ಯಾಪ್ತಿ ಪ್ರವೇಶವಾದ ಬಳಿಕ ಯಶವಂತಪುರ ನಿಲ್ದಾಣ ತಲುಪಲು ಕನಿಷ್ಠ ಅರ್ಧಗಂಟೆ ಬೇಕಾಗುತ್ತದೆ. ಸಿಗ್ನಲ್ ಸಿಗುವುದು ವಿಳಂಬವಾಗಲು ಲೆವೆಲ್ ಕ್ರಾಸಿಂಗ್‌ಗಳ ಪಾತ್ರವೂ ಇದೆ’ ಎನ್ನುತ್ತಾರೆ ರೈಲ್ವೆ ಹೋರಾಟಗಾರರು.

ದಿಣ್ಣೂರು ಮುಖ್ಯರಸ್ತೆ, ಫ್ರೇಜರ್ ಟೌನ್, ಪಾಟರಿ ಟೌನ್, ಸೋಲದೇವನಹಳ್ಳಿ, ಶೆಟ್ಟಿಹಳ್ಳಿ ಬಳಿಯ ಲೆವೆಲ್ ಕ್ರಾಸಿಂಗ್ ದಾಟಲು ವಾಹನ ಸವಾರರು ನಿತ್ಯ ಪರದಾಡುತ್ತಿದ್ದಾರೆ. ರೈಲು ಹೋಗಲು ಗೇಟ್ ಹಾಕಿದರೆ ಕನಿಷ್ಠ 15ರಿಂದ 20 ನಿಮಿಷ ಕಾಯಲೇ ಬೇಕಾಗುತ್ತದೆ. ತುರ್ತು ಕಾರ್ಯನಿಮಿತ್ತ ಹೊರಟವರ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ದಟ್ಟಣೆ ನಡುವೆ ಸಿಲುಕಿ ಪರಿತಪಿಸುವುದು ನಿತ್ಯದ ಗೋಳಾಗಿದೆ.

ಲೆವೆಲ್ ಕ್ರಾಸಿಂಗ್ ತೆಗೆದು ರಸ್ತೆ ಮೇಲ್ಸೇತುವೆ ಅಥವಾ ಕೆಳ ಸೇತುವೆ ನಿರ್ಮಿಸುವ ಕಾಮಗಾರಿಯನ್ನು ನೈರುತ್ಯ ರೈಲ್ವೆ ಮತ್ತು ಸ್ಥಳೀಯ ಆಡಳಿತಗಳು ಜಂಟಿಯಾಗಿ ನಿರ್ವಹಿಸಿಕೊಂಡು ಬಂದಿವೆ. ಆದರೂ, ನಗರದಲ್ಲಿ ಇಂದಿಗೂ 26 ಲೆವೆಲ್ ಕ್ರಾಸಿಂಗ್‌ಗಳು ಉಳಿದಿರುವುದು ವಿಪರ್ಯಾಸ.

‘ಜನಶತಾಬ್ದಿಯಂತ ಪ್ರತಿಷ್ಠಿತ ರೈಲು ಸಂಚಾರವನ್ನೇ ಸಿಗ್ನಲ್ ಸಿಗದೆ ನಿಲ್ಲಿಸಿರುವ ಉದಾಹರಣೆಗಳು ಇವೆ. ರಾಮೋಹಳ್ಳಿ ರಸ್ತೆಯಲ್ಲಿ ಲೆವೆಲ್ ಕ್ರಾಸಿಂಗ್ ಇದೆ. ಅಲ್ಲಿ ರಸ್ತೆಯೂ ಕಿರಿದಾಗಿದ್ದು, ವಾಹನ ಸವಾರರು ಅದರಲ್ಲಿ ಸಿಲುಕಿ ಪರದಾಡುತ್ತಿದ್ದಾರೆ. ಲೆವೆಲ್ ಕ್ರಾಸಿಂಗ್ ಮುಕ್ತಗೊಳಿಸಿದರೆ ರೈಲುಗಳು ಮತ್ತು ಬೇರೆ ವಾಹನಗಳ ಸಂಚಾರ ಸುಗಮ ಆಗಲಿದೆ’ ಎನ್ನುತ್ತಾರೆ ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್.

‘ಹಂತ–ಹಂತವಾಗಿ ಲೆವೆಲ್ ಕ್ರಾಸಿಂಗ್‌ಗೆ ಮುಕ್ತಿ’

‘ಗೇಟ್ ಇಲ್ಲದ ಮಾನವ ರಹಿತ ಲೆವೆಲ್ ಕ್ರಾಸಿಂಗ್ ಈಗ ಇಲ್ಲ. ಗೇಟ್ ಸಹಿತ ಲೆವೆಲ್ ಕ್ರಾಸಿಂಗ್‌ಗಳಿದ್ದು, ಅವುಗಳ ಸಂಖ್ಯೆಗಳನ್ನೂ ಕಡಿಮೆ ಮಾಡಲು ನೈರುತ್ಯ ರೈಲ್ವೆ ಹಂತ–ಹಂತವಾಗಿ ಪ್ರಯತ್ನಿಸುತ್ತಿದೆ’ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗಡೆ ತಿಳಿಸಿದರು.

‘ರೈಲ್ವೆ ಮೇಲ್ಸೇತುವೆ ಅಥವಾ ರೈಲ್ವೆ ಕೆಳ ಸೇತುವೆ ನಿರ್ಮಿಸುವ ಮೂಲಕ ಲೆವೆಲ್ ಕ್ರಾಸಿಂಗ್ ತೆಗೆಯಲಾಗುತ್ತಿದೆ. ರೈಲು ನಿಲ್ದಾಣಗಳ ವ್ಯಾಪ್ತಿಯಲ್ಲಿ ಲೆವೆಲ್ ಕ್ರಾಸಿಂಗ್ ಇದ್ದರೆ ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆ ಸಮಪಾಲು ಹಣ ಒದಗಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ. ನಿಲ್ದಾಣದ ಹೊರ ಭಾಗದಲ್ಲಿ ಇದ್ದರೆ ಸ್ಥಳೀಯ ಆಡಳಿತದ ಅನುದಾನದಲ್ಲೇ ಕಾಮಗಾರಿ ನಿರ್ವಹಿಸಲಾಗುತ್ತದೆ ಎಂದು ಹೇಳಿದರು.

‘ಬೆಳ್ಳಂದೂರು, ಕೊಳತ್ತೂರು ದಿಣ್ಣೆ ಬಳಿ ಕಾಮಗಾರಿ ಪ್ರಗತಿಯಲ್ಲಿದೆ. ರೈಲ್ವೆ ಮೇಲ್ಸೇತುವೆ ನಿರ್ಮಿಸುವಾಗ ಭೂಸ್ವಾಧೀನ ಸಮಸ್ಯೆಯೂ ಎದುರಾಗುತ್ತದೆ. ನಮ್ಮ ವಲಯ ವ್ಯಾಪ್ತಿಯಲ್ಲಿ 2014ರಿಂದ ಈಚೆಗೆ 77 ರೈಲ್ವೆ ಮೇಲ್ಸೇತುವೆ, 388 ಕೆಳಸೇತುವೆಗಳನ್ನು ನೈರುತ್ಯ ರೈಲ್ವೆ ನಿರ್ಮಿಸಿದೆ’ ಎಂದು ವಿವರಿಸಿದರು.

ಎಲ್ಲೆಲ್ಲಿ ಲೆವೆಲ್ ಕ್ರಾಸಿಂಗ್?

ಕಾರ್ಮೆಲರಾಮ್ ರೈಲು ನಿಲ್ದಾಣ– ಬೈಯಪ್ಪನಹಳ್ಳಿ ನಡುವೆ 3 ಲೆವೆಲ್ ಕ್ರಾಸಿಂಗ್, ಬಾಣಸವಾಡಿ–ಬೈಯಪ್ಪನಹಳ್ಳಿ ನಡುವೆ 1, ಬಾಣಸವಾಡಿ– ಹೆಬ್ಬಾಳ ನಡುವೆ 6, ಹೆಬ್ಬಾಳ–ಯಶವಂತಪುರ ನಿಲ್ದಾಣಗಳ ನಡುವೆ 3 ಲೆವೆಲ್ ಕ್ರಾಸಿಂಗ್‌ಗಳಿವೆ. ಚನ್ನಸಂದ್ರ–ಯಲಹಂಕ ನಡುವೆ 3, ಬೈಯಪ್ಪನಹಳ್ಳಿ–ಕಂಟೋನ್ಮೆಂಟ್ ನಡುವೆ 1, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ– ನಾಯಂಡಹಳ್ಳಿ ನಡುವೆ 1, ನಾಯಂಡಹಳ್ಳಿ–ಕೆಂಗೇರಿ ನಡುವೆ 2, ಯಶವಂತಪುರ– ಚಿಕ್ಕಬಾಣಾವರ ನಡುವೆ 1, ಯಶವಂತಪುರ–ಯಲಹಂಕ ನಡುವೆ 1, ಯಲಹಂಕ–ದೇವನಹಳ್ಳಿ ನಡುವೆ 2 ಲೆವೆಲ್ ಕ್ರಾಸಿಂಗ್‌ಗಳು ಇವೆ.

ದುಬಾಸಿಪಾಳ್ಯ ಬಳಿ ರೈಲು ಹಳಿ ದಾಟಲು ಕಾದು ನಿಂತಿರುವ ವಾಹನ ಸವಾರರು

ಮೂರು ಕಡೆ ಸೇತುವೆಗೆ ಯೋಜನೆ

ಮೂರು ಕಡೆ ಕೆಳ ಸೇತುವೆ ನಿರ್ಮಿಸಿ ಲೆವೆಲ್ ಕ್ರಾಸಿಂಗ್ ಮುಕ್ತಗೊಳಿಸಲು ಯೋಜನೆ ಸಿದ್ಧವಾಗಿದೆ.

ಪೂರ್ವ ಬೆಂಗಳೂರಿನ ಫ್ರೇಜರ್ ಟೌನ್, ಪಾಟರಿ ಟೌನ್ ಬಳಿ ರೈಲು ಹಳಿಗೆ ಕೆಳ ಸೇತುವೆಗಳನ್ನು ನಿರ್ಮಿಸಲು ನೈರುತ್ಯ ರೈಲ್ವೆ ವಿಸ್ತೃತ ಯೋಜನೆ(ಡಿಪಿಆರ್) ಸಿದ್ಧಪಡಿಸಿದ್ದು, ₹15 ಕೋಟಿ ಹಣ ಒದಗಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ಮುಂದಾಗಿದೆ.

ದಿಣ್ಣೂರು ಮುಖ್ಯ ರಸ್ತೆಯಲ್ಲಿ ರೈಲ್ವೆ ಕೆಳಸೇತುವೆಗೆ ಹಣ ಒದಗಿಸಲು ಬಿಬಿಎಂಪಿ ಸಮ್ಮತಿಸಿದೆ.

‘ಮಣ್ಣು ಉಳಿಸಿ’ ಅಭಿಯಾನಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾ ಫೌಂಡೇಷನ್‌ನ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರು ಮಣ್ಣಿನ ಸಂರಕ್ಷಣೆ ಕುರಿತು ಜಾಗತಿಕವಾಗಿ ಅರಿವು ಮೂಡಿಸುವ ಸಲುವಾಗಿ ಆರಂಭಿಸಿರುವ ‘ಮಣ್ಣು ಉಳಿಸಿ’ (ಸೇವ್ ಸಾಯಿಲ್) ಆಂದೋಲನಕ್ಕೆ ರಾಜ್ಯದ ಜನಪ್ರತಿನಿಧಿಗಳು ಬೆಂಬಲ ಸೂಚಿಸಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ನಾಯಕ ಎಸ್.ಎಂ.ಕೃಷ್ಣ, ಬಿಜೆಪಿ ಶಾಸಕರಾದ ಬಿ.ಎಸ್.ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸಂಸದ ಡಿ.ವಿ. ಸದಾನಂದ ಗೌಡ, ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಅಭಿಯಾನಕ್ಕೆ ಕೈಜೋಡಿಸಿದ್ದಾರೆ.

ಮಣ್ಣಿಗೆ ಸಂಬಂಧಿಸಿ 192 ದೇಶಗಳಲ್ಲಿ ಒಂದು ನೀತಿ ರೂಪಿಸುವಂತೆ ಜನಾಭಿಪ್ರಾಯ ರೂಪಿಸುವುದು ಈ ಆಂದೋಲನದ ಉದ್ದೇಶವಾಗಿದೆ.

100 ದಿನದ ಅಭಿಯಾನದಲ್ಲಿ ಸದ್ಗುರು ಅವರು 27 ರಾಷ್ಟ್ರಗಳಲ್ಲಿ 30 ಸಾವಿರ ಕಿ.ಮೀ ವರೆಗೆ ಬೈಕ್‌ನಲ್ಲಿ ಏಕಾಂಗಿಯಾಗಿ ಪ್ರಯಾಣಿಸುವರು. ಕಾವೇರಿ ಕೊಳ್ಳ ಪ್ರದೇಶದಲ್ಲಿ ಅಭಿಯಾನ ಕೊನೆಗೊಳ್ಳಲಿದೆ. ‘ಸದ್ಗುರು ಅವರು ಜೂನ್ 19ರಂದು ಕರ್ನಾಟಕ ತಲುಪಲಿದ್ದು, ಅರಮನೆ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ಮಾತನಾಡುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ನಾಯಕರು ಭಾಗವಹಿಸಲಿದ್ದಾರೆ’ ಎಂದು ಈಶಾ ಫೌಂಡೇಷನ್ ತಿಳಿಸಿದೆ.

ಬಸವರಾಜ ಬೊಮ್ಮಾಯಿ, ಎಸ್.ಎಂ.ಕೃಷ್ಣ, ಎಚ್.ಡಿ.ದೇವೇಗೌಡ, ಬಿ.ಎಸ್.ಯಡಿಯೂರಪ್ಪ, ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ಸದಾನಂದ ಗೌಡ ಹಾಗೂ ಎಂ.ವೀರಪ್ಪ ಮೊಯಿಲಿ ಅಭಿಯಾನವನ್ನು ಬೆಂಬಲಿಸುವ ಭಿತ್ತಿಪತ್ರ ಪ್ರದರ್ಶಿಸಿದರು

ಡ್ರಗ್ಸ್ ದಂಧೆ: ವಿದ್ಯಾರ್ಥಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಮೂಲಕ ಡ್ರಗ್ಸ್ ತರಿಸಿಕೊಂಡು ಸಹಪಾಠಿಗಳು ಹಾಗೂ ಇತರರಿಗೆ ಮಾರಾಟ ಮಾಡುತ್ತಿದ್ದ ಆರೋಪದಡಿ ಇಬ್ಬರು ವಿದ್ಯಾರ್ಥಿಗಳನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವಿ. ಮನೋರಂಜಿತ್ (20) ಹಾಗೂ ಎಂ. ಸುಗೇಶ್‌ಕುಮಾರ್ (20) ಬಂಧಿತರು. ಇವರಿಬ್ಬರು ಜಯನಗರದ 9ನೇ ಹಂತದಲ್ಲಿರುವ ಕಾಲೇಜೊಂದರಲ್ಲಿ ಬಿ.ಕಾಂ, ಬಿ.ಎಂ.ಎಸ್ ವ್ಯಾಸಂಗ ಮಾಡುತ್ತಿದ್ದರು. ಲಕ್ಷಾಂತರ ರೂಪಾಯಿ ಮೌಲ್ಯದ 51.44 ಗ್ರಾಂ ಎಕ್ಸ್‌ಟೆಸ್ಸಿ ಮಾತ್ರೆಗಳು, ₹ 3,850 ನಗದು, 2 ಮೊಬೈಲ್ ಹಾಗೂ ತಮಿಳುನಾಡು ನೋಂದಣಿ ಸಂಖ್ಯೆಯ ಹುಂಡೈ ಐ–20 ಕಾರು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹೊಸಕೆರೆಹಳ್ಳಿಯ ಕೆಇಬಿ ಜಂಕ್ಷನ್ ಬಳಿ ಮೇ 21ರಂದು ಸಂಜೆ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಮಾಹಿತಿ ಕಲೆ ಹಾಕಿದ್ದ ಪೊಲೀಸರ ತಂಡ, ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿದೆ. ಪಿಎಸ್‌ಐ ಡಿ. ರಾಕೇಶ್ ದೂರಿನನ್ವಯ ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ’ ಎಂದೂ ತಿಳಿಸಿದರು.

ಬಂಧಿತರಿಂದ ಜಪ್ತಿ ಮಾಡಲಾದ ಡ್ರಗ್ಸ್

ಡ್ರಗ್ಸ್ ವ್ಯಸನಿಗಳು: ‘ತಮಿಳುನಾಡಿನ ಮನೋರಂಜಿತ್ ಹಾಗೂ ಸುಗೇಶ್ ಕುಮಾರ್, ಕಾಲೇಜಿಗೆ ಸೇರಿದ ದಿನದಿಂದಲೂ ಡ್ರಗ್ಸ್ ಸೇವಿಸುತ್ತಿದ್ದರು. ಡ್ರಗ್ಸ್ ವ್ಯಸನಿಗಳಾಗಿದ್ದ ಅವರಿಬ್ಬರು, ಹೊರ ರಾಜ್ಯಗಳ ಪೆಡ್ಲರ್ ಜೊತೆ ಒಡನಾಟ ಇಟ್ಟುಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶೈಕ್ಷಣಿಕ ಖರ್ಚಿಗೆಂದು ಪೋಷಕರು ಹಣ ಕಳುಹಿಸುತ್ತಿದ್ದರು. ಈ ಹಣದಲ್ಲಿ ಆರೋಪಿಗಳು ಡ್ರಗ್ಸ್ ಖರೀದಿಸುತ್ತಿದ್ದರು. ಆದರೆ, ನಿತ್ಯವೂ ಡ್ರಗ್ಸ್ ಖರೀದಿಸಲು ಹಣ ಸಾಲುತ್ತಿರಲಿಲ್ಲ. ಅವಾಗಲೇ ಆರೋಪಿಗಳು, ಸೇವನೆ ಜೊತೆಯಲ್ಲೇ ಡ್ರಗ್ಸ್ ಮಾರಾಟಕ್ಕೂ ಮುಂದಾಗಿದ್ದರು’ ಎಂದೂ ತಿಳಿಸಿವೆ.

ಕೊರಿಯರ್ ಮೂಲಕ ಡ್ರಗ್ಸ್: ‘ದೇಶದ ಕೆಲ ಪೆಡ್ಲರ್‌ಗಳು, ಡ್ರಗ್ಸ್ ವ್ಯವಹಾರಕ್ಕೆಂದು ಆ್ಯಪ್‌ವೊಂದನ್ನು ಬಳಸುತ್ತಿದ್ದಾರೆ. ಅದನ್ನು ತಿಳಿದಿದ್ದ ಆರೋಪಿಗಳು, ಆ್ಯಪ್ ಇನ್ ಸ್ಟಾಲ್ ಮಾಡಿಕೊಂಡು ಡ್ರಗ್ಸ್ ಕಾಯ್ದಿರಿಸುತ್ತಿದ್ದರು. ಕೊರಿಯರ್ ಮೂಲಕ ಆರೋಪಿಗಳ ವಿಳಾಸಕ್ಕೆ ಡ್ರಗ್ಸ್ ಬರುತ್ತಿತ್ತು’ ಎಂದು ಮೂಲಗಳು ಹೇಳಿವೆ.

‘ಕೊಠಡಿ ಹಾಗೂ ಇತರೆ ಸ್ಥಳಗಳಲ್ಲಿ ಆರೋಪಿಗಳು ಡ್ರಗ್ಸ್ ಬಚ್ಚಿಡುತ್ತಿದ್ದರು. ಸಹಪಾಠಿಗಳು ಹಾಗೂ ಇತರರು, ಡ್ರಗ್ಸ್ ಕೇಳಿದಾಗ ಮಾರುತ್ತಿದ್ದರು. ಇವರಿಬ್ಬರಿಂದ ಕಾಲೇಜಿನ ಕೆಲ ವಿದ್ಯಾರ್ಥಿಗಳು, ಡ್ರಗ್ಸ್ ವ್ಯಸನಿಗಳಾಗಿರುವುದು ಗೊತ್ತಾಗಿದೆ. ದೆಹಲಿಯಲ್ಲಿರುವ ಪೆಡ್ಲರ್, ಆರೋಪಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ ಮಾಹಿತಿ ಇದೆ’ ಎಂದೂ ಹೇಳಿವೆ.

ಮಳೆ ಅನಾಹುತ: 691 ಕುಟುಂಬಕ್ಕೆ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ನಿರಂತರವಾಗಿ ಸುರಿದ ಮಳೆಯಿಂದಾಗಿ ಪೂರ್ವ ವಲಯದಲ್ಲಿ 691 ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿದೆ. ಈ ಕುಟುಂಬಗಳಿಗೆ ಎರಡು ದಿನಗಳಲ್ಲಿ ತಲಾ ₹25 ಸಾವಿರ ಪರಿಹಾರ ನೀಡಬೇಕು’ ಎಂದು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಳೆಯಿಂದಾಗಿ ಉಂಟಾಗುವ ಸಮಸ್ಯೆಗಳ ನಿರ್ವಹಣೆಗಾಗಿ ಕಾರ್ಯಪಡೆ ರಚಿಸಲಾಗಿದೆ. ಪೂರ್ವ ವಲಯದ ಮುಖ್ಯಸ್ಥರಾಗಿರುವ ಅವರು ಸದ್ಯ ದಾವೋಸ್ ಪ್ರವಾಸದಲ್ಲಿದ್ದು, ವಿಡಿಯೊ ಕಾನ್ಫರೆನ್ಸ್ ಮೂಲಕ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

‘ಎಲ್ಲಾ ಕುಟುಂಬಗಳ ದಾಖಲೀಕರಣವನ್ನು ಮಂಗಳವಾರದೊಳಗೆ ಮುಗಿಸಿ, ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಬುಧವಾರ ನೇರವಾಗಿ ಹಣ ವರ್ಗಾವಣೆ ಮಾಡಬೇಕು. ಮೊದಲೇ ಸೂಚಿಸಿದ್ದರೂ ಕೆಲ ಗುತ್ತಿಗೆದಾರರು ಚರಂಡಿಗಳಲ್ಲಿನ ಹೂಳು ತೆಗೆಯುವ ಕೆಲಸ ಮಾಡಿಲ್ಲ. 7 ಕಡೆ ಈ ಸಮಸ್ಯೆ ಇದೆ. ಆ ಗುತ್ತಿಗೆದಾರರಿಗೆ ತಕ್ಷಣವೇ ನೋಟಿಸ್ ನೀಡಿ ಶಿಸ್ತು ಕ್ರಮ ಕೈಗೊಳ್ಳಬೇಕು. ಎಲ್ಲಾ ಚರಂಡಿಗಳಲ್ಲಿನ ಹೂಳೆತ್ತಿ ಮಳೆ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಮಾಡಬೇಕು’ ಎಂದರು.

‘ನೀಲಸಂದ್ರ, ಫ್ರೇಜರ್ ಟೌನ್, ಸಂಜಯನಗರ ಸೇರಿದಂತೆ ಒಟ್ಟು 22 ಸ್ಥಳಗಳನ್ನು ಕೆಂಪು ವಲಯವೆಂದು ಗುರುತಿಸಲಾಗಿದೆ. ಈ ಭಾಗದ ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗುವ ಸಾಧ್ಯತೆ ಇದೆ. ಅಲ್ಲಿನ ನಿವಾಸಿ ಗಳನ್ನು ಸ್ಥಳಾಂತರಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಹತ್ತಿರದ ಶಾಲೆ ಹಾಗೂ ಇತರ ಸ್ಥಳಗಳಲ್ಲಿ ಅವರಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಬೇಕು. ಅಲ್ಲಿನ ನಿವಾಸಿಗಳ ಜೊತೆ ನಿರಂತರ ಸಂಪರ್ಕದಲ್ಲಿ ಇರಬೇಕು’ ಎಂದು ತಿಳಿಸಿದರು.

ನಗರದಲ್ಲಿ ಇಂದು

ಎಚ್.ಎಸ್.ಶಿವಲಿಂಗಯ್ಯನವರ ‘ಹಾಗಲವಾಡಿ ಜುಂಜಪ್ಪನ ಕಥೆಗಳು’ ಮತ್ತು ಕೃಷ್ಣಾಬಾಯಿ ಹಾಗಲವಾಡಿಯವರ ‘ಧರ್ಮಸಂಸ್ಥಾನ’ ಕಾದಂಬರಿ ಬಿಡುಗಡೆ: ಪುಸ್ತಕ ಲೋಕಾರ್ಪಣೆ–ವಿ.ಸೋಮಣ್ಣ, ಅಧ್ಯಕ್ಷತೆ–ವೀರಕೆಂಪಯ್ಯ, ಪುಸ್ತಕ ಪರಿಚಯ–ಬೈರಮಂಗಲ ರಾಮೇಗೌಡ, ಚಿಕ್ಕಣ್ಣ ಯೆಣ್ಣೆಕಟ್ಟೆ, ಅತಿಥಿ–ಎನ್. ದೇವರಾಜ್, ಆಯೋಜನೆ–ವಿಜಯನಗರ ಹಿರಿಯ ನಾಗರಿಕರ ವೇದಿಕೆ, ಜೈ ಮಾರುತಿ ನಗೆಯೋಗ ವ್ಯಾಯಾಮ ಕೇಂದ್ರ, ವಿಜಯನಗರ ಹಾಗೂ ವಿಶ್ವಗುರು ಪ್ರಕಾಶನ, ಸ್ಥಳ–ಬಿಬಿಎಂಪಿ ವಿವಿದೊದ್ದೇಶ ಕಟ್ಟಡ ಸಂಕೀರ್ಣ, ಗಣೇಶ ದೇವಸ್ಥಾನದ ಎದುರು–ಬೆಳಿಗ್ಗೆ 9.30.

75 ಲಕ್ಷ ಸಸಿಗಳನ್ನು ನೆಡುವ ‘ಕಲ್ಪತರು’ ಕಾರ್ಯಕ್ರಮಕ್ಕೆ ಚಾಲನೆ: ಉದ್ಘಾಟನೆ–ಥಾವರಚಂದ್ ಗೆಹಲೋತ್, ಭಾಗವಹಿಸುವವರು–ನಿರ್ಮಲಾ, ಮೃತ್ಯುಂಜಯ, ಆಯೋಜನೆ–ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ, ಸ್ಥಳ–ವಿಶ್ವಶಾಂತಿ ರಾಜಯೋಗ ಭವನ, ಬನ್ನೇರುಘಟ್ಟ ರಸ್ತೆ, ಗೊಟ್ಟಿಗೆರೆ–ಬೆಳಿಗ್ಗೆ 10.30.

ಕೋಮು ಸಾಮರಸ್ಯ ಸಭೆ: ಉದ್ಘಾಟನೆ–ಡಿ.ವಿ.ಸದಾನಂದಗೌಡ, ಅಧ್ಯಕ್ಷತೆ–ಬೈರತಿ ಸುರೇಶ್, ಮುಖ್ಯ ಅತಿಥಿ–ಎಲ್. ಹನುಮಂತಯ್ಯ, ಅಬ್ದುಲ್ ಅಜೀಂ, ಆಯೋಜನೆ–ಈದ್ಗಾ ಸಮಿತಿ, ಸ್ಥಳ–ಆರ್.ಟಿ.ನಗರ ಪಬ್ಲಿಕ್ ಶಾಲೆ –ಸಂಜೆ 5.30.

ನಿಧನ ವಾರ್ತೆ

ಕೆ.ಎನ್. ಮೋಹನ್ ಕುಮಾರ್

ಬೆಂಗಳೂರು: ಸಿನಿಮಾ ನಿರ್ದೇಶಕ, ಅಂತರರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಕೆ.ಎನ್.ಮೋಹನ್ ಕುಮಾರ್ (56) ಸೋಮವಾರ ಹೃದಯಾಘಾತದಿಂದ ನಿಧನರಾದರು.

ರಂಗಭೂಮಿ ಹಿನ್ನೆಲೆಯಿಂದ ಬಂದ ಮೋಹನ್ ಕುಮಾರ್ ಅವರು ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾದ ‘ಜಾನಪದ’ ಕಾರ್ಯಕ್ರಮದ ನಿರೂಪಕರಾಗಿ ಕಿರುತೆರೆ ಪ್ರವೇಶಿಸಿ ಜನಪ್ರಿಯತೆಗಳಿಸಿದರು.

ಮೂಲತಃ ಎಂಜಿನಿಯರ್ ಆದ ಇವರು ರಂಗಭೂಮಿ, ಧಾರಾವಾಹಿ, ಪತ್ರಿಕೋದ್ಯಮ, ಪ್ರಕಾಶನ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿದರು. ‘ಮೈಸೂರು ಮಲ್ಲಿಗೆ’ ಸಿನಿಮಾದ ನಾಯಕನಿಗೆ ಕಂಠದಾನ ಮಾಡಿದ್ದರು.



ಪತ್ನಿ ವತ್ಸಲಾ ಮೋಹನ್ ಅವರ ‘ಸಜ್ಜಾದನಾ ಗಣೇಶ’ ಕಾದಂಬರಿ ಆಧರಿಸಿ 2016ರಲ್ಲಿ ‘ಬೊಂಬೆಯಾಟ’ ಮಕ್ಕಳ ಸಿನಿಮಾವನ್ನು ನಿರ್ದೇಶಿಸಿದರು. ಈ ಸಿನಿಮಾ ಸಾಕಷ್ಟು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ರಷ್ಯಾದ ಮಾಸ್ಕೊದಲ್ಲಿ ನಡೆದ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಯಾದ ಏಕೈಕ ಭಾರತೀಯ ಸಿನಿಮಾ ‘ಬೊಂಬೆಯಾಟ’ ಎಂಬುದು ಇದರ ಹೆಗ್ಗಳಿಕೆ. ಮೃತರು ತಾಯಿ ಕಮಲಮ್ಮ, ಕಲಾವಿದೆಯಾದ ಪತ್ನಿ ವತ್ಸಲಾ ಮೋಹನ್, ಪುತ್ರಿ ಹಾಗೂ ನಟಿ ಅನನ್ಯಾ ಮೋಹನ್ ಅವರನ್ನು ಅಗಲಿದ್ದಾರೆ.

ಆನೇಕಲ್ ಬಳಿಯ ಸಮಂದೂರು ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 9.10ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ಮಂಗಳವಾರದ ಉಷ್ಣಾಂಶ 30° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ತುಂತುರು ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

	ಬುಧವಾರ	ಗುರುವಾರ	ಶುಕ್ರವಾರ
ಹವಾಮಾನ	31° 20°	32° 21°	32° 21°

ಆಮಿಷವೊಡ್ಡಿ ವೇಶ್ಯಾವಾಟಿಕೆ: ಮಹಿಳೆಗೆ ಶಿಕ್ಷೆ

ಬೆಂಗಳೂರು: ಬ್ಯೂಟಿ ಪಾರ್ಲರ್‌ಗಳಲ್ಲಿ ತರಬೇತಿ ಸಹಿತವಾಗಿ ಕೆಲಸ ಕೊಡಿಸುವ ಆಮಿಷವೊಡ್ಡಿ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದ ಅಪರಾಧಿ ರೋಜಿ ಸುಬ್ರಮಣಿ ಎಂಬಾಕೆಗೆ 14 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

ಪೀಣ್ಯ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ವಿಚಾರಣೆಯನ್ನು ನ್ಯಾಯಾಧೀಶರಾದ ಎನ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು. ಟಿ. ದಾಸರಹಳ್ಳಿ ನಿವಾಸಿಯಾದ ಅಪರಾಧಿ ರೋಜಿ, ತನ್ನ ಮನೆಯಲ್ಲೇ ಬಾಲಕಿಯರಿಗೆ ಆಮಿಷಗಳನ್ನು ತೋರಿಸಿ ವೇಶ್ಯಾವಾಟಿಕೆಗೆ ತಳ್ಳಿದ್ದಳು.

ಪಿಎಸ್‌ಐ ಅಕ್ರಮ: ಬಂಧಿತರು ನ್ಯಾಯಾಂಗ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಕಚೇರಿಯ ವಿಭಾಗವೊಂದರ ಸೂಪರಿಂಟೆಂಡೆಂಟ್ ಮಂಜುನಾಥ್ ಸೇರಿದಂತೆ ಐವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಅಕ್ರಮದಲ್ಲಿ ಭಾಗಿಯಾದ ಆರೋಪದಡಿ ಮಂಜುನಾಥ್ ಹಾಗೂ ಪೊಲೀಸ್ ನೇಮಕಾತಿ ವಿಭಾಗದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹರ್ಷ, ಹೆಡ್ ಕಾನ್‌ಸ್ಟೆಬಲ್‌ಗಳಾದ ಶ್ರೀನಿವಾಸ್, ಶ್ರೀಧರ್ ಹಾಗೂ ಮೀಸಲು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಆರ್‌ಎಸ್‌ಐ) ಲೋಕೇಶಪ್ಪ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು.

ಆರೋಪಿಗಳನ್ನು ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದರು. ಅದರ ಅವಧಿ ಮುಗಿದಿದ್ದರಿಂದ ಐವರನ್ನೂ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಿದರು.

ಮತ್ತಷ್ಟು ಮಂದಿ ವಿಚಾರಣೆ: ‘ಬಂಧಿತ ಆರೋಪಿಗಳು, ಪ್ರಕರಣದ ಬಗ್ಗೆ ಹೇಳಿಕೆ ನೀಡಿದ್ದಾರೆ. ಮತ್ತಷ್ಟು ಮಂದಿ ಅಕ್ರಮದಲ್ಲಿ ಭಾಗಿಯಾಗಿರುವ ಮಾಹಿತಿ ಇದ್ದು, ಅವರೆಲ್ಲರನ್ನೂ ವಿಚಾರಣೆ ನಡೆಸಲಾಗುವುದು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್, ಆರ್‌ಪಿಐ ಗುರುವ ಬಸವರಾಜ್ ಹಾಗೂ ಮಧು ಅವರ ವಿಚಾರಣೆ ಮುಂದುವರಿದಿದೆ’ ಎಂದು ತಿಳಿಸಿವೆ.

ನಕಲಿ ಅಂಕಪಟ್ಟಿ: 7 ಅಭ್ಯರ್ಥಿಗಳ ವಿರುದ್ಧ ಎಫ್‌ಐಆರ್

ಬೆಂಗಳೂರು: ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ನೇಮಕಾತಿ ಪ್ರಕ್ರಿಯೆಯಲ್ಲಿ ನಕಲಿ ಅಂಕಪಟ್ಟಿ ನೀಡಿದ್ದ ಆರೋಪದಡಿ ಏಳು ಅಭ್ಯರ್ಥಿಗಳ ವಿರುದ್ಧ ಭಾರತಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಇಲಾಖೆಯ ಉಪನಿರ್ದೇಶಕ ಟಿ.ಎನ್. ಶಿವಶಂಕರ್ ದೂರು ನೀಡಿದ್ದಾರೆ. ಇದರನ್ವಯ 7 ಅಭ್ಯರ್ಥಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ದಾಖಲೆಗಳನ್ನು ಕಲೆ ಹಾಕಲಾಗುತ್ತಿದ್ದು, ಅಭ್ಯರ್ಥಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸರು ಹೇಳಿದರು.

‘ಇಲಾಖೆಯಲ್ಲಿ ಖಾಲಿ ಇರುವ ಅಗ್ನಿಶಾಮಕ ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿಗಾಗಿ 2021ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಿ, ದೇಹದಾರ್ಢ್ಯ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಸಲಾಗಿತ್ತು. ನಂತರ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನೂ ಬಿಡುಗಡೆ ಮಾಡಲಾಗಿತ್ತು’ ಎಂದರು.

‘ಆಯ್ಕೆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳಿಂದ ಶೈಕ್ಷಣಿಕ ಹಾಗೂ ಇತರೆ ದಾಖಲೆಗಳನ್ನು ಪರಿಶೀಲನೆಗಾಗಿ ಪಡೆದು, ಸಂಬಂಧಪಟ್ಟ ಪರೀಕ್ಷಾ ಮಂಡಳಿಗಳಿಗೆ ಕಳುಹಿಸಲಾಗಿತ್ತು. ಆ ಪೈಕಿ ಅಭ್ಯರ್ಥಿಗಳಾದ ಹೊಸಪೇಟೆಯ ಡಿ.ಎಚ್. ಸುಭಾಷ್, ಕಲಬುರಗಿಯ ವಿಠೋಲ್ ನಿಂಗಪ್ಪ, ಈರಣ್ಣ ರುದ್ರೂಡಗಿ, ಕೊಪ್ಪಳದ ಮೌಲಾಸಾಬ್ ಶಾಮೀದ್‌ಸಾಬ್, ಮಲ್ಲಪ್ಪ ಮಾರುತಿ, ಷರೀಫ್ ಸಾಬ್ ಯಮನೂರು ಹಾಗೂ ಯಾದಗಿರಿಯ ರಮೇಶ್ ಹಾಳನೊರೆ ಅವರ ಎಸ್ಸೆಸ್ಸೆಲ್ಸಿ ಅಂಕಪಟ್ಟಿಗಳು ನಕಲಿ ಎಂಬುದು ಗೊತ್ತಾಗಿದೆ. ಆರೋಪಿಗಳು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಹೆಸರಿನಲ್ಲಿ ಎಸ್ಸೆಸ್ಸೆಲ್ಸಿ ಅಂಕಪಟ್ಟಿಗಳನ್ನು ನೀಡಿದ್ದರು. ಆದರೆ, ಇವುಗಳು ನಕಲಿ ಎಂಬುದಾಗಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ಹೇಳಿದೆ’ ಎಂದೂ ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಸಿಬಿಐ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಕಾರ

ಬೆಂಗಳೂರು: ‘ಆರ್ಥಿಕ ಅಪರಾಧಗಳಡಿ ನನ್ನ ವಿರುದ್ಧ ಸಿಬಿಐ ದಾಖಲಿಸಿರುವ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಬಂಧನದಲ್ಲಿರುವ ತೆಲುಗುದೇಶಂ ಪಕ್ಷದ (ಟಿಡಿಪಿ) ವಿಧಾನ ಪರಿಷತ್ ಸದಸ್ಯ ವಕಟಿ ನಾರಾಯಣ ರೆಡ್ಡಿ ಅವರ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದೆ.

‘ನಗರದಲ್ಲಿನ ಸಿಬಿಐ ವಿಶೇಷ ನ್ಯಾಯಾಲಯದ ವಿಚಾರಣೆಗೆ ತಡೆ ನೀಡಬೇಕು ಮತ್ತು ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ವಕಟಿ ನಾರಾಯಣ ರೆಡ್ಡಿ ಸಲ್ಲಿಸಿದ್ದ ಅರ್ಜಿಯ ಮೇಲಿನ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ 19ರಂದು ಪ್ರಕಟಿಸಿದೆ.

‘ಪ್ರಕರಣ ರದ್ದುಗೊಳಿಸಲು ಯಾವುದೇ ಸಾಕ್ಷ್ಯ ಕಾಣುತ್ತಿಲ್ಲ. ಆದ್ದರಿಂದ ಆರೋಪಿಗಳು ವಿಚಾರಣೆ ಎದುರಿಸಬೇಕು’ ಎಂದು ನ್ಯಾಯಪೀಠ ವಿವರಿಸಿದೆ.

ಪ್ರಕರಣವೇನು?: ‘ವಕಟಿ ನಾರಾಯಣ ರೆಡ್ಡಿ ಹೈದರಾಬಾದ್‌ನಲ್ಲಿರುವ ವಿಎನ್‌ಆರ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು. ಬೆಂಗಳೂರಿನ ಭಾರತೀಯ ಕೈಗಾರಿಕಾ ಹಣಕಾಸು ನಿಗಮದಿಂದ (ಐಎಫ್‌ಸಿಐ) 2014-15 ರಲ್ಲಿ ₹ 190 ಕೋಟಿ ಸಾಲ ಮಂಜೂರು ಮಾಡಿಸಿಕೊಂಡಿದ್ದರು. ಆದರೆ, ಇನ್ನೂ ಆ ಸಾಲ ಮರುಪಾವತಿ ಮಾಡಿಲ್ಲ. ಇದರಿಂದ ಬೊಕ್ಕಸಕ್ಕೆ ₹ 205 ಕೋಟಿ ವಂಚನೆ ಆಗಿದೆ’ ಎಂಬುದು ಸಿಬಿಐ ಆರೋಪ. ಸಿಬಿಐ ಪರ ಪಿ.ಪ್ರಸನ್ನ-ಕುಮಾರ್ ವಾದ ಮಂಡಿಸಿದ್ದರು.

ಬಾಲಕ ಅಭಿವೃದ್ಧಿಪಡಿಸಿದ್ದ ಸಾಫ್ಟ್‌ವೇರ್‌ನಿಂದ ಇ–ಮೇಲ್

ಬೆಂಗಳೂರು: ನಗರದ ಶಾಲೆಗಳಿಗೆ ಬಾಂಬ್ ಬೆದರಿಕೆ ಬಂದಿದ್ದ ಪ್ರಕರಣದ ತನಿಖೆ ಮುಂದುವರಿಸಿರುವ ಪೊಲೀಸರು, ತಮಿಳುನಾಡಿನ ಬಾಲಕನೊಬ್ಬ ಅಭಿವೃದ್ಧಿಪಡಿಸಿದ್ದ ಸಾಫ್ಟ್‌ವೇರ್‌ನಿಂದ ಇ–ಮೇಲ್ ಬಂದಿರುವ ಮಾಹಿತಿಯನ್ನು ಕಲೆಹಾಕಿದ್ದಾರೆ.

20ಕ್ಕೂ ಹೆಚ್ಚು ಶಾಲೆಗಳಿಗೆ ಬಾಂಬ್ ಬೆದರಿಕೆ ಹಾಕಿ ಇ–ಮೇಲ್ ಸಂದೇಶಗಳು ಬಂದಿದ್ದವು. ಆಯಾ ಠಾಣೆ ವ್ಯಾಪ್ತಿಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತನಿಖೆಗೆಂದು ಪೊಲೀಸರ ವಿಶೇಷ ತಂಡ ರಚಿಸಲಾಗಿದೆ. ‘ಇ–ಮೇಲ್ ಆಧರಿಸಿ ತನಿಖೆ ನಡೆಸಲಾಗುತ್ತಿದೆ. ತಮಿಳುನಾಡಿನ 17 ವರ್ಷದ ಬಾಲಕ ಅಭಿವೃದ್ಧಿಪಡಿಸಿದ್ದ ಹೊಸ ಸಾಫ್ಟ್‌ವೇರ್‌ನಿಂದ ಇ–ಮೇಲ್‌ಗಳು ಬಂದಿರುವುದು ಗೊತ್ತಾಗಿದೆ. ತಮಿಳುನಾಡಿಗೆ ಹೋಗಿರುವ ಕೆಲ ಪೊಲೀಸರು, ಮತ್ತಷ್ಟು ಮಾಹಿತಿ ಕಲೆಹಾಕುತ್ತಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಭೋಪಾಲ್‌ನ ಶಾಲೆಗಳಿಗೂ ಬೆದರಿಕೆ: ‘ಬೆಂಗಳೂರು ಅಷ್ಟೇ ಅಲ್ಲದೇ, ಭೋಪಾಲ್‌ನ ಕೆಲ ಶಾಲೆಗಳಿಗೂ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಎಲ್ಲ ಸಂದೇಶಗಳು ಪರಸ್ಪರ ಹೋಲಿಕೆಯಾಗುತ್ತಿದ್ದು, ಒಂದೇ ಕಡೆಯಿಂದ ಬಂದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಾಲಕ, ತಾನು ಅಭಿವೃದ್ಧಿಪಡಿಸಿದ್ದ ಸಾಫ್ಟ್‌ವೇರ್ ಮಾರಿದ್ದು, ವಿದೇಶಿ ಪ್ರಜೆಯೊಬ್ಬರು ಖರೀದಿಸಿರುವುದಾಗಿ ಗೊತ್ತಾಗಿದೆ. ಅದೇ ಪ್ರಜೆ ಬೆದರಿಕೆ ಸಂದೇಶ ಕಳುಹಿಸಿರುವ ಅನುಮಾನವಿದ್ದು, ಅವರ ಬಗ್ಗೆ ಮಾಹಿತಿ ಸಿಗಬೇಕಿದೆ’ ಎಂದಿವೆ.

ಕಣ್ಣಾಮುಚ್ಚಾಲೆ ನೆಪ: ಬಾಲಕನ ಚಿನ್ನದ ಸರ ಕಳವು

ಬೆಂಗಳೂರು: ಕಣ್ಣಾ ಮುಚ್ಚಾಲೆ ಆಟದ ನೆಪದಲ್ಲಿ ಬಾಲಕನೊಬ್ಬನ ಗಮನ ಬೇರೆಡೆ ಸೆಳೆದು ಚಿನ್ನದ ಸರವನ್ನು ಕದ್ದೊಯ್ಯಲಾಗಿದ್ದು, ಈ ಸಂಬಂಧ ಗೋವಿಂದರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ದಾಸನಪುರದ ಚಿಕ್ಕವೀರಯ್ಯಪಾಳ್ಯ ನಿವಾಸಿಯೊಬ್ಬರು ಚಿನ್ನದ ಸರ ಕಳ್ಳತನ ಬಗ್ಗೆ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ, ಕುಟುಂಬ ಸಮೇತ ಸಂಬಂಧಿಕರ ಮದುವೆಗೆಂದು ಮೇ 20ರಂದು ಮಾಗಡಿ ರಸ್ತೆಯಲ್ಲಿರುವ ಕಲ್ಯಾಣ ಮಂಟಪವೊಂದಕ್ಕೆ ಬಂದಿದ್ದರು. ಅವರ ಮಗ, ಕಲ್ಯಾಣ ಮಂಟಪದ ಮುಂಭಾಗದಲ್ಲಿ ಮಕ್ಕಳ ಜೊತೆ ಆಟವಾಡುತ್ತಿದ್ದ.’

‘ಬೈಕ್‌ನಲ್ಲಿ ಸ್ಥಳಕ್ಕೆ ಬಂದಿದ್ದ ಇಬ್ಬರು ಅಪರಿಚಿತರು, ಬಾಲಕನನ್ನು ಮಾತನಾಡಿಸಿದ್ದರು. ಕಣ್ಣಾ ಮುಚ್ಚಾಲೆ ಆಡೋಣವೆಂದು ಹೇಳಿ ಬಾಲಕನನ್ನು ಸ್ವಲ್ಪ ದೂರಕ್ಕೆ ಕರೆದೊಯ್ದಿದ್ದರು. ಬಾಲಕನಿಗೆ ಗೊತ್ತಾಗದಂತೆ, ಚಿನ್ನದ ಸರ ಕಿತ್ತುಕೊಂಡಿದ್ದರು. ನಂತರ, ಬಾಲಕನನ್ನು ಸ್ಥಳದಲ್ಲೇ ಬಿಟ್ಟು ಆರೋಪಿಗಳು ಪರಾರಿಯಾಗಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

‘ಕೆಲ ಹೊತ್ತಿನ ನಂತರ ದೂರುದಾರ, ಬಾಲಕನ ಕೊರಳು ನೋಡಿದ್ದರು. ಆದರೆ, ಚಿನ್ನದ ಸರ ಇರಲಿಲ್ಲ. ಬಾಲಕನನ್ನು ವಿಚಾರಿಸಿದಾಗ, ಯಾರೋ ಇಬ್ಬರು ಬಂದಿದ್ದರೆಂದು ಹೇಳಿದ್ದ. ನಂತರ ಠಾಣೆಗೆ ಬಂದು ದೂರು ನೀಡಿದ್ದಾರೆ. ಕೃತ್ಯ ಎಸಗಿ ಆರೋಪಿಗಳು ಪರಾರಿಯಾಗುತ್ತಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದೂ ಹೇಳಿವೆ.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಚನಾಯಕನಹಳ್ಳಿಯ ಶ್ರೀ ಬಸವೇಶ್ವರ ಮಹಾಗಣಪತಿ ಮತ್ತು ಶ್ರೀ ಆಂಜನೇಯ ದೇವಾಲಯಗಳ ಸಂಪ್ರೋಕ್ಷಣೆ, 12ನೇ ವರ್ಷದ ಕುಂಬಾಭಿಷೇಕ ಹಾಗೂ ಮಾರಮ್ಮ, ಸಪಲಮ್ಮ ದೇವಸ್ಥಾನ ಜೀರ್ಣೋದ್ಧಾರ, ಗುರುಮೂರ್ತಿ, ಯಲ್ಲಮ್ಮ ಕಾವೇರಮ್ಮನವರ ನೂತನ ಬಿಂಬ ಪ್ರತಿಷ್ಠಾಪನೆ ಹಾಗೂ ಕುಂಬಾಭಿಷೇಕ ಮಹೋತ್ಸವಕ್ಕೆ ಬಾಳೆಹೊನ್ನೂರು ಶಾಖಾ ಮಠದ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಆರ್‌.ಕೆ.ರಮೇಶ್, ಮದ್ರಜಾಪುರ ಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಗುಮ್ಮಳಾಪುರ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ, ತಾತಯ್ಯನವರ ಮಠದ ಬ್ರಹ್ಮಾನಂದ ಸ್ವಾಮೀಜಿ, ಬೆಳ್ಳಾವಿ ಸಂಸ್ಥಾನ ಮಠದ ಮಹಂತಲಿಂಗ ಶಿವಾಚಾರ್ಯ ಸ್ವಾಮೀಜಿ, ನಾಗಲಾಪುರ ಸಂಸ್ಥಾನ ಮಠದ ತೇಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಜ್ಞಾನಾನಂದ ಸ್ವಾಮೀಜಿ, ಪಂಚಾಯಿತಿ ಅಧ್ಯಕ್ಷ ಮುನಿರತ್ನ ಮುನಿರಾಜು ಇದ್ದರು.

ಬಿಎಂಟಿಸಿ ಬಸ್ ಹರಿದು ಸವಾರ ಸಾವು

ಬೆಂಗಳೂರು: ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಮಂಜುನಾಥ್ (25) ಎಂಬುವವರು ಮೃತಪಟ್ಟಿದ್ದಾರೆ.

‘ಗದಗ ಜಿಲ್ಲೆಯ ಮಂಜುನಾಥ್, ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಸುಂಕದಕಟ್ಟೆಯಲ್ಲಿ ವಾಸವಿದ್ದರು. ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸಪ್ತಗಿರಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೀಣ್ಯ ಸಂಚಾರ ಪೊಲೀಸರು ಹೇಳಿದರು.

‘ಸ್ನೇಹಿತರೊಬ್ಬರು ಊರಿಗೆ ಹೊರಟಿದ್ದರು. ಅವರನ್ನು ಜಾಲಹಳ್ಳಿಗೆ ಬಿಟ್ಟು ಬರಲು ಮಂಜುನಾಥ್ ಬೈಕ್‌ನಲ್ಲಿ ಹೋಗಿದ್ದರು. ರಾತ್ರಿ 9.30ರ ಸುಮಾರಿಗೆ ಸ್ನೇಹಿತರನ್ನು ಬಿಟ್ಟು ವಾಪಸು ಸುಂಕದಕಟ್ಟೆಯತ್ತ ಹೊರಟಿದ್ದರು.’

‘ಪೀಣ್ಯ ಕೈಗಾರಿಕಾ ಪ್ರದೇಶದ 14ನೇ ಅಡ್ಡರಸ್ತೆಯಲ್ಲಿ ಮಂಜುನಾಥ್ ಅವರ ಬೈಕ್‌ಗೆ, ಇನ್ನೊಂದು ಬೈಕ್ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಮಂಜುನಾಥ್ ರಸ್ತೆ ಮಧ್ಯದಲ್ಲಿ ಬಿದ್ದಿದ್ದರು. ಅದೇ ಮಾರ್ಗವಾಗಿ ಹೊರಟಿದ್ದ ಬಿಎಂಟಿಸಿ ಬಸ್ಸಿನ ಚಕ್ರ ಮೈ ಮೇಲೆ ಹರಿದಿತ್ತು. ತೀವ್ರ ಗಾಯಗೊಂಡು ಮಂಜುನಾಥ್ ಮೃತಪಟ್ಟರು’ ಎಂದೂ ತಿಳಿಸಿದರು.

‘ಅಪಘಾತವನ್ನುಂಟು ಮಾಡಿದ್ದ ಬೈಕ್ ಸವಾರ ಹಾಗೂ ಬಿಎಂಟಿಸಿ ಬಸ್ ಚಾಲಕನ ವಿರುದ್ಧ ಅತೀ ವೇಗ ಹಾಗೂ ಅಜಾಗರೂಕತೆ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬೈಕ್ ಹಾಗೂ ಬಸ್ ಅನ್ನು ಈಗಾಗಲೇ ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

ಅತ್ಯಾಚಾರ: ಮನೆ ಮಾಲೀಕ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಾಡಿಗೆ ಮನೆಯಲ್ಲಿದ್ದ ಯುವತಿಯನ್ನು ಬೆದರಿಸಿ ಅತ್ಯಾಚಾರ ಎಸಗಿದ್ದ ಆರೋಪದಡಿ ಮನೆ ಮಾಲೀಕ ಅನಿಲ್ ರವಿಶಂಕರ್ ಪ್ರಸಾದ್ ಎಂಬುವವರನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ಅನಿಲ್, ಟೈಲ್ಸ್ ವ್ಯಾಪಾರಿ. ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಸಂತ್ರಸ್ತ ಯುವತಿ ನೀಡಿದ್ದ ದೂರಿನನ್ವಯ ಆರೋಪಿಯನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಮೂರು ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಯದ್ದು ಎರಡು ಮನೆಗಳಿದ್ದು, ಒಂದರಲ್ಲಿ ಆತ ನೆಲೆಸಿದ್ದ. ಇನ್ನೊಂದು ಮನೆ ಖಾಲಿ ಇತ್ತು. ಪಶ್ಚಿಮ ಬಂಗಾಳದ ಯುವತಿ, ನಗರದ ಕಾಲೇಜೊಂದರಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದರು. ಆರೋಪಿಯ ಮನೆಯಲ್ಲಿ ಬಾಡಿಗೆಗೆ ಇದ್ದರು.’

‘ಯುವತಿ ಮನೆಗೆ ಆಗಾಗ ಸ್ನೇಹಿತರು ಬಂದು ಹೋಗುತ್ತಿದ್ದರು. ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಆರೋಪಿ, ಯುವತಿಯನ್ನು ತರಾಟೆಗೆ ತೆಗೆದುಕೊಂಡಿದ್ದ. ಅಂದಿನಿಂದ ಸ್ನೇಹಿತರು ಬರುವುದು ಕಡಿಮೆಯಾಗಿತ್ತು. ಇದರ ನಡುವೆಯೇ ಸ್ನೇಹಿತನೊಬ್ಬ, ಯುವತಿ ಮನೆಗೆ ಬಂದಿದ್ದ. ಏಕಾಏಕಿ ಮನೆಯೊಳಗೆ ಹೋಗಿ ಸ್ನೇಹಿತನ ಜೊತೆ ಜಗಳ ಮಾಡಿದ್ದ ಆರೋಪಿ, ಪೊಲೀಸರಿಗೆ ದೂರು ಕೊಡುವುದಾಗಿ ಬೆದರಿಸಿ ಕಳುಹಿಸಿದ್ದ’ ಎಂದೂ ಮೂಲಗಳು ತಿಳಿಸಿವೆ.

‘ಸ್ನೇಹಿತ ಬಂದು ಹೋದ ನಂತರ ಆರೋಪಿ, ನಿತ್ಯವೂ ಯುವತಿ ಮನೆಗೆ ಹೋಗಲಾರಂಭಿಸಿದ್ದ. ‘ನೀನು ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದೀಯಾ. ಈ ಬಗ್ಗೆ ಪೊಲೀಸರಿಗೆ ಹೇಳಿ ಜೈಲಿಗೆ ಕಳುಹಿಸುತ್ತೇನೆ’ ಎಂಬುದಾಗಿ ಬೆದರಿಸುತ್ತಿದ್ದ. ಆ ರೀತಿ ಮಾಡಬಾರದೆಂದರೆ ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸುತ್ತಿದ್ದ. ಇದಕ್ಕೆ ಯುವತಿ ಒಪ್ಪಿರಲಿಲ್ಲ.’

‘ಏಪ್ರಿಲ್ 11ರಂದು ಪಿಸ್ತೂಲ್ ಸಮೇತ ಮನೆಗೆ ಹೋಗಿದ್ದ ಆರೋಪಿ, ಯುವತಿಗೆ ಕೊಲೆ ಬೆದರಿಕೆ ಹಾಕಿ ಅತ್ಯಾಚಾರ ಎಸಗಿದ್ದ. ಅದಾದ ನಂತರವೂ ಆರೋಪಿ ಕಿರುಕುಳ ನೀಡಲಾರಂಭಿಸಿದ್ದ. ಬೇಸತ್ತ ಯುವತಿ, ಪೋಷಕರಿಗೆ ವಿಷಯ ತಿಳಿಸಿದ್ದರು. ಅವರ ಮೂಲಕ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers

WANTED EXPERIENCED male graphic designers and signage workers in and around Kammanahalli area. Contact 9980904080 Sashi

Teachers/ Professors

WANTED TEACHERS for Al-Ameen Kambalposh English High School and Nursery Schools, 1/3 Col. Hill Road, Shivajinagar, Bangalore-51. QR: BSc (PCMB/ CBZ) BEd, BA BEd (English/ Social), NTT. Preference: local, experienced. Apply: madani1974.trust@gmail.com

ELITE PUBLIC SCHOOL, Kempegowda layout, Laggere, Bangalore, requires teachers, KANNADA LITERATURE with B.Ed, MATHEMATICS: M.Sc in Mathematics. 9980200444 / 9972223344. Mail: elitepublicschool@yahoo.co.in

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn upto 40,000/- Contact: 9741401834

AUTOMOTIVE

Four Wheelers Selling

Toyota

ACCIDENT VEHICLE for sale Toyota Liva VXD, 2018 model lying at owners place. Quote without RC. Contact 9845298248

Mahindra

SCHOOL BUS
Mahindra 24 Seater very good condition is for SALE. Contact: Camlin English School RPC Layout, Vijayanagar, Bangalore. 080-23301363 6360644721.

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 1 Lakhs: 9606701007/ 8892501007

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph:2553 4194.
TENDER NOTICE
Quotations are invited from reputed Agencies for the provide /supply of following items
1. Conduct of Value Added Courses for the year 2022-23
2. Purchase of Digital Storage Oscilloscope for ECE Dept-VIT.
3. Supply of 300 MBPS Internet Leased line to VIT.
4. Earth work excavation for all round existing Hospital building at Kasavanahalli.
For more details visit: www.reddyjanasangha.org
Quotations should be addressed to "The General Secretary" at the above address within 10 days from this advertisement.

PERSONAL

Change of Name

WE, PUROHIT Ritesh and Purohit Swati Rao, Residing at No. 841, HAL 3rd stage 2nd main, New Tippasandra, Bangalore 560075, have changed our minor daughter's name from PUROHIT KAIRA AADYA to KAIRA AADYA RAO PUROHIT, vide affidavit dated 23.05.2022 before Notary A. Idinabba, Bangalore. Henceforth she shall be known as KAIRA AADYA RAO PUROHIT only.

6396283L HAV/CLK SUBRAMANNYA UPADHYA 2ATC Father Name records GOPAL RAO Instead of GOPALRAO UPADHYA Notary KV Mani, Bangalore

I, SHARADH V Deshpande S/o Vijay Kumar Deshpande, Residing at #266 10th Cross Telecom Layout KP Agrahara Bangalore- 560023 Have Changed My Name to Sharadh Deshpande S/o Vijay Kumar Deshpande Vide Affidavit Dated 21-05-2022, Before Notary B.A Lakshminarayana Rao, Bangalore, Old Names are Abandoned, Henceforth I shall be called as Sharadh Deshpande only.

I, ANITA RAJESH AGARWAL, W/o. Rajesh Agarwal, Residing at No. 1201, Tower-3, 12th Floor, Sattva Devinity Mysore Road, Nayandahalli, BANGALORE-560026, have changed my name to ANITA AGARWAL Vide Affidavit dated 18-05-2022 sworn before Advocate & Notary S.Vijayakumar, Bengaluru

I, BHARATHI G. @ KALAVATHI G. residing at No. 13, Nanjamba Agrahara Raghavendra Nagar, South Chamrajpete, Bangalore 560018 declare that both these names pertain to me and henceforth I shall be known as BHARATHI G., vide affiavit dated 29.04.2022 before Notary Ratna N., Bangalore.

I, PRATEEKSHANKAR DIXIT, Residing at T18 Block B2 Mahaveer Varna Apartment SH35 Ardendale Kannamangala Bengaluru-560067 have changed my name to PRATEEKSHANKAR PRANAYSHANKAR DIXIT s/o. Pranayshankar Dixit vide affidavit dated 20-05-2022 sworn before notary: J.Anand Kumar,Bengaluru

I, SHEETHAL CHANDINI have changed my name to SHEETHAL CHANDINI SOUNDARARAJAN vide affidavit dated: 23/5/2022 Before Notary Shreeshail.B. Gobbani Bangalore.

I, BABLI RANI, residing at #B306 Sarjapur Road, Kodathi Village, DS Max Sprinkles, Chikkakannalli, Bangalore 560035, have changed my name to BABLI DAHIYA, vide affidavit dated 21.05.2022 before Notary B.M. Chandrashekar, Bangalore. Henceforth I shall be known as BABLI DAHIYA only.

I, BHUVANESHWARI.K W/o Ramesh Godithi, R/a No.328 4th Cross 13th Main Road 5th Sector HSR Layout Bangalore- 560102, have changed my name from BHUVANESHWARI.K or BHUVANESWARI.K to "BHUVANESWARI GODITHI" Vide affidavit dated 18-05-2021. Sworn before Advocate & Notary KV.Mani Bangalore-560030

I, SIMRATPAL Singh Dhillon Residing at No- 89, 3rd Floor, T-Bayanna Building, Mare Gowda Layout, Immadihalli, Whitefield, Bengaluru- 560066. Have Changed my name to SIMRATPAL SINGH vide affidavit dated 23.05.2022 before notary Veena J Bangalore

I, MUNEER SHAIK EMAM SAB residing at No. 00, 2nd Cross, Near Anushree Bakery, V.V. Extension, Hosakote, Bengaluru Rural-562114, have changed my name to MUNEER vide affidavit dated 11/05/2022 sworn before notary L.Puttaraju, Bengaluru.

I, RAGHAVENDRA Prabhu R/o #62, 6th cross, 2nd Main, Sir M.V Layout, Tindlu, Vidyaranyapura Bengaluru-560097 have changed my minor daughter's name from Aditi Raghavendra Prabhu to Aditi Prabhu for all purposes.

I, KARISHMA, residing at No. 257/a 4th cross Mysore Road, Tippu Nagar Bengaluru South, Chamrajpet, Bengaluru 560018, have changed my name to RESHMA, vide affidavit dated 23.05.2022 before Notary Gangaraju B.N., Bangalore. Henceforth I shall be known as RESHMA only.

I, ANIL R/at Honnenahalli, Bindiganaveele Hobli, Nagamangala Taluk, Doddabala, Mandya- 571802 have changed my name to ANIL BASAVARAJU vide affidavit dated: 17/5/2022 Before Notary B. Prasanna Bangalore.

DAMAYANDI M/O 14832750K- Sep/MT-SHIBUKUMAR G R/a Edathara, Uliyazhathura, Thiruvananthapuram, Kerala changed name from DAMAYANDI to REMA R notary B.M. Chandrashekar, Bangalore.

I, NAVEEDA residing at No. 74, 14th Cross, Gangondanahalli, Nayandahalli Post, Bengaluru-560039, have changed my name to NAVEEDA HAFIZ vide affidavit dated 11/05/2022 sworn before notary L.Puttaraju, Bengaluru.

6396283L HAV/CLK SUBRAMANNYA UPADHYA 2ATC Mother Name records LAKSHMI RAO Instead of LAXMI DEVI UPADHYA Notary KV Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SUCCESS ಕ್ಲಾಸಿಫೈಡ್ಸ್



ADMISSION CORNER

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Malathahally, Nagarabhavi, Bengaluru-560056
Phone: 23213282, 29773282

ADMISSION OPEN - COURSES OFFERED
- Computer Science & Engg
- Electronics & Commn Engg
- Mechanical Engineering
- Electrical & Electronics Engg
- Civil Engineering
- Apparel Design & Fashion Technology

RGMP-22301

For details contact Mobile: 8553344666, 9448865597

ಪಿಯು ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶ

ವಾಣಿಜ್ಯ, ವಿಜ್ಞಾನಕ್ಕೆ ಹೆಚ್ಚಿದ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯೂ ಪಿಯು ಮೊದಲ ವರ್ಷಕ್ಕೆ ವಾಣಿಜ್ಯ ವಿಭಾಗಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಜತೆಗೆ ವಿಜ್ಞಾನ ಕೋರ್ಸ್‌ಗೂ ಮತ್ತೆ ಬೇಡಿಕೆ ಬಂದಿದೆ.

ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾದ ಬಳಿಕ ವಿದ್ಯಾರ್ಥಿಗಳು ಪಿಯು ಕಾಲೇಜಗಳ ಮೆಟ್ಟಿಲೇರುತ್ತಿದ್ದಾರೆ. ಉದ್ಯೋಗಾವಕಾಶಗಳು ಹೆಚ್ಚುತ್ತಿರುವುದರಿಂದ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಾಣಿಜ್ಯ ವಿಭಾಗವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

'ಕಡಿಮೆ ಆದಾಯ ಇರುವ ಕೆಲವು ವಿದ್ಯಾರ್ಥಿಗಳು ಪಿಯು ಮುಗಿದ ತಕ್ಷಣ ಉದ್ಯೋಗ ಮಾಡಲು ಬಯಸುತ್ತಾರೆ. ಹೀಗಾಗಿ, ಕಂಪ್ಯೂಟರ್ ಜ್ಞಾನ ಮತ್ತು ವಾಣಿಜ್ಯ ವಿಷಯಗಳ ಪರಿಣತಿಯಿಂದ ಉದ್ಯೋಗಗಳು ದೊರೆಯುವುದು ಸುಲಭ ಎನ್ನುವ ಅಭಿಪ್ರಾಯ ಮೂಡಿದೆ. ಹೀಗಾಗಿ, ವಾಣಿಜ್ಯ ಕೋರ್ಸ್‌ಗೆ ಬೇಡಿಕೆ ಸಾಮಾನ್ಯ' ಎಂದು ಅಧ್ಯಾಪಕರು ಹೇಳುತ್ತಾರೆ.

ಈ ಬಾರಿ ವಿಜ್ಞಾನ ಅಧ್ಯಯನಕ್ಕೆ ವಿದ್ಯಾರ್ಥಿಗಳು ಹೆಚ್ಚು ಒಲವು ತೋರುತ್ತಿದ್ದಾರೆ. ಶೇ 80ಕ್ಕಿಂತ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳು ವಿಜ್ಞಾನ ಕೋರ್ಸ್ ಆಯ್ಕೆ ಮಾಡಿಕೊಳ್ಳುವುದು ಸಾಮಾನ್ಯವಾಗಿದೆ.

ಜತೆಗೆ, ಆಧುನಿಕ ತಂತ್ರಜ್ಞಾನದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ವಿಜ್ಞಾನ ವಿಭಾಗ ಆಯ್ಕೆ ಮಾಡಿಕೊಳ್ಳಲು ಕಾರಣವಾಗಿದೆ. ಮಷಿನ್ ಲರ್ನಿಂಗ್ (ಎಂಎಲ್) ಮತ್ತು ಕೃತಕ ಬುದ್ಧಿಮತ್ತೆಯಂತ (ಎಐ) ಬೇಡಿಕೆ ಇರುವ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಹೀಗಾಗಿ, ಪಿಯುನಲ್ಲಿ ವಿಜ್ಞಾನ ವಿಭಾಗ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಪ್ರಾಂಶುಪಾಲರೊಬ್ಬರು ತಿಳಿಸಿದರು.

ಕಳೆದ ಐದು ವರ್ಷಗಳಿಂದ ವಿಜ್ಞಾನ ವಿಭಾಗವು ಆಕರ್ಷಣೆ ಕಳೆದುಕೊಂಡಿತ್ತು. ಎಂಜಿನಿಯರಿಂಗ್ ಸೀಟುಗಳು ಸಹ ಖಾಲಿ ಉಳಿಯುವುದು ಸಾಮಾನ್ಯವಾಗಿದೆ. ಆದರೆ, ಕೋವಿಡ್ ನಂತರ ತಂತ್ರಜ್ಞಾನದಲ್ಲಿ ಹಲವು ರೀತಿಯ ಬೆಳವಣಿಗೆಗಳು ಆಗಿರುವುದರಿಂದ ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಎಂದು ಅವರು ವಿವರಿಸಿದರು.

ಪ್ರವೇಶಕ್ಕೆ ತೊಡಕು: ಬಹುತೇಕ ಪ್ರಾಧ್ಯಾಪಕರು ಪಿಯು ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ತೊಡಗಿರುವುದರಿಂದ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಗೆ ತೊಡಕಾಗಿದೆ ಎಂದು ಅಧ್ಯಾಪಕರೊಬ್ಬರು ದೂರಿದರು.

ಸರ್ಕಾರಿ ಕಾಲೇಜುಗಳತ್ತ ಒಲವು

ಮೂಲಸೌಕರ್ಯಗಳು ಸುಧಾರಿಸಿರುವುದರಿಂದ ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಆಸಕ್ತಿ ತೋರಿಸುತ್ತಿದ್ದಾರೆ.

ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ನಿರ್ಬಂಧ ವಿಧಿಸಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದರೆ ಮತ್ತೊಂದು ವಿಭಾಗವನ್ನು ತೆರೆಯಲು ಅನುಮತಿ ನೀಡುವುದಾಗಿ ಸರ್ಕಾರ ತಿಳಿಸಿದೆ.

'ಶಾಸಕರ ಅನುದಾನದಲ್ಲಿ ಕಾಲೇಜುಗಳನ್ನು ಸುಧಾರಿಸುವ ಕಾರ್ಯಗಳು ನಡೆಯುತ್ತಿವೆ. ಮೂಲಸೌಕರ್ಯಗಳನ್ನು ಕಲ್ಪಿಸಲು ಶಾಸಕರು ನೆರವಾಗುತ್ತಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ನೇಮಕವಾದರೆ ಸರ್ಕಾರಿ ಕಾಲೇಜುಗಳಲ್ಲಿ ಫಲಿತಾಂಶ ಮತ್ತಷ್ಟು ಸುಧಾರಿಸಲಿದೆ. ನಮ್ಮ ಕಾಲೇಜಿನಲ್ಲಿ ಮೊದಲು 450 ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದರು. ಈಗ ವಿದ್ಯಾರ್ಥಿಗಳ ಸಂಖ್ಯೆ 700 ದಾಟಿದೆ' ಎಂದು ಅಗರ-ಎಚ್‌ಎಸ್‌ಆರ್ ಬಡಾವಣೆಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರಾಜಗೋಪಾಲ್ ತಿಳಿಸಿದರು.

ಸವಾರನ ಮೇಲೆ ಕಾರು ಹರಿಸಿದ ವೈದ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ನಾಗರಬಾವಿ ಬಳಿ ದ್ವಿಚಕ್ರ ವಾಹನ ಸವಾರರೊಬ್ಬರ ಮೇಲೆ ವೈದ್ಯೆಯೊಬ್ಬರು ಕಾರು ಹರಿಸಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಮೇ 21ರಂದು ಅಪಘಾತ ಸಂಭವಿಸಿದ್ದು, ಸವಾರ ಹಾಗೂ ವೈದ್ಯ ರಾಜಿ ಸಂಧಾನ ಮಾಡಿಕೊಂಡಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

'ವೈದ್ಯೆ ಚಲಾಯಿಸುತ್ತಿದ್ದ ಕಾರು, ಎದುರಿಗೆ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಉಜ್ಜಿಕೊಂಡು ಹೋಗಿತ್ತು. ಅಪಘಾತವಾದರೂ ಕಾರು ನಿಲ್ಲಿಸದ ವೈದ್ಯೆ, ಸವಾರನ ಮೇಲೆಯೇ ಚಕ್ರ ಹರಿಸಿದ್ದರು. ಅಪಘಾತದಿಂದಾಗಿ ಸವಾರನ ಬೆನ್ನು ಹಾಗೂ ಕಾಲುಗಳಿಗೆ ಗಾಯಗಳಾಗಿವೆ' ಎಂದೂ ಮೂಲಗಳು ತಿಳಿಸಿವೆ.

'ಚಿಕಿತ್ಸೆ ಕೊಡಿಸಿ, ಪರಿಹಾರ ನೀಡುವುದಾಗಿ ಸವಾರನಿಗೆ ವೈದ್ಯೆ ಭರವಸೆ ನೀಡಿದ್ದಾರೆ. ಹೀಗಾಗಿ, ಸವಾರ ಯಾವುದೇ ದೂರು ನೀಡಿಲ್ಲ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

₹ 10 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಗರದ ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಭಾನುವಾರ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು. 'ಬಂಧಿತರಿಂದ ₹ 10 ಲಕ್ಷ ಮೌಲ್ಯದ 5 ಕೆ.ಜಿ ಗಾಂಜಾ, 260 ಗ್ರಾಂ ಹ್ಯಾಶಿಷ್, 20 ಎಲ್‌ಎಸ್‌ಡಿ ಕಾಗದ ಚೂರು, ಮೂರು ಮೊಬೈಲ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ತಿಳಿಸಿದರು.

ವಿಶ್ವೇಶ್ವರಯ್ಯ ಟರ್ಮಿನಲ್: ಜೂ.6ರಿಂದ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್

ಬೆಂಗಳೂರು: ನಿರ್ಮಾಣಗೊಂಡು ಉದ್ಘಾಟನೆಗಾಗಿ 14 ತಿಂಗಳಿಂದ ಕಾದಿದ್ದ ಬೈಯ್ಯಪ್ಪನಹಳ್ಳಿ ಬಳಿಯ ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಕಾರ್ಯಾರಂಭಕ್ಕೆ ಕೊನೆಗೂ ಕಾಲ ಕೂಡಿ ಬಂದಿದ್ದು, ಜೂನ್ 6ರಿಂದ ಮೂರು ರೈಲುಗಳ ಸಂಚಾರ ಆರಂಭಿಸಲು ನೈರುತ್ಯ ರೈಲ್ವೆ ಮುಂದಾಗಿದೆ.

ಮೊದಲ ಹಂತದಲ್ಲಿ ವಾರದಲ್ಲಿ ಮೂರು ದಿನ ಬೆಂಗಳೂರಿನಿಂದ ಹೊರಡುವ ಬಾಣಸವಾಡಿ-ಎರ್ನಾಕುಲಂ ಎಕ್ಸ್‌ಪ್ರೆಸ್ ರೈಲು(ರೈಲುಗಾಡಿ ಸಂಖ್ಯೆ 12684), ಬಾಣಸವಾಡಿ-ತಿರುವನಂತಪುರ (16320), ಬಾಣಸವಾಡಿ-ಪಟ್ನಾ (22354) ರೈಲುಗಳ ಸಂಚಾರವನ್ನು ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ನಿಂದ ಕಾರ್ಯಾಚರಣೆಗೊಳಿಸಲು ನಿರ್ಧರಿಸಿ ವೇಳಾಪಟ್ಟಿ ಪ್ರಕಟಿಸಿದೆ.

ಬೈಯಪ್ಪನಹಳ್ಳಿ ಮತ್ತು ಬಾಣಸವಾಡಿ ರೈಲು ನಿಲ್ದಾಣಗಳ ನಡುವೆ ತಲೆ ಎತ್ತಿರುವ ವಿಮಾನ ನಿಲ್ದಾಣ ಮಾದರಿಯ ರೈಲು ನಿಲ್ದಾಣ ಕಾಮಗಾರಿ ಪೂರ್ಣಗೊಂಡರೂ ಕಾರ್ಯಾಚರಣೆ ಆರಂಭವಾಗಿರಲಿಲ್ಲ. ಪ್ರಧಾನ ಮಂತ್ರಿಯಿಂದ ಉದ್ಘಾಟನೆ ಮಾಡಿಸಲು ಕಾಯಲಾಗುತ್ತಿದೆ ಎಂಬುದನ್ನು ನೈರುತ್ಯ ರೈಲ್ವೆ ಅಲ್ಲಗಳೆದಿದೆ.

'ಯಶವಂತಪುರ ಮತ್ತು ಕೆಎಸ್‌ಆರ್(ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ) ನಿಲ್ದಾಣದ ಮೇಲಿನ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಈ ಟರ್ಮಿನಲ್ ನಿರ್ಮಿಸಲಾಗಿದೆ. ಕೋವಿಡ್ ಸಂದರ್ಭದಲ್ಲಿ ರೈಲುಗಳ ಸಂಖ್ಯೆ ಕಡಿಮೆ ಮಾಡಿದ್ದರಿಂದ ಆ ಎರಡು ನಿಲ್ದಾಣಗಳ ಮೇಲಿನ ಒತ್ತಡ ಕಡಿಮೆಯೇ ಇತ್ತು. ನಿಧಾನವಾಗಿ ಎಲ್ಲ ರೈಲುಗಳ ಸಂಚಾರ ಆರಂಭಿಸಲಾಗಿದ್ದು, ಒತ್ತಡ ಹೆಚ್ಚಾಗಿರುವುದರಿಂದ ಈಗ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಕಾರ್ಯಾಚರಣೆ ಸ್ಥಳಾಂತರಿಸಲಾಗುತ್ತಿದೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನಿಶ್ ಹೆಗಡೆ ಸ್ಪಷ್ಟಪಡಿಸಿದರು.

'ಈ ಟರ್ಮಿನಲ್‌ನಲ್ಲೇ ರೈಲುಗಳ ತಪಾಸಣೆ ಮತ್ತು ನಿರ್ವಹಣೆ ಘಟಕವಿದೆ. ಅದು 11 ತಿಂಗಳಿಂದ ಕಾರ್ಯಾಚರಣೆಯಲ್ಲಿದೆ. ನಿಲ್ದಾಣಕ್ಕೆ ಪ್ರಯಾಣಿಕರು ಬರಲು ರಸ್ತೆ ವ್ಯವಸ್ಥೆ ಸಮರ್ಪಕವಾಗಿ ಇರಲಿಲ್ಲ. ಅವೆಲ್ಲವೂ ಈಗ ಪೂರ್ಣಗೊಂಡಿದೆ. ಹಂತ-ಹಂತವಾಗಿ ರೈಲುಗಳ ಕಾರ್ಯಾಚರಣೆ ಈ ನಿಲ್ದಾಣದಿಂದ ಆರಂಭವಾಗಲಿದೆ' ಎಂದು ವಿವರಿಸಿದರು.

ಕೊಲೆ: ಎಂಟು ವರ್ಷ ಬಳಿಕ ಮತ್ತೊಬ್ಬ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಉದಯ್ ರಾಜಸಿಂಗ್ (61) ಎಂಬುವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ಮಧು ಅಲಿಯಾಸ್ ಮಧುಸೂದನ್ (27), ಎಂಟು ವರ್ಷಗಳ ಬಳಿಕ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

'ಬ್ಯಾಂಕೊಂದರ ನಿವೃತ್ತ ಉದ್ಯೋಗಿ ಆಗಿದ್ದ ಉದಯ್, ಪತ್ನಿ ಸುಶೀಲಾ (57) ಜೊತೆ ಲಕ್ಕಸಂದ್ರದಲ್ಲಿ ವಾಸವಿದ್ದರು. ತಮ್ಮ ಬಳಿ ಇದ್ದ ₹ 18 ಕೋಟಿ ಮೌಲ್ಯದ ವಜ್ರದ ನೆಕ್ಲೇಸ್ ಮಾರಾಟ ಮಾಡಲು ಮುಂದಾಗಿದ್ದರು. ಅದನ್ನು ತಿಳಿದಿದ್ದ ಮಧು ಹಾಗೂ ಇತರೆ ಆರೋಪಿಗಳು, ಗ್ರಾಹಕರ ಸೋಗಿನಲ್ಲಿ 2014ರ ಮಾರ್ಚ್ 25ರಂದು ಮನೆಗೆ ನುಗ್ಗಿದ್ದರು. ಸುಶೀಲಾ ಮೇಲೆ ಹಲ್ಲೆ ಮಾಡಿ, ಉದಯ್ ಅವರನ್ನು ಕೊಂದಿದ್ದರು. ವಜ್ರದ ನೆಕ್ಲೇಸ್ ಸಮೇತ ಪರಾರಿಯಾಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಮುಖ ಆರೋಪಿಗಳಾದ ಅಭಿಷೇಕ್, ಶ್ರೀಧರ್ ಸೇರಿದಂತೆ ಆರು ಆರೋಪಿಗಳನ್ನು ಈ ಹಿಂದೆಯೇ ಬಂಧಿಸಲಾಗಿತ್ತು. ಅವರೆಲ್ಲರಿಗೂ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಆದರೆ, ಮಧು ತಲೆಮರೆಸಿಕೊಂಡು ಓಡಾಡುತ್ತಿದ್ದ. ಇತ್ತೀಚೆಗೆ ಆತನನ್ನು ಬಂಧಿಸಲಾಗಿದೆ. ಈತನ ವಿರುದ್ಧ ಪ್ರತ್ಯೇಕ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು' ಎಂದೂ ತಿಳಿಸಿವೆ.

'ಆರೋಪಿಗಳು ಮೈಸೂರು ಹಾಗೂ ಬೆಂಗಳೂರಿನ ಹಲವರ ಬಳಿ ಸಾಲ ಮಾಡಿದ್ದರು. ಅದನ್ನು ತೀರಿಸುವುದಕ್ಕಾಗಿ ಉದಯ್ ಅವರನ್ನು ಕೊಂದು ವಜ್ರದ ನೆಕ್ಲೇಸ್‌ಕದ್ದಿದ್ದರು. ₹ 18 ಕೋಟಿ ಮೌಲ್ಯದ ನೆಕ್ಲೇಸನ್ನು ಲಂಡನ್‌ನ ಆಭರಣ ವ್ಯಾಪಾರಿಯೊಬ್ಬರಿಗೆ ಮಾರಿದ್ದರು. ಬಂದ ಹಣವನ್ನು ಹಂಚಿಕೊಂಡು, ಸಾಲ ತೀರಿಸಿದ್ದರು' ಎಂದು ಪೊಲೀಸರು ಹೇಳಿದರು.

ಹಾಪ್‌ಕಾಮ್ಸ್ ಆವರಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಮಾವು ಮತ್ತು ಹಲಸು ಮಾರಾಟ ಮೇಳಕ್ಕೆ ತೋಟಗಾರಿಕೆ ಸಚಿವ ಮುನಿರತ್ನ ಚಾಲನೆ ನೀಡಿ ಮಾವಿನ ಹಣ್ಣು ವೀಕ್ಷಿಸಿದರು. ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ ಇದ್ದಾರೆ —ಪ್ರಜಾವಾಣಿ ಚಿತ್ರ

ಓಮನ್ ದೇಶದ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಬಾಗಲೂರು ಠಾಣೆ ವ್ಯಾಪ್ತಿಯ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಅಬ್ದುಲ್ ಅಜೀರ್ (22) ಎಂಬುವರು, ಕಾಲೇಜಿನ ವಸತಿಗೃಹದ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಓಮನ್ ದೇಶದ ಪ್ರಜೆಯಾಗಿದ್ದ ಅಬ್ದುಲ್, ಬಿ.ಸಿ.ಎ ವ್ಯಾಸಂಗಕ್ಕಾಗಿ ನಗರಕ್ಕೆ ಬಂದಿದ್ದರು. ಮೇ 21ರಂದು ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಮರುದಿನ ಬೆಳಿಗ್ಗೆ ವಿಷಯ ಗೊತ್ತಾಗಿದೆ. ಸ್ನೇಹಿತರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಓದಲು ಕಷ್ಟವಾಗುತ್ತಿದೆ. ಪರೀಕ್ಷೆಯಲ್ಲಿ ಅನುತ್ತೀರ್ಣವಾಗುವ ಭಯವಿದೆ' ಎಂಬುದಾಗಿ ಸ್ನೇಹಿತರ ಬಳಿ ಅಬ್ದುಲ್ ಹೇಳಿಕೊಂಡಿದ್ದರೆಂದು ಗೊತ್ತಾಗಿದೆ. ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ತಿಳಿಸಿವೆ.

80 ವರ್ಷದ ವೃದ್ಧೆಯೂ ಆರೋಪಿ..!

ವರದಕ್ಷಿಣೆ ಕಿರುಕುಳ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯ ಮತ್ತು ವಯೋಸಹಜ ಕಾರಣದಿಂದಾಗಿ ಹಾಸಿಗೆ ಹಿಡಿದಿದ್ದ 80 ವರ್ಷದ ವೃದ್ಧೆಯೂ ಸೇರಿದಂತೆ ಒಂದೇ ಕುಟುಂಬದ ಎಂಟು ಸದಸ್ಯರ ವಿರುದ್ಧ ದಾಖಲಾಗಿದ್ದ ವರದಕ್ಷಿಣೆ ಕಿರುಕುಳ ಆರೋಪವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನಮ್ಮ ವಿರುದ್ಧ ದಾವಣಗೆರೆಯ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ಕೋರ್ಟ್‌ನಲ್ಲಿ ನಡೆಯುತ್ತಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಗೊಳಿಸಬೇಕು' ಎಂದು ಕೋರಿ ಚಿತ್ರದುರ್ಗದ ರಾಮದಾಸ್ ಕಾಂಪೌಂಡ್‌ನ ಕೊತ್ವಾಲ್ ನಗರ ನಿವಾಸಿ ಮೊಹಮದ್ ಶಮೀರ್ ಸೇರಿದಂತೆ ಪರಿವಾರದ ಎಂಟು ಜನರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಅರ್ಜಿದಾರರ ವಿರುದ್ಧ ಮೊಹಮದ್ ಶಮೀರ್ ಪತ್ನಿ ಡಿ.ಎನ್. ಜಾಸ್ಮೀನ್ ನೀಡಿರುವ ದೂರಿನಲ್ಲಿ ಯಾವುದೇ ಹುರುಳಿಲ್ಲ. ವರದಕ್ಷಿಣೆ ತಡೆ ಕಾಯ್ದೆ-1961ರ ಕಲಂ 3 ಮತ್ತು 4ರ ಅಡಿಯಲ್ಲಿ ಈ ರೀತಿ ದೂರು ಸಲ್ಲಿಸುವಾಗ ಮುಂದೇನಾಗುತ್ತದೆ ಎಂಬುದರ ಪರಿಣಾಮಗಳನ್ನು ಫಿರ್ಯಾದುದಾರ ಪತ್ನಿ ಸರಿಯಾಗಿ ಅವಲೋಕಿಸಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟು ದೂರು ವಜಾಗೊಳಿಸಿದೆ.

ಪ್ರಕರಣವೇನು?: ದಾವಣಗೆರೆಯ ಎಸ್.ಎಸ್. ಲೇ ಔಟ್ 'ಎ' ಬ್ಲಾಕ್ ನಿವಾಸಿಯಾದ 25 ವರ್ಷದ ಜಾಸ್ಮೀನ್ 2020ರ ಅಕ್ಟೋಬರ್ 24ರಂದು ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ 29 ವರ್ಷದ ಮೊಹಮದ್ ಶಮೀರ್ ಅವರನ್ನು ಮದುವೆಯಾಗಿದ್ದರು.

ಮದುವೆಯ ನಂತರ 2021ರ ಆಗಸ್ಟ್ 22 ರಂದು ಪೊಲೀಸರಿಗೆ ದೂರು ನೀಡಿದ್ದ ಜಾಸ್ಮಿನ್, 'ನನ್ನ ಪೋಷಕರು ಮದುವೆಯ ವೇಳೆ, ಮೊಹಮದ್ ಶಮೀರ್ ಅವರಿಗೆ ಐದು ಲಕ್ಷ ನಗದು, ಐದು ತೊಲ ಬಂಗಾರ, ಪಾತ್ರೆ ಪಡಗ ಹಾಗೂ ಇತರೆ ವಸ್ತುಗಳನ್ನು ನೀಡಿ ಖರ್ಚು ಹಾಕಿ ಮದುವೆ ಮಾಡಿಕೊಟ್ಟಿದ್ದರು. ಶಮೀರ್ ಕುಟುಂಬದವರು ಮದುವೆ ದಿನ ಮತ್ತೂ ಐದು ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಕೊಡದಿದ್ದರೆ ಮದುವೆ ನಿಲ್ಲಿಸುವುದಾಗಿ ಬೆದರಿಕೆ ಹಾಕಿದ್ದರು. ಪರಿಣಾಮ ನಮ್ಮ ಪೋಷಕರು ಸಾಲ ಮಾಡಿ ಈ ಹಣವನ್ನು ಕೊಟ್ಟಿದ್ದರು. ಆದರೆ, ಮದುವೆಯ ನಂತರ ನನ್ನ ಗಂಡನ ತಾಯಿ, ನಾದಿನಿ, ಮೈದುನ ಹಾಗೂ ಪರಿವಾರದವರು ನನ್ನ ಜರಿಯಲಾರಂಭಿಸಿದರು. ನೀನು ಕುಳ್ಳಗಿದ್ದೀಯ, ಕೀಳು ಜಾತಿಗೆ ಸೇರಿದ್ದೀಯ ಎಂದು ಹಿಂಸೆ ನೀಡತೊಡಗಿದರು. ನನ್ನ ಶೀಲ ಶಂಕಿಸಿ ಮಾನಸಿಕ, ದೈಹಿಕ ಹಿಂಸೆ ನೀಡಿದ್ದಾರೆ' ಎಂದು ಆರೋಪಿಸಿದ್ದರು.

ದೂರಿನ ಅನುಸಾರ ದಾವಣಗೆರೆ ಮಹಿಳಾ ಪೊಲೀಸ್ ಠಾಣೆ ಪೊಲೀಸರು ಐಪಿಸಿಯ ವಿವಿಧ ಕಲಂಗಳು ಹಾಗೂ ವರದಕ್ಷಿಣೆ ತಡೆ ಕಾಯ್ದೆ ಆರೋಪದಡಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದನ್ನು ರದ್ದುಗೊಳಿಸುವಂತೆ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಮೊಹಮದ್ ಶಮೀರ್ ಮತ್ತು ಕುಟುಂಬದ ಸದಸ್ಯರ ಪರ ಹಿರಿಯ ವಕೀಲ ಹಷ್ಮತ್ ಪಾಷ ವಾದ ಮಂಡಿಸಿದ್ದರು.

ಬಟ್ಟೆ ವ್ಯವಹಾರದಲ್ಲಿ ನಷ್ಟ: ಮಳಿಗೆಯಲ್ಲಿ ಕಳ್ಳತನ

ಬೆಂಗಳೂರು: ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿರುವ ಬೆಳ್ಳಿ ಮಾರಾಟ ಮಳಿಗೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ರಾಹುಲ್ ಜೈನ್, ರಾಜೇಶ್ ಹಾಗೂ ಮಧು ಬಂಧಿತರು. ಇವರಿಂದ ₹ 9 ಲಕ್ಷ ಮೌಲ್ಯದ 8 ಕೆ.ಜಿ ಬೆಳ್ಳಿ ಬಿಸ್ಕತ್‌ಗಳು, ಬೆಳ್ಳಿ ಸಾಮಗ್ರಿ ಹಾಗೂ ₹ 3.38 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಉತ್ತಮ್ ಜೈನ್ ಮಾಲೀಕತ್ವದ ಮಳಿಗೆಯಲ್ಲಿ ಆರೋಪಿ ರಾಹುಲ್ ಅರೆಕಾಲಿಕ ಕೆಲಸಕ್ಕೆ ಸೇರಿದ್ದ. ಜೊತೆಗೆ, ಪ್ರತ್ಯೇಕವಾಗಿ ಬಟ್ಟೆ ವ್ಯವಹಾರ ಸಹ ಮಾಡುತ್ತಿದ್ದ. ವ್ಯವಹಾರದಲ್ಲಿ ನಷ್ಟ ಉಂಟಾಗಿದ್ದರಿಂದ ಆರ್ಥಿಕ ತೊಂದರೆಗೆ ಸಿಲುಕಿದ್ದ. ಹೀಗಾಗಿ, ಕೆಲಸಗಾರರ ಜೊತೆ ಸೇರಿ ಕಳ್ಳತನ ಮಾಡಿದ್ದ' ಎಂದೂ ತಿಳಿಸಿದರು.

ಕ್ಯಾಮೆರಾದಲ್ಲಿ ಸೆರೆ: 'ಉತ್ತಮ್ ಜೈನ್ ಅವರು ಮೇ 21ರಂದು ರಾತ್ರಿ ಮಳಿಗೆಗೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದರು. ಮಾಸ್ಕ್ ಹಾಗೂ ಹೆಲ್ಮೆಟ್ ಹಾಕಿಕೊಂಡು ತಡರಾತ್ರಿ ಮಳಿಗೆಗೆ ಬಂದಿದ್ದ ಆರೋಪಿಗಳು, ಬೀಗ ಮುರಿದು ಒಳನುಗ್ಗಿ ಬೆಳ್ಳಿ ಸಾಮಗ್ರಿಗಳನ್ನು ಕದ್ದುಕೊಂಡು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

ಟೋಕಿಯೊದಲ್ಲಿ ಮೋದಿ...

ಜಪಾನ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಟೋಕಿಯೊದಲ್ಲಿ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದದಲ್ಲಿ ಪಾಲ್ಗೊಳ್ಳುವ ಮುನ್ನ ಜನರತ್ತ ಕೈಬೀಸಿದರು – ಪಿಟಿಐ ಚಿತ್ರ

ವಿಜಯೇಂದ್ರಗೆ ಟಿಕೆಟ್ ನಿರಾಕರಣೆ?

ಬೆಂಗಳೂರು: ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಬಿಜೆಪಿ ಯಿಂದ ಅಭ್ಯರ್ಥಿಗಳ ಅಚ್ಚರಿಯ ಆಯ್ಕೆ ಆಗಲಿದ್ದು, ಪಕ್ಷದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಲಕ್ಷ್ಮಣ ಸವದಿಗೆ ಟಿಕೆಟ್ ನಿರಾಕರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ, ರಾಜ್ಯ ಕಾರ್ಯ ದರ್ಶಿ ಕೇಶವ ಪ್ರಸಾದ್ ಅವರಿಗೆ ಟಿಕೆಟ್ ಖಚಿತವಾಗಿದೆ. ಉಳಿದ ಸ್ಥಾನಗಳಿಗೆ ಜಗದೀಶ ಹಿರೇಮನಿ, ಛಲವಾದಿ ನಾರಾಯಣ ಸ್ವಾಮಿ, ಗೀತಾ ವಿವೇಕಾನಂದ, ಮಂಜಮ್ಮ ಜೋಗತಿ ಹೆಸರು ಪರಿಶೀಲನೆಯಲ್ಲಿದೆ ಎಂದು ತಿಳಿದುಬಂದಿದೆ.

ಮಂಗಳವಾರ ಬೆಳಿಗ್ಗೆ ಪಟ್ಟಿ ಬಿಡುಗಡೆಯಾಗಲಿದೆ. ವಿಧಾನಸಭೆಗೆ ಸ್ಪರ್ಧಿಸಿ ಗೆಲ್ಲುವ ಸಾಮರ್ಥ್ಯ ಇರುವವರಿಗೆ ಈಗ ಟಿಕೆಟ್ ಕೊಡುವುದು ಬೇಡ ಎಂದು ನಿರ್ಧರಿಸಿದ್ದರಿಂದ ವಿಜಯೇಂದ್ರರಿಗೆ ಟಿಕೆಟ್ ಕೈ ತಪ್ಪಿದೆ ಎಂದು ಹೇಳಿವೆ.

ಆಕ್ರಮಣಕ್ಕಿಳಿದರೆ ಸೇನೆಯೊಂದಿಗೆ ಮಧ್ಯಪ್ರವೇಶ: ಚೀನಾಗೆ ಬೈಡನ್ ಎಚ್ಚರಿಕೆ

ತೈವಾನ್ ರಕ್ಷಣೆಗೆ ಸಿದ್ಧ: ಅಮೆರಿಕ ಪ್ರತಿಜ್ಞೆ

ಟೋಕಿಯೊ/ ಬೀಜಿಂಗ್ (ಎಎಫ್‌ಪಿ/ ಎಪಿ): 'ದ್ವೀಪ ರಾಷ್ಟ್ರ ತೈವಾನ್ ಮೇಲೆ ಚೀನಾ ಆಕ್ರಮಣಕ್ಕೆ ಮುಂದಾದರೆ, ತೈವಾನ್ ರಕ್ಷಣೆಗೆ ನಾವು ಸೇನಾಶಕ್ತಿಯೊಂದಿಗೆ ಮಧ್ಯಪ್ರವೇಶಿಸುತ್ತೇವೆ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೋಮವಾರ ಚೀನಾಗೆ ಕಠಿಣ ಎಚ್ಚರಿಕೆ ನೀಡಿದರು.

ಚೀನಾ ಸೇನಾಧಿಕಾರಿಗಳು ತೈವಾನ್ ಆಕ್ರಮಣ ಯೋಜನೆ ಸಂಬಂಧ ಚರ್ಚಿಸಿರುವ ಧ್ವನಿಸುರುಳಿ ತುಣುಕು 'ಲ್ಯೂಡ್ ಮೀಡಿಯಾ' ಯುಟ್ಯೂಬ್ ಚಾನೆಲ್‌ನಲ್ಲಿ ಬಹಿರಂಗವಾದ ಬೆನ್ನಲ್ಲೇ ಬೈಡನ್, ಈ ಎಚ್ಚರಿಕೆ ರವಾನಿಸಿದರು.

ಟೋಕಿಯೊದಲ್ಲಿ ಸುದ್ದಿಗೋಷ್ಠಿಯಲ್ಲಿ 'ಚೀನಾ ಆಕ್ರಮಣ ಮಾಡಿದರೆ ತೈವಾನ್ ರಕ್ಷಣೆಗೆ ಸೇನೆ ಕಳುಹಿಸಲು ಸಿದ್ಧರಿದ್ದೀರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬೈಡನ್, 'ಖಂಡಿತಾ ಸಿದ್ಧ. ಅದು ನಮ್ಮ ಬದ್ಧತೆ ಕೂಡ ಹೌದು' ಎಂದು ಪ್ರತಿಜ್ಞೆ ಮಾಡಿದರು.

ಕ್ವಾಡ್ ಸಮಾವೇಶದಲ್ಲಿ ಭಾಗ ವಹಿಸಲು ಟೋಕಿಯೊಗೆ ಬಂದಿರುವ ಬೈಡನ್, 'ನಾವು ಒಂದೇ ಚೀನಾ ನೀತಿಗೆ ಸಮ್ಮತಿಸಿದ್ದೇವೆ, ಅದಕ್ಕೆ ಸಹಿಯನ್ನೂ ಹಾಕಿದ್ದೇವೆ. ಆದರೆ, ಅದನ್ನು ಬಲವಂತದಿಂದ ಸಾಧಿಸುವ ಚೀನಾದ ಯೋಚನೆ ಸಾಧುವಲ್ಲ. ಚೀನಾ ಈಗಾಗಲೇ 'ಅಪಾಯದೊಂದಿಗೆ ಚೆಲ್ಲಾಟ' ವಾಡುತ್ತಿದೆ' ಎಂದರು.

ಬೈಡನ್‌ಗೆ ಚೀನಾ ತಿರುಗೇಟು: ಅಮೆರಿಕ ಅಧ್ಯಕ್ಷರ ಪ್ರತಿಜ್ಞೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಚೀನಾ, 'ತೈವಾನ್ ವಿಷಯದಲ್ಲಿ ರಾಷ್ಟ್ರದ ಹಿತಾಸಕ್ತಿಗಳನ್ನು ರಕ್ಷಿಸಲು ಸಿದ್ಧ' ಎಂದು ತಿರುಗೇಟು ನೀಡಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್ಬಿನ್, 'ತೈವಾನ್ ಅನ್ನು ಚೀನಾದಿಂದ ಬೇರ್ಪಡಿಸಲಾಗದು. ತೈವಾನ್ ಸಮಸ್ಯೆ ಚೀನಾದ ಸಂಪೂರ್ಣ ಆಂತರಿಕ ವಿಷಯ. ತನ್ನ ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಯ ರಕ್ಷಣೆಯಲ್ಲಿ ಯಾವುದೇ ರಾಜಿ ಅಥವಾ ರಿಯಾಯಿತಿ ತೋರುವುದಿಲ್ಲ. ಚೀನೀಯರ ದೃಢ ಸಂಕಲ್ಪ ಮತ್ತು ಸಾಮರ್ಥ್ಯವನ್ನು ಯಾರೂ ಲಘುವಾಗಿ ಪರಿಗಣಿಸಬೇಡಿ' ಎಂದು ಎಚ್ಚರಿಸಿದರು.

'ತೆಲಂಗಾಣ: ಜೋಗುಳಾಂಬ ದೇಗುಲದ ಆವರಣದಲ್ಲಿರುವ ದರ್ಗಾ ತೆರವು ಮಾಡಿ'

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಜ್ಞಾನವಾಪಿ, ಮಥುರಾ ಮಸೀದಿಗಳ ವಿವಾದದ ಬೆನ್ನಲ್ಲೇ ದಕ್ಷಿಣ ತೆಲಂಗಾಣದ ಪ್ರಸಿದ್ಧ ಜೋಗುಳಾಂಬ ದೇಗುಲದ ಆವರಣದಲ್ಲಿರುವ ದರ್ಗಾ ಬಗ್ಗೆ ಸ್ಥಳೀಯ ಬಿಜೆಪಿ ನಾಯಕರೊಬ್ಬರು ಆಕ್ಷೇಪ ಎತ್ತಿದ್ದಾರೆ.

ಪ್ರಾಚೀನ ದೇಗುಲದ ಆವರಣದಲ್ಲಿರುವ ಹಿಂದೂಯೇತರ ಧರ್ಮದ ರಚನೆಯನ್ನು ತೆರವು ಮಾಡುವಂತೆ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರನ್ನು ಒತ್ತಾಯಿಸಿರುವ ಬಿಜೆಪಿ ಮುಖಂಡ ರಾಜಾ ಸಿಂಗ್, ನೀವು ಮಾಡದಿದ್ದರೆ 2023ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಾವು ಅದನ್ನು ಮಾಡುತ್ತೇವೆ ಎಂದು ಟ್ವೀಟ್ ಮಾಡಿದ್ದಾರೆ.

ದೇಶದ 18 ಶಕ್ತಿಪೀಠಗಳಲ್ಲಿ ಒಂದು ಎಂದು ಪರಿಗಣಿಸಲಾದ ಈ ಜೋಗುಳಾಂಬ ದೇವಿಯ ದೇಗುಲವು, ಹಿಂದೂಗಳ ಅತ್ಯಂತ ಪುರಾತನ ಧಾರ್ಮಿಕ ಕೇಂದ್ರ ಎಂದು ನಂಬ ಲಾಗಿದೆ. ಚಾಲುಕ್ಯರ ವಾಸ್ತುಶಿಲ್ಪ ಹೊಂದಿರುವ ಈ ದೇಗುಲ, ಆಂಧ್ರಪ್ರದೇಶ-ತೆಲಂಗಾಣ ಗಡಿಯ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಸಂಗಮದ ಬಳಿ ಇದೆ.

ಈ ದೇಗುಲಕ್ಕೆ ಆಂಧ್ರಪ್ರದೇಶ, ತೆಲಂಗಾಣ,ಕರ್ನಾಟಕದಿಂದ ಲಕ್ಷಾಂತರ ಭಕ್ತರು ಪ್ರತಿ ವರ್ಷ ಭೇಟಿ ನೀಡುತ್ತಾರೆ.

ಈ ಬಗ್ಗೆ ಭಾರತೀಯ ಪುರಾತತ್ವ ಇಲಾಖೆಗೆ ಪತ್ರ ಬರೆದಿರುವ ತೆಲಂಗಾಣ ವಿಧಾನಸಭೆಯ ಬಿಜೆಪಿ ನಾಯಕ ರಾಜಾ ಸಿಂಗ್, ಕೆಲ ವರ್ಷಗಳ ಹಿಂದೆ ದೇವಾಲಯದ ಆವರಣದಲ್ಲಿ ಇದ್ದಕ್ಕಿದ್ದಂತೆ ದರ್ಗಾ ಕಾಣಿಸಿಕೊಂಡಿತ್ತು. ರಾತ್ರೋರಾತ್ರಿ ಕಮಾನು ನಿರ್ಮಿಸಲಾಗಿತ್ತು ಎಂದು ತಿಳಿಸಿದ್ದಾರೆ.

'ಆದರೆ, ಹಿಂದೂ ದೇಗುಲದ ಜಾಗ ಅತಿಕ್ರಮಣದ ವಿರುದ್ಧ ಸರ್ಕಾರದ ಇಲಾಖೆಗಳು ಯಾವುದೇ ಕ್ರಮ ಜರುಗಿಸಲಿಲ್ಲ'ಎಂದು ಗೋಶಮಹಲ್ ಕ್ಷೇತ್ರದ ಶಾಸಕರು ಮೇ, 17, 2022ರ ದಿನಾಂಕವಿರುವ ಪತ್ರದಲ್ಲಿ ಆರೋಪಿಸಿದ್ದಾರೆ.

'ಈ ಹಿನ್ನೆಲೆಯಲ್ಲಿ ಪುರಾತತ್ವ ಇಲಾಖೆಯು ಈ ಬಗ್ಗೆ ಗಮನ ಹರಿಸಿ, ಈ ಜಾತ್ಯತೀತ ದೇಶದ ಹಿಂದೂಗಳ ಗೌರವದ ಸಂಕೇತವಾಗಿ ತಮ್ಮ ಅಧೀನ ದಲ್ಲಿರುವ ಪ್ರಾಚೀನ ಜೋಗುಳಾಂಬ ಶಕ್ತಿ ಪೀಠದ ಆವರಣದಲ್ಲಿರುವ ಹಿಂದೂಯೇತರ ರಚನೆಯನ್ನು ತೆಗೆದುಹಾಕಬೇಕೆಂದು ಮನವಿ ಮಾಡುತ್ತೇನೆ' ಎಂದು ಹೈದರಾಬಾದ್‌ನ ಪುರಾತತ್ವ ಇಲಾಖೆಯ ಕಚೇರಿಗೆ ಬರೆದಿರುವ ಪತ್ರದಲ್ಲಿ ಅವರು ತಿಳಿಸಿದ್ದಾರೆ. ಟ್ವಿಟರ್‌ನಲ್ಲಿ ಈ ಪತ್ರದ ಜೊತೆ ದೇಗುಲ ಆವರಣದ ವಿಡಿಯೊ ತುಣುಕನ್ನೂ ಸಹ ಸಿಂಗ್ ಹಂಚಿಕೊಂಡಿದ್ದಾರೆ.

ಜ್ಞಾನವಾಪಿ ಮಸೀದಿ: ಇಂದು ಕೋರ್ಟ್ ಆದೇಶ

ಒಂದನೇ ಪುಟದಿಂದ...

ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ವಾರಾಣಸಿ ಸಿವಿಲ್ ನ್ಯಾಯಾಲಯದಿಂದ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯ ವಿಚಾರಣೆಯನ್ನು ವರ್ಗಾಯಿಸಿತ್ತು. 'ನ್ಯಾಯಾಲಯ ಕಮಿಷನ್ ಈಗಾಗಲೇ ವರದಿ ಸಲ್ಲಿಸಿದೆ. ನಮ್ಮ ಅರ್ಜಿಯನ್ನೇ ವಿಚಾರಣೆಗೆ ಎತ್ತಿಕೊಳ್ಳಿ' ಎಂದು ಹಿಂದೂ ಮಹಿಳೆಯರ ಪರ ವಕೀಲರು ವಾದಿಸಿದರು. 'ಹಿಂದೂಗಳು ಸಲ್ಲಿಸಿರುವ ಅರ್ಜಿ ವಿಚಾರಣೆಗೆ ಯೋಗ್ಯವಲ್ಲ' ಎಂದು ಮಸೀದಿ ನಿರ್ವಹಣಾ ಸಮಿತಿ ವಾದ ಮಂಡಿಸಿತು.

ವಾದ ಆಲಿಸಿದ ಜಿಲ್ಲಾ ನ್ಯಾಯಾಧೀಶರು, 'ಯಾವ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಬೇಕು ಎಂಬುದನ್ನು ಮಂಗಳ ವಾರ ಹೇಳುತ್ತೇವೆ' ಎಂದು ಹೇಳಿದರು.ನೂತನ ಅರ್ಜಿ: ವಿಡಿಯೊ ಸಮೀಕ್ಷೆ ವೇಳೆ ಪತ್ತೆಯಾಗಿರುವ ಶಿವಲಿಂಗಕ್ಕೆ ಪ್ರತಿದಿನ ಪೂಜೆ ಸಲ್ಲಿಸಲು ಅನುಮತಿ ನೀಡಿ ಎಂದು ಕೋರಿ ಕಾಶಿ ವಿಶ್ವನಾಥ ದೇವಾಲಯದ ಪ್ರಧಾನ ಅರ್ಚಕ ಕುಲಪತಿ ತಿವಾರಿ ಅವರು ಸೋಮವಾರ ನೂತನ ಅರ್ಜಿಯನ್ನು ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ, ಡಿಕೆಶಿ ಸೇರಿ 29 ಮಂದಿಗೆ ಸಮನ್ಸ್

ಬೆಂಗಳೂರು: ಸಾಂಕ್ರಾಮಿಕ ಕಾಯಿಲೆಗಳ ಕಾಯ್ದೆ ಉಲ್ಲಂಘನೆ ಆರೋಪದಡಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಒಟ್ಟು 29 ಜನರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿದೆ.

ಆರೋಪಿಗಳು ಇದೇ 24 ರಂದು ಖುದ್ದಾಗಿ ಅಥವಾ ಪರವಾದ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜ ರಾಗಿ ಸಮಜಾಯಿಷಿ ನೀಡುವಂತೆ ನ್ಯಾಯಾಧೀಶರು ಆದೇಶಿಸಿದ್ದಾರೆ.

'ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ನಡೆಸಲಾದ ಪಾದಯಾತ್ರೆಯ ವೇಳೆ ಕೋವಿಡ್–19ರ ನಿಯಮಗಳನ್ನು ಉಲ್ಲಂಘಿಸಲಾಗಿದೆ' ಎಂದು ಆರೋಪಿಸಿ ರಾಮನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಹೈಕೋರ್ಟ್ ಆದೇಶದಂತೆ 2022ರ ಜ. 13ಕ್ಕೆ ರಾಮನಗರದಲ್ಲಿ ಪಾದಯಾತ್ರೆ ಸ್ಥಗಿತಗೊಳಿಸಲಾಗಿತ್ತು. ಫೆ. 27ಕ್ಕೆ ರಾಮನಗರದಿಂದ ಪಾದಯಾತ್ರೆ ಯನ್ನು ಪುನಃ ಆರಂಭಿಸಲಾಗಿತ್ತು.

ಅಯೋಧ್ಯೆ ವಿಷಯದ ಪುಸ್ತಕ ಖರೀದಿ: ವಿವಾದ

ಲಖನೌ: ಉತ್ತರ ಪ್ರದೇಶದ ಮೀರತ್ ಪಟ್ಟಣದಲ್ಲಿರುವ ಸರ್ಕಾರಿ ಸ್ವಾಮ್ಯದ ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾಲಯವು ಅಯೋಧ್ಯೆ ಕುರಿತ ವಿಷಯದ ಪುಸ್ತಕವನ್ನು ಅಧ್ಯಯನಕ್ಕೆ ಅಳವಡಿಸಲು ಸಂಯೋಜಿತವಾಗಿರುವ ಕಾಲೇಜುಗಳಿಗೆ ಶಿಫಾರಸು ಮಾಡಿದ್ದು ವಿವಾದ ಸೃಷ್ಟಿಸಿದೆ.

ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿರುವ ಕಾಲೇಜುಗಳಿಗೆ ಹಾಗೂ ಇತರ ಸಸಂಸ್ಥೆಗಳ ಮುಖ್ಯಸ್ಥರಿಗೆ ರಿಜಿಸ್ಟ್ರಾರ್ ಧೀರೇಂದ್ರ ಕುಮಾರ್ ವರ್ಮಾ ಅವರು ಯತೀಂದ್ರ ಮಿಶ್ರಾ ಅವರು ಬರೆದಿರುವ 'ಅಯೋಧ್ಯೆ-ಪರಂಪರಾ, ಸಂಸ್ಕೃತಿ, ವಿರಾಸತ್' ಎಂಬ ಪುಸ್ತಕವನ್ನು ಖರೀದಿಸಲು ಪರಿಗಣಿಸುವಂತೆ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಕುಣಿಗಲ್ ಶಾಸಕರ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಮ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಕುಣಿಗಲ್ ಶಾಸಕ ಡಾ.ಎಚ್.ಡಿ ರಂಗನಾಥ್ ವಿರುದ್ಧ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಈ ಕುರಿತಂತೆ ಡಾ.ರಂಗನಾಥ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಪತ್ತು ನಿರ್ವಹಣಾ ಕಾಯ್ದೆ–2005ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅಂತೆಯೇ ಕರ್ನಾಟಕ ಸಾಂಕ್ರಾಮಿಕ ಕಾಯಿಲೆಗಳು ಕಾಯ್ದೆ–2020 ಕಲಂ 5(4)ರ ಅಡಿಯಲ್ಲಿ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿರುವ ಕಾರಣ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಕುಣಿಗಲ್ ಉಪ ವಿಭಾಗದ ಪೊಲೀಸ್ ಠಾಣೆ ಅಧಿಕಾರಿಗೆ ನೋಟಿಸ್ ಮತ್ತು ಪಡುವಗೆರೆ ಗ್ರಾಮದ ಜಾತ್ಯತೀತ ಜನತಾದಳದ ಮುಖಂಡ ಪಿ.ಎಚ್.ಗೋವಿಂದರಾಜು ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ. ಮುಂದಿನ ವಿಚಾರಣೆಯನ್ನು ಜೂನ್ 21ಕ್ಕೆ ನಿಗದಿಗೊಳಿಸಲಾಗಿದೆ.

ಪ್ರಕರಣವೇನು?: ಹುಲಿಯೂರು ದುರ್ಗ ಹೋಬಳಿ ಬಂಡಿಹಳ್ಳಿ ಬೈಪಾಸ್ ರಸ್ತೆಯಲ್ಲಿ 2021ರ ಜೂನ್ 18ರಂದು ಗ್ರಾಮದ ರಮೇಶ್ ಎಂಬ ವ್ಯಕ್ತಿ ಮಧ್ಯಾಹ್ನದ ವೇಳೆಯಲ್ಲಿ ಅಪಘಾತಕ್ಕೀಡಾಗಿ ಮೃತಪಟ್ಟಿದ್ದರು. ಈ ಘಟನೆ ನಡೆದ ನಂತರ ಕುಣಿಗಲ್ ಠಾಣೆಯ ಪೊಲೀಸರು ತತ್‌ಕ್ಷಣ ಕ್ರಮ ಕೈಗೊಂಡು ಶವ ಪರೀಕ್ಷೆಗೆ ಒಪ್ಪಿಸಿರಲಿಲ್ಲ. ವಿಷಯ ತಿಳಿದ ಕೂಡಲೇ ನಾನು ಸ್ಥಳಕ್ಕೆ ಧಾವಿಸಿದ್ದೆ. ಆಗ ಅಲ್ಲಿ ಜನಸ್ತೋಮವೇ ನೆರೆಯಿತು ಮತ್ತು ಈ ವೇಳೆ ಕೋವಿಡ್ ನಿಯಮಾವಳಿಗಳು ಜಾರಿಯಲ್ಲಿತ್ತು. ಇದನ್ನೇ ನೆಪವಾಗಿಸಿಕೊಂಡು ಗೋವಿಂದರಾಜು ಮತ್ತು ಅವರ ಪಕ್ಷದವರು ಇದನ್ನು ರಾಜಕೀಯ ದುರುದ್ದೇಶದಿಂದ; ಸಾರ್ವಜನಿಕರು ಸಾಮಾಜಿಕ ಅಂತರ ಕಾಪಾಡಿಕೊಳ್ಳುವಲ್ಲಿ ವಿಫಲವಾಗಿದ್ದಾರೆ. ಕೋವಿಡ್ ನಿಯಮಾವಳಿ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ 2021ರ ಜೂನ್ 29ರಂದು ಕುಣಿಗಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಆದ್ದರಿಂದ. ಇದನ್ನು ರದ್ದುಗೊಳಿಸಬೇಕು' ಡಾ.ರಂಗನಾಥ್ ಕೋರಿದ್ದಾರೆ.

ಭಾರತ, ಪಾಕಿಸ್ತಾನ ವಾತಾವರಣ ಕುರಿತು ಸಮೀಕ್ಷೆ

ನಿರೀಕ್ಷೆಗೂ ಮೊದಲೇ ಹೆಚ್ಚಿದ ಬಿಸಿಗಾಳಿ ತೀವ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಪಾಕಿಸ್ತಾನದಲ್ಲಿ ಅಂದಾಜು ಮಾಡಿದ್ದ ಅವಧಿಗಿಂತಲೂ ಮೊದಲೇ ಬಿಸಿ ಗಾಳಿಯ ತೀವ್ರತೆಯು ಹೆಚ್ಚಿದ್ದು, ಬಹುತೇಕ 30 ಪಟ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಈ ಸ್ಥಿತಿಗೆ ಬಹುತೇಕ ಮಾನವ ನಿರ್ಮಿತ ಹವಾಮಾನ ಬದಲಾವಣೆ ಪರಿಸ್ಥಿತಿಯೇ ಕಾರಣವಾಗಿದೆ.

2022ರಲ್ಲಿ ಭಾರತ ಮತ್ತು ಪಾಕಿಸ್ತಾನದಲ್ಲಿ ಬಿಸಿಗಾಳಿಯ ಸ್ಥಿತಿಗತಿ ಕುರಿತು ವಿಶ್ವದ ವಿವಿಧ ದೇಶಗಳ ವಿಜ್ಞಾನಿಗಳು ನಡೆಸಿದ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ. ವಿಶ್ವ ಹವಾಮಾನ ಅಂದಾಜು ಸಮೂಹಕ್ಕೆ ಸೇರಿದ ವಿಶ್ವದ ವಿವಿಧೆಡೆಯ 29 ಸಂಶೋಧಕರು ಸಮೀಕ್ಷೆ ಕೈಗೊಂಡಿದ್ದರು.



ಸಾಂದರ್ಭಿಕ ಚಿತ್ರ

ಇವರಲ್ಲಿ ಭಾರತ, ಪಾಕಿಸ್ತಾನ, ಫ್ರಾನ್ಸ್, ಅಮೆರಿಕ, ಬ್ರಿಟನ್ ಮತ್ತು ಇತರೆ ದೇಶಗಳ ಸಂಶೋಧಕರು ಇದ್ದರು. ಆದರೆ, ಎಷ್ಟು ಅವಧಿಯಲ್ಲಿ ಈ ಬದಲಾವಣೆ ಉಂಟಾಗಿದೆ ಎಂದು ನಿಖರವಾಗಿ ಅಂದಾಜಿಸಲು ಉಭಯ ದೇಶಗಳಲ್ಲಿ 1979ರಿಂದ ಲಭ್ಯವಿರುವ ಅಂಕಿ ಅಂಶಗಳು ಸಾಲದು. ಭಾರತಕ್ಕೆ ಅನ್ವಯಿಸಿ 1951ರಿಂದ ಅಂಕಿ ಅಂಶಗಳು ಲಭ್ಯವಿವೆ. ಸಮೀಕ್ಷೆಯಲ್ಲಿ ಗಂಭೀರ ಅಂಶಗಳು ಹೊರಬಿದ್ದಿವೆ.

ಪ್ರಸ್ತುತ ಇರುವ 1.2 ಡಿಗ್ರಿ ಸೆಲ್ಸಿಯಸ್ ಜಾಗತಿಕ ತಾಪಮಾನದಲ್ಲಿ, ಶತಮಾನಕ್ಕೆ ಒಮ್ಮೆ ಮಾತ್ರ ಅನುಭವಕ್ಕೆ ಬರುವ ಸಂಗತಿ. ಆದರೆ, ಇತ್ತೀಚಿನ ವರ್ಷಗಳಲ್ಲಿ ತಾಪಮಾನವು ನಿರಂತರವಾಗಿ ಏರಿಕೆ ಆಗುತ್ತಿದೆ. ಕೈಗಾರಿಕೆ ಪೂರ್ವದ ಅವಧಿಗೆ ಹೋಲಿಸಿದರೆ ಬಿಸಿಗಾಳಿಯ ತೀವ್ರತೆಯು 30 ಪಟ್ಟು ಅಧಿಕವಾಗಿದೆ ಎಂದು ಸಮೀಕ್ಷೆಯ ವರದಿಯು ತಿಳಿಸಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಸಂಶೋಧಕಿ ಮಾರಿಯಂ ಜಛಾರಿಯ ಅವರು, ಅಂಕಿ ಅಂಶಗಳನ್ನು ಆಧರಿಸಿ ಜಾಗತಿಕ ಬದಲಾವಣೆಯ ಸ್ಥಿತಿಗತಿ ರಹಿತ ಮತ್ತು ಸಹಿತ ಪರಿಸ್ಥಿತಿಯನ್ನು ಅಂದಾಜಿಸಿ ಈ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ ಎಂದರು.

ಹೆಚ್ಚುತ್ತಿರುವ ಬಿಸಿಗಾಳಿಯ ತೀವ್ರತೆಯ ಪರಿಣಾಮಗಳಿಗೆ ಬಹುತೇಕ ಬೀದಿ ವ್ಯಾಪಾರಿಗಳು, ಕಟ್ಟಡ ನಿರ್ಮಾಣ ಕಾರ್ಮಿಕರು, ಕೃಷಿ ಕೂಲಿಕಾರ್ಮಿಕರು, ಸಂಚಾರ ಪೊಲೀಸರು ಗುರಿಯಾಗುತ್ತಾರೆ ಎಂದು ಆರ್‌ಸಿಆರ್‌ಸಿ ಕ್ಲೈಮೇಟ್ ಸೆಂಟರ್‌ನ ಅದಿತಿ ಕೆ.ಕಪೂರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಟೊಮೆಟೊ ಬೆಲೆ ಕೆ.ಜಿಗೆ ₹ 100

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯಲ್ಲಿ ಟೊಮೆಟೊ ಬೆಲೆ ಏರಿಕೆ ಮುಂದುವರಿದಿದ್ದು, 1 ಕೆ.ಜಿಗೆ ₹ 100ಕ್ಕೆ ಮಾರಾಟವಾಗುತ್ತಿದೆ.

ಏ. 23ರಂದು ಸ್ಥಳೀಯ ಮಾರುಕಟ್ಟೆಯಲ್ಲಿ ಟೊಮೆಟೊ ಸಗಟು ಬೆಲೆ ಕ್ವಿಂಟಲ್‌ಗೆ ಕನಿಷ್ಠ ₹ 670 ಮತ್ತು ಗರಿಷ್ಠ ₹ 3,200 ಇತ್ತು. ಸೋಮವಾರ ಟೊಮೆಟೊ ಬೆಲೆ ಕನಿಷ್ಠ ₹ 3,330 ಹಾಗೂ ಗರಿಷ್ಠ ₹ 6 ಸಾವಿರಕ್ಕೆ ಜಿಗಿದಿದ್ದು, ರೈತರ ಮೊಗದಲ್ಲಿ ಸಂತಸ ಮೂಡಿದೆ.

ಆಲಮಟ್ಟಿಗೆ ಒಂದೇ ದಿನ 3.71 ಟಿಎಂಸಿ ಅಡಿ ನೀರು

ಆಲಮಟ್ಟಿ (ವಿಜಯಪುರ ಜಿಲ್ಲೆ): ಆಲಮಟ್ಟಿ ಜಲಾಶಯದ ಒಟ್ಟು ಸಂಗ್ರಹ ಸಾಮರ್ಥ್ಯದ ಮೂರನೇ ಒಂದು ಭಾಗದಷ್ಟು ನೀರು ಮೇ ತಿಂಗಳಲ್ಲಿಯೇ ಭರ್ತಿಯಾಗಿದೆ. ಹೀಗೆ ಭರ್ತಿಯಾಗಿರುವುದು ಜಲಾಶಯದ ಇತಿಹಾಸದಲ್ಲಿಯೇ ಇದೇ ಪ್ರಥಮ ಎನ್ನಲಾಗಿದೆ.

ಒಟ್ಟು 123.081 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ 41.036 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಸೋಮವಾರ ಒಂದೇ ದಿನ 42,973 ಕ್ಯುಸೆಕ್ (3.71 ಟಿಎಂಸಿ ಅಡಿ) ನೀರು ಹರಿದು ಬಂದಿದೆ.

519.60 ಮೀಟರ್ ಎತ್ತರದ ಜಲಾಶಯದಲ್ಲಿ 512.02 ಮೀ.ವರೆಗೆ ನೀರು ಸಂಗ್ರಹವಾಗಿದೆ. ಕಳೆದ ವರ್ಷ ಇದೇ ದಿನ (ಮೇ 23) 508.60 ಮೀ.ವರೆಗೆ ನೀರು ಸಂಗ್ರಹವಿತ್ತು. ಸದ್ಯ, ಹೊರಹರಿವಿನ ಪ್ರಮಾಣ 624 ಕ್ಯುಸೆಕ್ ಆಗಿದೆ.

ಕಡಿಮೆಯಾದ ಒಳಹರಿವು: ಜಲಾಶಯದ ಹಿಂಭಾಗದ ಹಿಪ್ಪರಗಿ ಜಲಾಶಯಕ್ಕೆ ಒಳಹರಿವು ಇಳಿದಿದ್ದು, 5,000 ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ. ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆ ನಿಂತಿದ್ದು, ಒಳಹರಿವು ಕ್ರಮೇಣ ಕಡಿಮೆಯಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಚಿಕ್ಕಬಳ್ಳಾಪುರ, ಕೋಲಾರದಲ್ಲಿ ಲಘು ಭೂಕಂಪನ

ಚಿಕ್ಕಬಳ್ಳಾಪುರ/ ಚಿಂತಾಮಣಿ: ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಕೋಲಾರ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನ 1.55ರ ಸುಮಾರಿನಲ್ಲಿ ಭೂಕಂಪನ ಸಂಭವಿಸಿದೆ. ರಾಷ್ಟ್ರೀಯ ಭೂಕಂಪನ ಅಧ್ಯಯನ ಕೇಂದ್ರದ ವೆಬ್‌ಸೈಟ್ ಪ್ರಕಾರ, ಚಿಕ್ಕಬಳ್ಳಾಪುರ ತಾಲ್ಲೂಕು ಕೇಂದ್ರದಿಂದ 9 ಕಿ.ಮೀ ದೂರದಲ್ಲಿ 2.6 ಮತ್ತು ಕೋಲಾರ ಸುತ್ತ ಇದು ಅನುಭವವಾಗಿದ್ದು, ಭೂಕಂಪನದ ತೀವ್ರತೆ 2.4ರಷ್ಟು ತೀವ್ರತೆ ಇತ್ತು. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಕೇಂದ್ರದಿಂದ 13 ಕಿ.ಮೀ ದೂರದಲ್ಲಿ ಮಧ್ಯಾಹ್ನ 2.39ರ ವೇಳೆಯಲ್ಲಿ ಭೂಮಿ ಕಂಪಿಸಿದೆ. ಆದರೆ, ಈ ಕುರಿತು ಜಿಲ್ಲೆಯ ಅಧಿಕಾರಿಗಳಿಗೆ ಯಾವುದೇ ಮಾಹಿತಿ ದೊರೆತಿಲ್ಲ.

NMDC Limited

(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500 028.
Corporate Identity Number (CIN) - L13100TG1958GOI001674

CORRIGENDUM Dated : 24-05-2022

PC DEPARTMENT

Ref : (1) Tender Enquiry No: HO(PC)/DNM/KIOM/HEMM/21MT, Dated : 14-01-2022
(2) MSTC Ref. No. : NMDC/HO/78/21-22/ET/380

Name of the work : "Hiring of Plant & Mining Machineries for excavation of 210 LT (+/- 20%) of ROM and 48LT (+/- 20%) of waste / low grade iron ore in three years at the rate of 70LT (+/- 20%) of ROM and 16 LT (+/- 20%) of waste / low grade iron ore per year in KIOM and extendable by one more year with mutual consent" of Kumaraswamy Iron Ore Mine.

Corrigendum : Corrigendum for revised NIT and Tender Documents can be viewed / Downloaded till **14-06-2022 from NMDC tenders site / MSTC website. The last date and time for submission of Tenders is extended up to 15:30 hrs on 14-06-2022.**

For above tender Corrigendum including the revised Tender Documents with attachments can be viewed / Downloaded from **https://www.nmdc.co.in** website. New Users accessing the Corrigendum and Tender Documents have to register as 'New User' in Tender section at NMDC's website link **https://www.nmdc.co.in/nmdctender/default.aspx.**

Bidders can access Corrigendum and revised Tender Documents from MSTC portal **https://www.mstcecommerce.com/eprochome/nmdc/buyer_login.jsp** search MSTC Ref No. **NMDC/HO/78/21-22/ET/380.**

The Bidders, on regular basis are required to visit the NMDC's website / MSTC websites for corrigendum, if any, at a future date.

For further clarification, the following can be contacted :
General Manager (Elect) (PC), NMDC Limited, Hyderabad, Tel No. +91-040-23538765, email : **hopc@nmdc.co.in**

Executive Director (PC)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಳೆನೀರು ಕಾಲುವೆ, ಮಹದೇವಪುರ ವಲಯ,
9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011.

ಸಂ: ಕಾಪಾಅ/ಮನೀಕಾ/ಮವ/ಟೆಂಡ್/01/2022–23 ದಿನಾಂಕ:23.05.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ)

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಲಯ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಕಾಮಗಾರಿಯ ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಮಹದೇವಪುರ ವಲಯದ ಕೆ. ಆರ್. ಪುರ ವಿಧಾನಸಭಾ ಕ್ಷೇತ್ರದಲ್ಲಿ ದುರ್ಬಲವಾದ ಭಾಗದ ಉದ್ದಕ್ಕೂ ಮಳೆನೀರು ಕಾಲುವೆಯನ್ನು ಅಗೆಯುವುದು.	89.10	90,000/-
2	ಮಹದೇವಪುರ ವಲಯದ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ದುರ್ಬಲವಾದ ಭಾಗದ ಉದ್ದಕ್ಕೂ ಮಳೆನೀರು ಕಾಲುವೆಯನ್ನು ಅಗೆಯುವುದು.	108.54	2,00,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)ಪೂರ್ವಭಾವಿ ಸಭೆ ದಿನಾಂಕ : **26.05.2022, ಸಂಜೆ 4.00 ಗಂಟೆಗೆ.** ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31.05.2022ರ ಸಂಜೆ 4.00 ಗಂಟೆಯವರೆಗೆ.** 3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.06.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka. gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22371090 / 22340060 / 22340948 ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಲಯ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ. ಸಂಖ್ಯೆ .DRB-2/SOR/54/2017-18)
ಓಲ್ಡ್ ಸ್ಕೂಲ್ ಆಫ್ ನರ್ಸಿಂಗ್ ಬಿಲ್ಡಿಂಗ್, ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್, ಬೆಂಗಳೂರು–560 002
ದೂ: 080–26707727 ಇ–ಮೇಲ್: **igotinstitute@gmail.com**

ಸಂಖ್ಯೆ: ಐಜಿಒಟಿ/ಟಿಎನ್‌ಡಿ/03/2022–23 ದಿನಾಂಕ: 23.05.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಕೆಳಕಂಡ ವಿಷಯಗಳಿಗೆ ಎರಡು ಲಕೋಟೆ ಪದ್ಧತಿ ಅನುಸರಿಸಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ವಿವರ	ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
IGOT/TND/03(1)/2022-23 Dtd. 23.05.2022	DRUGS (INJECTIONS AND TABLETS)	22.06.2022 at 4.00 PM	24.06.2022 at 11.30 AM
IGOT/TND/03(2)/2022-23 Dtd. 23.05.2022	ANEASTHESIA CONSUMABLES		
IGOT/TND/03(3)/2022-23 Dtd. 23.05.2022	CONSUMABLES (GENERAL)		
IGOT/TND/MO/07/2022-23 Dtd. 23.05.2022	MEDICAL OXYGEN	07.06.2022 at 4.00 PM	09.06.2022 at 11.30 AM
IGOT/TND/PESTCONTROL/04/2022-23 Dtd. 23.05.2022	PEST CONTROL SERVICES		
IGOT/TND/EMS/05/2022-23 Dtd. 23.05.2022	ELECTRICAL MAINTENANCE SERVICES		

ಟೆಂಡರ್‌ದಾರರು **www.eproc.karnataka.gov.in** ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ, ಬೆಂಗಳೂರು-02.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಚಪ್ಪರದಕಲ್ಲು, ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ಸಂಖ್ಯೆ:ಬೆಂಗ್ರಾಜಿಪಂ/ಸಿ–1/ಸಿಆರ್.52/2020–21 ದಿನಾಂಕ:16.05.2022

ಪತ್ರಿಕಾ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇಮಕಾತಿ ಮಾಡುವ ಬಗ್ಗೆ.

ಕ್ರ.ಸಂ	ಹುದ್ದೆಯ ವಿವರ	ವಿದ್ಯಾರ್ಹತೆ/ಅನುಭವ/ವಯೋಮಿತಿ	ಹುದ್ದೆಗಳ ಸಂಖ್ಯೆ
1	ಕರವಸೂಲಿಗಾರರು	ಕನಿಷ್ಠ ವಿದ್ಯಾರ್ಹತೆ ಪಿಯುಸಿ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು. **ವಯೋಮಿತಿ:**ಪ.ಜಾತಿ/ಪ.ಪಂಗಡ/ಪ್ರ.ವರ್ಗ:18–40 ಹಿಂ.ವರ್ಗ–2ಎ, 2ಬಿ, 3ಎ, 3ಬಿ ರವರಿಗೆ 18–38 ಸಾಮಾನ್ಯ ವರ್ಗಕ್ಕೆ:–18–35	04
2	ಡಾಟಾ ಎಂಟ್ರಿ ಆಪರೇಟರ್	ಕನಿಷ್ಠ ವಿದ್ಯಾರ್ಹತೆ ಪಿಯುಸಿ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು. **ವಯೋಮಿತಿ:**ಪ.ಜಾತಿ/ಪ.ಪಂಗಡ/ಪ್ರ.ವರ್ಗ:–18–40 ಹಿಂ.ವರ್ಗ–2ಎ, 2ಬಿ, 3ಎ, 3ಬಿ ರವರಿಗೆ:–18–38 ಸಾಮಾನ್ಯ ವರ್ಗಕ್ಕೆ:–18–35	04
03	ಅಟೆಂಡೆಂಟ್ (ಜವಾನ)	ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಹೊಂದಿರಬೇಕು. **ವಯೋಮಿತಿ:**ಪ.ಜಾತಿ/ಪ.ಪಂಗಡ/ಪ್ರ.ವರ್ಗ:– 18–40 ಹಿಂ.ವರ್ಗ–2ಎ, 2ಬಿ, 3ಎ, 3ಬಿ ರವರಿಗೆ:–18–38 ಸಾಮಾನ್ಯ ವರ್ಗಕ್ಕೆ:–18–35	08
04	ಸ್ವಚ್ಛತಾಗಾರರು (ಕ್ಲೀನರ್ಸ್)	ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಹೊಂದಿರಬೇಕು. **ವಯೋಮಿತಿ:**ಪ.ಜಾತಿ/ಪ.ಪಂಗಡ/ಪ್ರ.ವರ್ಗ:–18–40 ಹಿಂ.ವರ್ಗ–2ಎ, 2ಬಿ, 3ಎ, 3ಬಿ ರವರಿಗೆ:–18–38 ಸಾಮಾನ್ಯ ವರ್ಗಕ್ಕೆ:–18–35	35

ಅರ್ಜಿಗಳನ್ನು ಆನ್‌ಲೈನ್ ವೆಬ್‌ಸೈಟ್ ಮೂಲಕ https://bangalorerural.nic.in ಖಾಲಿ ಹುದ್ದೆಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಹೊರಡಿಸಿರುವ ನೋಟಿಫಿಕೇಷನ್‌ನ್ನು ಹಾಗೂ ನಿಬಂಧನೆಗಳನ್ನು ಪೂರ್ಣವಾಗಿ ಓದಿ ಅರ್ಥೈಸಿಕೊಂಡು ಅರ್ಜಿಗಳನ್ನು ಸಲ್ಲಿಸುವುದು.

ಅರ್ಜಿಗಳನ್ನು ಆನ್‌ಲೈನ್‌ನಲ್ಲಿ **ದಿನಾಂಕ:20.05.2022 ರಿಂದ 06.06.2022ರ ಸಂಜೆ 5.00ಗಂಟೆವರೆಗೆ ಸಲ್ಲಿಸತಕ್ಕದ್ದು.**

ವಿಶೇಷ ಸೂಚನೆ:–ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮ ವಾಸಿ ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಹುದ್ದೆಗಳ ಅನುಸಾರ ಹಾಗೂ ಮೀಸಲಾತಿ ಅನುಗುಣವಾಗಿ ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ರಶೀದಿ ಪಡೆದು ಆನ್ ಲೈನ್ ಅರ್ಜಿಯೊಂದಿಗೆ ಎಲ್ಲಾ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿ ಮತ್ತು ಅನುಭವ ಪ್ರಮಾಣ ಪತ್ರದೊಂದಿಗೆ ಅಪ್‌ಲೋಡ್ ಮಾಡುವುದು.

ಹೆಚ್ಚಿನ ವಿವರಗಳಿಗಾಗಿ.:– ಉಪಕಾರ್ಯದರ್ಶಿ, ಮೊಬೈಲ್ ಸಂಖ್ಯೆ:9480853001 ಅಥವಾ ಅಧೀಕ್ಷಕರು, ಮೊಬೈಲ್ ಸಂಖ್ಯೆ: 9481611567 ಸಂಪರ್ಕಿಸತಕ್ಕದ್ದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್.

ವಾಸಾಸಂಇ/ಯುನಿ-ಸಿ.ಪಿ/620/ಎಂಸಿಎ/2022-23

Infosys

Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

41ನೇ ವಾರ್ಷಿಕ ಸರ್ವಸದಸ್ಯರ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವ ಬಗ್ಗೆ, ದಾಖಲಾತಿಯ ದಿನಾಂಕ ಮತ್ತು ಅಂತಿಮ ಲಾಭಾಂಶದ ಮಾಹಿತಿ

1. ಕಂಪನಿಯ 41ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಹಾಗೂ ಇತರ ದೃಶ್ಯಶ್ರಾವ್ಯ ಮಾಧ್ಯಮಗಳ ಮೂಲಕ ಶನಿವಾರ, ದಿನಾಂಕ ಜೂನ್ 25, 2022 ರಂದು ಸಂಜೆ ಭಾರತೀಯ ಕಾಲಮಾನ 4:00 ಗಂಟೆಗೆ ಸಾಮಾನ್ಯ ಸುತ್ತೋಲೆ ಸಂಖ್ಯೆ 2/2022 ಮತ್ತು 19/2021, ಇತರ ಅನ್ವಯವಾಗುವ ಎಲ್ಲ ಕಾನೂನುಗಳು ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಸುತ್ತೋಲೆಗಳ ಮತ್ತು ದಿನಾಂಕ ಮೇ 13, 2022ರಲ್ಲಿ SEBI ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2022/62 (ಇನ್ನು ಮುಂದೆ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ) ಅನ್ವಯ ಸಭೆಯ ಸೂಚನೆಯಲ್ಲಿ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲು ನಡೆಸಲಾಗುವುದು.
2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ಸಂಯೋಜಿತ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಗಳ ವಿದ್ಯುನ್ಮಾನ ಪ್ರತಿಗಳನ್ನು ಮತ್ತು 2021-22ರ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಕಂಪನಿ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್‌ನಲ್ಲಿ ತಮ್ಮ ವಿದ್ಯುನ್ಮಾನ ಅಂಚೆಯನ್ನು (ಈ ಮೇಲ್) ಯಾರು ನೋಂದಾಯಿಸಿದ್ದಾರೋ ಅಂತಹ ಷೇರುದಾರರ ವಿದ್ಯುನ್ಮಾನ ಅಂಚೆಗೆ ಕಳಿಸಲಾಗುವುದು. ಕಂಪನಿಯ ಷೇರುಗಳನ್ನು ಡೀಮೆಟೀರಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಅವರ ವಿದ್ಯುನ್ಮಾನ ಅಂಚೆ ಹಾಗೂ ಸಂಚಾರಿ (ಮೊಬೈಲ್) ದೂರವಾಣಿ ಸಂಖ್ಯೆಯನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ನೋಂದಾಯಿಸಲು ಹಾಗೂ ಭೌತಿಕರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಆ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಹಿಂದಿನ ಕೆಫಿನ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್), ಇವರಿಗೆ ಅವರ ವಿದ್ಯುನ್ಮಾನ ಅಂಚೆ einward.ris@kfintech.com ಮೂಲಕ ತಿಳಿಸಲು ಕೋರಲಾಗಿದೆ. ಕಂಪನಿಯ 41ನೇ ಸಂಯೋಜಿತ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು 2021-22ನೇ ಸಾಲಿನ ಹಣಕಾಸು ವರದಿಯನ್ನು ಕಂಪನಿಯ ಜಾಲತಾಣ www.infosys.com, ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ ಮತ್ತು ಎನ್‌ಎಸ್‌ಡಿಎಲ್‌ನ ಜಾಲತಾಣವಾದ https://www.evoting.nsdl.com ಇಲ್ಲಿಯೂ ಒದಗಿಸಲಾಗುವುದು.
3. ತಮ್ಮ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸದ ಷೇರುದಾರರಿಗೆ ಸರ್ವಸದಸ್ಯರ ಸಭೆಯ ನೋಟಿಸಿನಲ್ಲಿ ತಿಳಿಸಿರುವಂತೆ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ದೂರನಿಯಂತ್ರಿತವಾಗಿ ಮತವನ್ನು ಚಲಾಯಿಸಲು ಅವಕಾಶವಿರುತ್ತದೆ. ಕಂಪನಿಯ ಷೇರುಗಳನ್ನು ಡಿಮೆಟೀರಿಲೈಸ್ಡ್ ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರಿಗೆ ಮತ ಚಲಾಯಿಸುವ ವಿಧಾನವನ್ನೂ ಸಹ ಸರ್ವಸದಸ್ಯರ ಸಭೆಯ ಸೂಚನೆಗಳಲ್ಲಿ ಒದಗಿಸಲಾಗಿರುವುದು.
4. ದಿನಾಂಕ ಏಪ್ರಿಲ್ 13, 2022ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅಂತಿಮ ಲಾಭಾಂಶವನ್ನು ಪ್ರತಿ ಷೇರಿಗೆ ₹ 16 ಎಂದು ಶಿಫಾರಸು ಮಾಡಿದ್ದನ್ನು ಷೇರುದಾರರು ಗಮನಿಸಬಹುದಾಗಿದೆ. 2022ರ ಹಣಕಾಸು ವರ್ಷಕ್ಕೆ ಅಂತಿಮ ಲಾಭಾಂಶ ದಾಖಲಾತಿ ದಿನವು **ಜೂನ್ 1, 2022** ಆಗಿರುತ್ತದೆ. ಮುಂಬರಲಿರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಅಂತಿಮ ಲಾಭಾಂಶವು ಒಪ್ಪಿಗೆಯಾದ ನಂತರ **ಜೂನ್ 28, 2022**ರಂದು ವಿದ್ಯುನ್ಮಾನ ರೂಪದಲ್ಲಿ, ವಿವಿಧ ಆನ್ಲೈನ್ ಮಾರ್ಗಗಳಲ್ಲಿ ಯಾವ ಷೇರುದಾರರು ತಮ್ಮ ಬ್ಯಾಂಕ್ ವಿವರಗಳನ್ನು ಒದಗಿಸಿದ್ದಾರೋ ಅವರ ಖಾತೆಗಳಿಗೆ ವರ್ಗಾಯಿಸಲಾಗುವುದು. ಯಾವ ಷೇರುದಾರರು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಒದಗಿಸಿಲ್ಲವೋ ಅವರಿಗೆ ಲಾಭಾಂಶ ವಾರಂಟ್/ಡಿಮಾಂಡ್ ಡ್ರಾಫ್ಟ್/ಚೆಕ್ಕುಗಳನ್ನು ಅವರ ನೋಂದಾಯಿತ ವಿಳಾಸಕ್ಕೆ ಕಳಿಸಲಾಗುವುದು. ಲಾಭಾಂಶ ಸ್ವೀಕರಿಸುವುದು ತಡವಾಗುವುದನ್ನು ತಪ್ಪಿಸಲು ಷೇರುದಾರರು, ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ತಮ್ಮ ಕೆವೈಸಿಯನ್ನು ತಮ್ಮ ಡಿಪಾಸಿಟರಿಗಳು (ಎಲ್ಲಿ ಷೇರುಗಳನ್ನು ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿದ್ದಾರೋ ಅಲ್ಲಿ) ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟರಲ್ಲಿ (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವವರು) ನೋಂದಾಯಿಸಲು ಕೋರಲಾಗಿದೆ.
5. ಯಾವ ಷೇರುದಾರರು ತಮ್ಮ ಷೇರುಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಹೊಂದಿದ್ದಾರೆಯೊ ಅವರು ತಮ್ಮ ವಿಳಾಸ ಹಾಗೂ ಬ್ಯಾಂಕ್ ಖಾತೆಯ ವಿವರಗಳ ಬದಲಾವಣೆಯಾದ ಸೂಚನೆಗಳನ್ನು ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಿಗೆ ತಲುಪಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರು, ಲಾಭಾಂಶವನ್ನು ಸಕಾಲದಲ್ಲಿ ಪಡೆದುಕೊಳ್ಳಲು ಹಾಗೂ ಸುತ್ತೋಲೆಗಳಿಗೆ ಅನುಗುಣವಾಗಿ ವಿದ್ಯುನ್ಮಾನ ಠೇವಣಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಕೋರಲಾಗಿದೆ. ನಾವು ಷೇರುದಾರರನ್ನು ವಿದ್ಯುನ್ಮಾನ ಠೇವಣಿ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಲು ಉತ್ತೇಜಿಸುತ್ತೇವೆ.
6. ತಮ್ಮ ಇಮೇಲ್ ವಿಳಾಸ/ಬ್ಯಾಂಕ್ ಖಾತೆಯ ಆದೇಶವನ್ನು ನೋಂದಾಯಿಸಲು ಬಯಸುವ ಷೇರುದಾರರು ಕೆಳಗಿನ ಸೂಚನೆಗಳನ್ನು ಅನುಸರಿಸಬಹುದು–

ಡಿಮೆಟಿರಿಯಲೈಸ್ಡ್ ಹೋಲ್ಡಿಂಗ್	ನಿಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಸಲಹೆ ನೀಡಿದ ಪ್ರಕ್ರಿಯೆಯ ಪ್ರಕಾರ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ.
ಭೌತಿಕ ಹಿಡುವಳಿ	einward.ris@kfintech.com ನಲ್ಲಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್‌ಗಳೊಂದಿಗೆ ನಿಗದಿತ ನಮೂನೆ ISR-1 ಮತ್ತು ಇತರ ಸಂಬಂಧಿತ ನಮೂನೆಗಳಲ್ಲಿ ವಿವರಗಳನ್ನು ನೋಂದಾಯಿಸಿ/ ನವೀಕರಿಸಿ ಸದಸ್ಯರು ನಿಗದಿತ ನಮೂನೆಗಳನ್ನು ಕಂಪನಿಯ ಜಾಲತಾಣವಾದಿಂದ https://www.infosys.com/investors/shareholder-services/investors-service.html ನಲ್ಲಿ ಡೌನ್‌ಲೋಡ್ ಮಾಡಬಹುದು ಸದಸ್ಯರು ಕಂಪನಿಯ ಜಾಲತಾಣವಾದಿಂದ https://www.infosys.com/investors/shareholder-services/faqs.html ನಲ್ಲಿ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳನ್ನು (FAQ) ಉಲ್ಲೇಖಿಸಬಹುದು.

7. ಹಣಕಾಸು ಕಾಯಿದೆ 2020ರಂತೆ ತಿದ್ದುಪಡಿಯಾದ ಆದಾಯ ತೆರಿಗೆ ಕಾಯಿದೆ, 1961ರ (ಐಟಿ ಕಾಯಿದೆ) ಅನ್ವಯ ಎಪ್ರಿಲ್ 1, 2020ರ ನಂತರ ಕಂಪನಿ ನೀಡಿದ ಅಥವಾ ವಿತರಿಸಲಾದ ಲಾಭಾಂಶಕ್ಕೆ ಷೇರುದಾರರು ತೆರಿಗೆ ಪಾವತಿಸಬೇಕಾಗುತ್ತದೆ. ಆದ್ದರಿಂದ ಕಂಪನಿಯು ಅಂತಿಮ ಲಾಭಾಂಶವನ್ನು ಪಾವತಿಸುವಾಗ ಮೂಲದಲ್ಲಿ ತೆರಿಗೆಯನ್ನು ಹಿಡಿಯಬೇಕಾಗುತ್ತದೆ. ಹೀಗೆ ಮೂಲದಲ್ಲಿ ತೆರಿಗೆಯನ್ನು ಹಿಡಿಯುವ ದರವನ್ನು ನಿಷ್ಕರ್ಷಿಸಲು ಅನುವಾಗುವಂತೆ ಕೆಳಗೆ ಸೂಚಿಸಲಾಗಿರುವ ಮೂಲದಾಖಲೆಗಳನ್ನು ಐಟಿ ಕಾಯಿದೆ ಅನುಸಾರ ಸಲ್ಲಿಸಲು ಕೋರಲಾಗಿದೆ.

   ನಿವಾಸಿ ಷೇರುದಾರರಿಗೆ, ಆದಾಯ ತೆರಿಗೆ ಕಾಯಿದೆಯ 1961ರ ಪರಿಚ್ಛೇದ 194ರ ಅನ್ವಯ ಈ ಕೆಳಕಂಡಂತೆ ಕಡಿತಗೊಳಿಸಲಾಗುವುದು.

ಅಧಿಕೃತವಾದ ಪ್ಯಾನ್ ಸಂಖ್ಯೆ ಹೊಂದಿರುವ ಷೇರುದಾರರಿಗೆ	10%* ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ
ಅಧಿಕೃತವಾದ ಪ್ಯಾನ್/ಪ್ಯಾನ್ ಸಂಖ್ಯೆ ಹೊಂದಿರದ ಷೇರುದಾರರಿಗೆ	20% ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ

* ಹಣಕಾಸು ಕಾಯಿದೆ, 2021ರ ಪ್ರಕಾರ, ಸೆಕ್ಷನ್206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ, ಇದರಲ್ಲಿ ವ್ಯಾಖ್ಯಾನಿಸಿದಂತೆ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ ದರ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ. ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ.

ಆದಾಗ್ಯೂ, ಲಾಭಾಂಶ ಪಾವತಿಸಬೇಕಾದ ವ್ಯಕ್ತಿಗೆ ಆರ್ಥಿಕ ವರ್ಷ 2022-23ರಲ್ಲಿ ಲಾಭಾಂಶವು ₹ 5,000 ಮೀರದಿದ್ದಲ್ಲಿ ಹಾಗೂ ಷೇರುದಾರರು ನಮೂನೆ 15ಜಿ/ನಮೂನೆ 15ಎಚ್ (60ವರ್ಷ ವಯಸ್ಸನ್ನು ಮೀರಿದ ವ್ಯಕ್ತಿಗೆ ಅನ್ವಯಿಸುವಂತೆ) ಒದಗಿಸಿದವರಿಗೆ ಕಾಯಿದೆಯ ನಿಬಂಧನೆಗಳಿಗೆ ಒಳಪಟ್ಟಂತೆ ಯಾವುದೇ ತೆರಿಗೆಯನ್ನು ಕಡಿತಗೊಳಿಸಲಾಗುವುದಿಲ್ಲ. ನಿವಾಸಿ ಷೇರುದಾರರು ಐಟಿ ಕಾಯಿದೆಯಲ್ಲಿ ಹೇಳಲಾದ ಇತರೆ ಯಾವುದೇ ದಸ್ತಾವೇಜನ್ನು ಒದಗಿಸಿ ಕಡಿಮೆ ದರದ ತೆರಿಗೆ ಕಡಿತ ಅಥವಾ ಪೂರ್ಣ ತೆರಿಗೆ ಕಡಿತವನ್ನು ಪಡೆಯಬಹುದಾಗಿರುತ್ತದೆ. ನಮೂನೆ 15ಜಿ/ನಮೂನೆ 15ಎಚ್ ಅಥವಾ ಮೇಲೆ ಹೇಳಿದ ಇತರೆ ದಸ್ತಾವೇಜನ್ನು ಒದಗಿಸುವ ಷೇರುದಾರಿಗೆ ಪ್ಯಾನ್ ಸಂಖ್ಯೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

ಅನಿವಾಸಿ ಷೇರುದಾರರಿಗೆ, ಪರಿಚ್ಛೇದ 195 ಹಾಗೂ ಐಟಿ ಕಾಯಿದೆಯ ಅನ್ವಯವಾಗುವ ಇತರೆ ಪರಿಚ್ಛೇದಗಳ ಅನುಸಾರ ತೆರಿಗೆಗಳನ್ನು, ಚಾಲ್ತಿಯಲ್ಲಿರುವ ದರದಲ್ಲಿ ತಡೆಹಿಡಿಯಬೇಕಾಗಿರುತ್ತದೆ. ಈ ತೆರಿಗೆಯನ್ನು ತಡೆಹಿಡಿಯುವ ದರವು ಶೇ 20** (ಜೊತೆಗೆ ಅನ್ವಯವಾಗುವ ಸರ್‌ಚಾರ್ಜ್ ಮತ್ತು ಸೆಸ್) ಅಥವಾ ಲಾಭಾಂಶದ ಮೊತ್ತದ ಮೇಲೆ ಭಾರತ ಸರ್ಕಾರ ಸೂಚಿಸಿರುವಂತೆ ಆಗಿರುತ್ತದೆ. ಆದರೂ, ಐಟಿ ಕಾಯಿದೆಯ ಪರಿಚ್ಛೇದ 90ರ ಪ್ರಕಾರ, ಅನಿವಾಸಿ ಷೇರುದಾರರು, ಬಹುಪಕ್ಷೀಯ ಸಾಧನದೊಂದಿಗೆ (ಎಂಎಲ್‌ಐ) ಪರಿಗಣಿಸಲಾದ ದ್ವಿತೆರಿಗೆ ಪ್ರತಿಬಂಧಕ ಒಪ್ಪಂದವನ್ನು (ಡಿಟಿಎಎ) ಆಯ್ಕೆ ಮಾಡಿಕೊಂಡು ಭಾರತದ ಮತ್ತು ಷೇರುದಾರರು ವಾಸವಾಗಿರುವ ದೇಶದ ತೆರಿಗೆ ಇವುಗಳಲ್ಲಿ ಅವರಿಗೆ ಯಾವುದು ಹೆಚ್ಚು ಲಾಭಕರವೋ ಅದನ್ನು ಅನುಸರಿಸಲು ಅವಕಾಶವಿದೆ. ಇದಕ್ಕಾಗಿ, ಅಂದರೆ, ಡಿಟಿಎಎ ಸೌಲಭ್ಯವನ್ನು ಬಳಸಿಕೊಳ್ಳಲು, ಅನಿವಾಸಿ ಷೇರುದಾರರು ಈ ಕೆಳಕಂಡ ವಿವರಗಳನ್ನು ನೀಡಬೇಕಾಗುತ್ತದೆ:

- ಭಾರತದ ಆದಾಯ ತೆರಿಗೆ ಇಲಾಖೆಯು ನೀಡಿದ, ಷೇರುದಾರರಿಂದ ಅನುಪ್ರಮಾಣಿತ ಪ್ಯಾನ್ ಕಾರ್ಡಿನ ಪ್ರತಿ ಅಥವಾ ಆದಾಯ ತೆರಿಗೆ ನಿಯಮಾವಳಿ 1962ರ ನಿಯಮ 37ಬಿಸಿರ ಅನ್ವಯ ವಿವರಗಳು.
- ಆರ್ಥಿಕ ವರ್ಷ 2022-23ಕ್ಕೆ ಅನುಸಾರವಾದ ವಾಸವಿರುವ ದೇಶದ ಕಂದಾಯ/ತೆರಿಗೆ ಅಧಿಕಾರಿಗಳು ನೀಡಿರುವ, ಷೇರುದಾರರಿಂದ ಅನುಪ್ರಮಾಣಿತ ಟ್ಯಾಕ್ಸ್ ರೆಸಿಡೆನ್ಸಿ ಪ್ರಮಾಣಪತ್ರದ ಪ್ರತಿ.
- ನಮೂನೆ 10ಎಫ್ ಸ್ವಘೋಷಣಾ ಪತ್ರ.
- ಅನಿವಾಸಿಯು ತನಗೆ ಅನ್ವಯವಾಗುವ ತೆರಿಗೆ ಒಪ್ಪಂದದ ಅನುಸಾರವಿರುವ ಭಾರತದಲ್ಲಿ ಶಾಶ್ವತವಾಗಿ ನೆಲೆಯೂರಿರದ ಸ್ವಘೋಷಣಾ ಹೇಳಿಕೆ.
- ಅನಿವಾಸಿ ಷೇರುದಾರನಿಂದ ಲಾಭದಾಯಕ ಮಾಲಿಕತ್ವದ ಸ್ವಘೋಷಣೆ.
- ಐಟಿ ಕಾಯಿದೆಯಲ್ಲಿ ಕಡಿಮೆ ತೆರಿಗೆ ತಡೆಹಿಡಿಯುವಂತೆ ಇರುವ ಕಾನೂನಿನಲ್ಲಿ ಹೇಳಲಾದ ಯಾವುದೇ ಇತರ ದಸ್ತಾವೇಜು, ಅನ್ವಯವಾಗುವುದಾದಲ್ಲಿ, ಸ್ವಅನುಪ್ರಮಾಣಿತ ಪ್ರತಿಯನ್ನು ಒದಗಿಸತಕ್ಕದ್ದು.

ವಿದೇಶಿ ಸಾಂಸ್ಥಿಕ ಅಥವಾ ಪೋರ್ಟ್‌ಫೋಲಿಯೋ ವಿನಿಯೋಜಕರಾಗಿದ್ದಲ್ಲಿ ತೆರಿಗೆಯು ಆದಾಯ ತೆರಿಗೆ ಕಾಯಿದೆಯ ಪರಿಚ್ಛೇದ 196ಡಿ ಅನ್ವಯ ಶೇ 20**ರಂತೆ (ಅನ್ವಯವಾಗುವ ಸೆಸ್ ಹಾಗೂ ಸರ್‌ಚಾರ್ಜುಗಳೊಂದಿಗೆ) ಅಥವಾ ಎಂಎಲ್‌ಐ ಪರಿಷ್ಕೃತವಾದ ಡಿಟಿಎಎನಲ್ಲಿ ಒದಗಿಸಲಾದಂತೆ ಯಾವುದು ಹೆಚ್ಚು ಪ್ರಯೋಜನಕಾರಿಯೊ ಅದನ್ನು ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ ಕಡಿತಗೊಳಿಸಲಾಗುವುದು.

** ಹಣಕಾಸು ಕಾಯಿದೆ, 2021 ರ ಪ್ರಕಾರ, ಸೆಕ್ಷನ್ 206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ, ಇದರಲ್ಲಿ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆದಾಗ್ಯೂ, ಅನಿವಾಸಿ ಷೇರುದಾರರು ಅಥವಾ ಅನಿವಾಸಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ)/ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ), ಅಂತಹ ಅನಿವಾಸಿಗಳು ಖಾಯಂ ಆಗಿರದಿದ್ದರೆ, ಸೆಕ್ಷನ್ 206 ಎಬಿಯಲ್ಲಿ ಉಲ್ಲೇಖಿಸಿರುವ ಹೆಚ್ಚಿನ ತೆರಿಗೆ ದರ ಅನ್ವಯಿಸುವುದಿಲ್ಲ ಭಾರತದಲ್ಲಿ ಸ್ಥಾಪನೆ.

ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಷೇರುದಾರರ ಜಾಲತಾಣ ಆದ https://www.infosys.com/investors/shareholder-services/dividend-tax.html ಈ ಜಾಲತಾಣಕ್ಕೆ ಜೂನ್ 9, 2022 ದಿನಾಂಕದ ಒಳಗೆ ಸಲ್ಲಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸೂಚನೆಗಳು ಮತ್ತು ಮಾಹಿತಿಗಾಗಿ https://www.infosys.com/investors/shareholder-services/dividend-tax.html ಈ ಜಾಲತಾಣವನ್ನು ಸಂದರ್ಶಿಸಲು ಕೋರಲಾಗಿದೆ. ದಿನಾಂಕ ಜೂನ್ 9, 2022ರ ನಂತರ ತೆರಿಗೆ ತಡೆಹಿಡಿಯುವ ವಿಷಯವಾಗಿ ಯಾವುದೇ ಸಂವಹನ/ಸಂದೇಶಗಳನ್ನು ಸ್ವೀಕರಿಸಲಾಗುವುದಿಲ್ಲ.

ಈ ವಿಷಯದ ಕುರಿತು ಯಾವುದೇ ಸ್ಪಷ್ಟೀಕರಣಕ್ಕಾಗಿ ಷೇರುದಾರರು dividend.tax@infosys.com ಗೆ ಬರೆಯಬಹುದು.

ತೆರಿಗೆ ಕಡಿತಗೊಳಿಸಲಾದ ಪ್ರಮಾಣಪತ್ರಗಳು, ಯಾವುದಾದರೂ ಇದ್ದರೆ, ನಂತರ ಷೇರುದಾರರ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಷೇರುದಾರರು ತಮ್ಮ ತೆರಿಗೆ ಕ್ರೆಡಿಟ್ ಅನ್ನು https://www.incometax.gov.in/iec/foportal ನಲ್ಲಿ ಇ–ಫೈಲಿಂಗ್ ಖಾತೆಯಿಂದ ಫಾರ್ಮ್ 26AS ನಲ್ಲಿ ಅಥವಾ https://www.tdscpc.gov ನಲ್ಲಿ "View Your Tax Credit" ಪರಿಶೀಲಿಸಬಹುದು.

8. 41ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಷೇರುದಾರರಿಗೆ ಅವರ ನೋಂದಾಯಿತ ವಿದ್ಯುನ್ಮಾನ ಅಂಚೆಗೆ ಅನ್ವಯವಾಗುವ ಕಾನೂನುಗಳ ಅನುಸಾರವಾಗಿ ಕಳಿಸಲಾಗುವುದು.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಬೆಂಗಳೂರು, ಭಾರತ
ಮೇ 23, 2022

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/03/2022–23 ದಿನಾಂಕ: 21–05–2022

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022–23ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **09–06–2022ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು

ವಾಸಾಸಂಇ/ವಾ.ಪ್ರ/614/ಅಡ್ವರ್ಟೋರ್/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ. ನಂ.:08194–230102, ಫ್ಯಾಕ್ಸ್:08194–230102, ಇ–ಮೇಲ್ :eeubp.d5cta@gmail.com

ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/2144/2022–23/204
ದಿನಾಂಕ:21.05.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿ 4701 ಲೆಕ್ಕಶೀರ್ಷಿಕೆಯ "Extending of pipeline from nalas to the 15 no. of tanks under Holalkere tank filling scheme and filling up Kalkere tank under Chitradurga Branch Canal of Upper Bhadra Project Indent No.VJNL/2022-23/IW/WORK_INDENT2144" ಟೆಂಡರ್‌ಗಿಟ್ಟ ಮೊತ್ತ ರೂ.2356.00 ಲಕ್ಷಗಳ ಮೊತ್ತದ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿ ಮೂಲಕ ಅರ್ಹಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:07.06.2022 ಸಂಜೆ 05.00 ಗಂಟೆಯವರೆಗೆ 2) ಪ್ರಿ–ಬಿಡ್ ಸಭೆಯನ್ನು ಮುಖ್ಯ ಇಂಜಿನಿಯರ್, ವಿ.ಜ.ನಿ.ನಿ, ಭಮೇಯೋ ವಲಯ ಚಿತ್ರದುರ್ಗ ಕಛೇರಿ ಸಭಾಂಗಣದಲ್ಲಿ ದಿನಾಂಕ: 08.06.2022 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಪಡಿಸಲಾಗಿದೆ3) **ಟೆಂಡರ್‌ನ್ನು ದಿನಾಂಕ: 10.06.2022 ರಂದು ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ** 4) ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: 13.06.2022ರಂದು ಸಂಜೆ 04.30 ಗಂಟೆ ನಂತರ ತೆರೆಯಲಾಗುವುದು. 5) ಆರ್ಥಿಕ ಬಿಡ್ಡನ್ನು "ತಾಂತ್ರಿಕ ಬಿಡ್‌ಅನುಮೊದನೆಯಾದ ನಂತರ" ತೆರೆಯಲಾಗುವುದು. ಟೆಂಡರ್‌ಗಿಟ್ಟ ಮೊತ್ತ, ಟೆಂಡರ್ ಷರತ್ತುಗಳು, ಟೆಂಡರ್ ದಾಖಲಾತಿಗಳು, ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು **https://eproc.karnataka.gov.in/**ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.

DIPR/CTA/MCA/171/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್

ಸಾರ್ವಜನಿಕ ಗ್ರಂಥಾಲಯ ಇಲಾಖೆ

ನಿರ್ದೇಶಕರ ಕಛೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ,
4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು–560 001

ಸಂ.ಸಾಗ್ರಂಇ/ನಿಕ/ಯೋವಿ/21/ಪುಪ್ರ/2022-23/1049 ದಿನಾಂಕ: 20-05-2022

ಪ್ರಕಟಣೆ

2022-23ನೇ ಸಾಲಿಗೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಯೋಜನೆ ಅಡಿಯಲ್ಲಿ ಮೀಸಲು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಂಥಾಲಯಗಳಿಗೆ 2022ರಲ್ಲಿ ಪ್ರಥಮವಾಗಿ (01-01-2022 ರಿಂದ 30-06-2022 ರವರೆವಿಗೆ) ಪ್ರಕಟವಾದ ಕನ್ನಡ ಸಾಹಿತ್ಯ, ಪರಾಮರ್ಶನ ಸ್ಪರ್ಧಾತ್ಮಕ, ಪಠ್ಯಪುಸ್ತಕ, ಜ್ಞಾನಪೀಠ ಪ್ರಶಸ್ತಿ ವಿಜೇತ ಲೇಖಕರ ಕೃತಿಗಳು, ಮಕ್ಕಳ ಪುಸ್ತಕಗಳು, ವಿಶ್ವಕೋಶ, ಕಾನೂನು, ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಆಯ್ಕೆಗಾಗಿ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಸಲ್ಲಿಸಲು ಆಸಕ್ತ ಲೇಖಕ / ಪ್ರಕಾಶಕ / ಪ್ರಕಟಣಾ ಸಂಸ್ಥೆಯ / ಸರಬರಾಜುದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಉದ್ದೇಶಕ್ಕಾಗಿ 2022–23ನೇ ಸಾಲಿಗೆ ರೂ.89 ಲಕ್ಷಗಳನ್ನು ಮೀಸಲಿರಿಸಿದೆ. ಪುಸ್ತಕಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 08–07–2022ರ ಸಂಜೆ 5:30ರವರೆಗೆ ನಿಗಧಿಪಡಿಸಿದೆ. ಅರ್ಜಿಗಳನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ, ಅಥವಾ ಇಲಾಖಾ ಜಾಲತಾಣದ ಮುಖಾಂತರ ಡೌನ್‌ಲೌಡ್ ಮಾಡಿಕೊಳ್ಳಬಹುದಾಗಿದೆ. ಇಲಾಖಾ ಜಾಲತಾಣದ ವಿಳಾಸ: **dpl.karnataka. gov.in**

ಸಹಿ/– ನಿರ್ದೇಶಕರು,
ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.

DIPR/CP/RO.626/AAPL/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಅಭಿಯಂತರರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937

ಸಂಖ್ಯೆ:06/ಕಾಪಾಅ/ಗ್ರಾಕುನೀನೈ ವಿ/ತುವ/ಟೆಂಡರ್/2022–23/421 ದಿನಾಂಕ 20.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 06/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2022–23 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಪಾವಗಡ ತಾಲ್ಲೂಕಿನ 20 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.12.48 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.15,600/– ಗಳು ಹಾಗೂ ಆ) ಗರಿಷ್ಟ ಮೊತ್ತ ರೂ.85.26 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,70,520/– ಗಳು (1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **30.05.2022** ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW-3 ಕಾಮಗಾರಿಗಳಿಗೆ) ದಿನಾಂಕ: **23.05.2022** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **31.05.2022** ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **03.06.2022** ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TMK/144/MCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರ್‌ವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ

ಫೋನ್: 08182–254832 ಫ್ಯಾಕ್ಸ್ : 08182–254832
E-mail: eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಟೆಂಡರ್ ಪ್ರಕಟಣೆ ಸಂಖ್ಯೆ :
1.No: EE/UTPDN/SMG/KNNL/PB-3/T.N.No.07/2022-23/Call-2 Dated:18.05.2022
2.No: EE/UTPDN/SMG/KNNL/PB-3/T.N.No.08/2022-23/Call-2 Dated:18.05.2022
3.No: EE/UTPDN/SMG/KNNL/PB-3/T.N.No.09/2022-23/Call-2 Dated:18.05.2022

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701 M & MI ತುಂಗಾ ಮೇಲ್ದಂಡೆ ಯೋಜನೆ ಅಡಿ ಬರುವ 03 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ. 288.53, 329.82 ಮತ್ತು 267.70 ಲಕ್ಷಗಳು. (ಜಿ.ಎಸ್.ಟಿ ಹೊರತುಪಡಿಸಿ) (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ/ಕೊನೆಯ **ದಿನಾಂಕ : 25.05.2022** at 5.30 PM (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ **ದಿನಾಂಕ : 19.05.2022** ರಿಂದ **30.05.2022** ಸಾಯಂಕಾಲ 5.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ).

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ / ವಿವರಗಳು / ಇ.ಎಂ.ಡಿ. ಮೊತ್ತ / ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://eproc.karnataka.gov.in/ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ವಾ.ಸಾ.ಸಂ.ಇ./ಶಿ/ನಂ.117–05
ಝುಂಕಾರ್/2022–23

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ತುಂ.ಮೇ.ಯೋ. ವಿಭಾಗ, ಶಿವಮೊಗ್ಗ

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಲಗತ್ತಿಸಿ ಟ್ವೀಟ್ ಮಾಡಿರುವ ರಾಜ್ಯ ಕಾಂಗ್ರೆಸ್ ನಾಯಕರು

ರೋಹಿತ್ ಚಕ್ರತೀರ್ಥ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ವಿವಾದ ವ್ಯಾಪಕ ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ, ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು 5 ವರ್ಷಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದರೆನ್ನಲಾದ ಪೋಸ್ಟ್ ಅನ್ನು ಲಗತ್ತಿಸಿ ಟ್ವೀಟ್ ಮಾಡಿರುವ ರಾಜ್ಯ ಕಾಂಗ್ರೆಸ್ ನಾಯಕರು, ಚಕ್ರತೀರ್ಥ ಅವರನ್ನು ಸಮಿತಿಯಿಂದ ವಜಾ ಮಾಡುವಂತೆ ಆಗ್ರಹಿಸಿದ್ದಾರೆ.

ಟ್ವೀಟ್ ಮಾಡಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ನಾಡಗೀತೆಯನ್ನು ಅವಹೇಳನ ಮಾಡಿದ, ರಾಷ್ಟ್ರಕವಿಯನ್ನು ಗೇಲಿ ಮಾಡಿದ ಒಬ್ಬ ಕಿಡಿಗೇಡಿಯನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ ರಾಜ್ಯ ಬಿಜೆಪಿ ಸರ್ಕಾರಕ್ಕೆ ಮಾನ-ಮರ್ಯಾದೆ ಏನಾದರೂ ಇದ್ದರೆ ಮೊದಲು ಆತನನ್ನು ಕಿತ್ತುಹಾಕಬೇಕು' ಎಂದು ಒತ್ತಾಯಿಸಿದ್ದಾರೆ.

ರೋಹಿತ್ ಚಕ್ರತೀರ್ಥ ಅವರು ಈ ಹಿಂದೆ (2017ರ ಮಾರ್ಚ್ 16) ನಾಡಗೀತೆಯನ್ನು ತಿರುಚಿ ಬರೆದಿದ್ದಾರೆ ಎನ್ನಲಾದ ಪೋಸ್ಟ್ ಅನ್ನು ತಮ್ಮ ಆಗ್ರಹದೊಂದಿಗೆ ಸಿದ್ದರಾಮಯ್ಯ ಲಗತ್ತಿಸಿದ್ದಾರೆ.

ರೋಹಿತ್ ಚಕ್ರತೀರ್ಥ ಅವರ ಇದೇ ಪೋಸ್ಟ್ ಲಗತ್ತಿಸಿ ಟ್ವೀಟ್ ಮಾಡಿರುವ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ, 'ಶಿಕ್ಷಣ ತಜ್ಞರು, ವಿದ್ವಾಂಸರು ಇರಬೇಕಾದ ಪಠ್ಯಪುಸ್ತಕ ಸಮಿತಿಗೆ ₹2 ಟ್ರಾಲ್‌ಗಳು, ಬಿಜೆಪಿಯ ಬಾಡಿಗೆ ಭಾಷಣಕಾರರನ್ನು ಕೂರಿಸಿ ಮಕ್ಕಳಿಗೆ ಸುಳ್ಳಿನ ಕೂರರ ಪಾಠ ಹೇಳಿಸುವುದು ವಿಪರ್ಯಾಸ. ನಾಡು ನುಡಿಗೆ, ಕುವೆಂಪು ಅವರಿಗೆ ಅವಮಾನಿಸಿದ ಈತನ ಟ್ರೋಲ್ ಪಾಂಡಿತ್ಯವೇ ಅರ್ಹತೆಯೇ? ಕೂಡಲೇ ಈತನನ್ನು ಕಿತ್ತೆಸೆದು ಮಕ್ಕಳ ಭವಿಷ್ಯವನ್ನು ಸರ್ಕಾರ ಕಾಪಾಡಬೇಕು' ಎಂದು ಒತ್ತಾಯಿಸಿದ್ದಾರೆ.

'ಗೋಡ್ಸೆಯನ್ನೂ ಪಠ್ಯದಲ್ಲಿ ಸೇರಿಸಬೇಕು ಅಂದ್ರೆ?'

ಬೆಂಗಳೂರು: 'ಹೆತ್ತವರಿಗೆ ಹೆಗ್ಗಣ ಮುದ್ದು ಎಂಬಂತೆ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಹೆಡಗೇವಾರ್ ವಿಷಯ ಪಠ್ಯಕ್ಕೆ ಸೇರಿದರೆ ಯಾವ ಸಮಸ್ಯೆಯೂ ಇಲ್ಲ. ನಾಗೇಶ್ ಅವರು ಆರೆಸ್ಸೆಸ್‌ನವರು. ಹೆಡಗೇವಾರ್ ಆರೆಸ್ಸೆಸ್ ಸಂಸ್ಥಾಪಕರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕುಟುಕಿದರು.

ಜಯನಗರದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾಳೆ ಗೋಡ್ಸೆಯನ್ನು ಪಠ್ಯದಲ್ಲಿ ಸೇರಿಸಬೇಕು ಅಂದ್ರೆ' ಎಂದು ಪ್ರಶ್ನಿಸಿದರು. 'ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿರುವವರು, ದೇಶಪ್ರೇಮ ಇರುವವರ ವಿಚಾರಗಳನ್ನು ಪಠ್ಯದಲ್ಲಿ ಸೇರಿಸಲಿ, ನಾವು ಬೇಡ ಹೇಳಲ್ಲ' ಎಂದರು.

'ಪಠ್ಯಪುಸ್ತಕವು ಧರ್ಮ ನಿರಪೇಕ್ಷತೆ, ವೈಚಾರಿಕತೆ, ವೈಜ್ಞಾನಿಕತೆಯನ್ನು ವಿದ್ಯಾರ್ಥಿಗಳಲ್ಲಿ ಮೂಡುವಂತೆ ಮಾಡಬೇಕು. ವಿದ್ಯಾರ್ಥಿಗಳ ಜ್ಞಾನ ವಿಕಾಸವಾಗಬೇಕು. ಹೀಗಾಗಿ ಯಾವುದೇ ಧರ್ಮದ ವಿಚಾರಗಳನ್ನು ತುರುಕಬಾರದು. ನಮ್ಮದು ಜಾತ್ಯತೀತ ರಾಷ್ಟ್ರ. ಮಕ್ಕಳಲ್ಲಿ ಇದೇ ಭಾವನೆ ಬೆಳೆಸುವ ಕೆಲಸ ಮಾಡಬೇಕು. ಅಂಧಶ್ರದ್ಧೆಯನ್ನು ಮಕ್ಕಳಿಗೆ ಕಲಿಸಬಾರದು' ಎಂದರು.

'ಕುವೆಂಪು ಅವರ ಬಗ್ಗೆ, ನಾಡಗೀತೆ ಬಗ್ಗೆ ಲಘುವಾಗಿ ಮಾತನಾಡಲು ಹೋಗಬಾರದು. ಅವರು ರಾಷ್ಟ್ರಕವಿ. ಪಠ್ಯ ಪರಿಷ್ಕರಣೆ ಮಾಡುವಾಗ ವಿಷಯ ತಜ್ಞರ ಸಮಿತಿ ಮಾಡಬೇಕು, ದೇಶ ಮತ್ತು ಸಮಾಜ ಹಿತದೃಷ್ಟಿಯಿಂದ ಯಾರ ಪಠ್ಯ ಇರಬೇಕು, ಯಾರ ಪಠ್ಯ ಇರಬಾರದು ಎಂದು ನಿರ್ಧಾರ ಮಾಡಲಿ. ರೋಹಿತ್ ಚಕ್ರತೀರ್ಥ ಆರ್‌ಎಸ್‌ಎಸ್‌ನವರು, ಅವರ ಬದಲು ಯಾವುದೇ ಪಕ್ಷ, ಸಂಘಟನೆಗೆ ಸೇರದ ವಿಷಯ ತಜ್ಞರನ್ನು ಅಧ್ಯಕ್ಷರಾಗಿ ಮಾಡಲಿ. ಭಗತ್ ಸಿಂಗ್, ಮಹಾತ್ಮ ಗಾಂಧಿ, ಅಂಬೇಡ್ಕರ್, ನಾರಾಯಣ ಗುರುಗಳ ವಿಚಾರಗಳನ್ನು ಓದುವುದರಿಂದ ದೇಶಭಕ್ತಿ, ಸಹಿಷ್ಣುತೆ, ಸೌಹಾರ್ದತೆಯ ಮೌಲ್ಯಗಳು ಉದ್ದೀಪನವಾಗುತ್ತವೆ. ಬುದ್ಧ, ಬಸವಣ್ಣ, ಕನಕದಾಸರು ಇವರೆಲ್ಲ ಸಮಾಜ ಸುಧಾರಕರು. ಇಂಥವರ ಬಗ್ಗೆ ಮಕ್ಕಳಿಗೆ ಹೇಳಿ. ಮಕ್ಕಳ ಜ್ಞಾನ ವಿಕಾಸವಾಗಬೇಕೋ? ಸಂಕುಚಿತವಾಗಬೇಕೋ? ವೈಚಾರಿಕತೆ ಬೆಳೆಸಿಕೊಳ್ಳಬೇಕೋ? ಬೇಡವೋ' ಎಂದರು.

ಕುವೆಂಪುಗೆ ಅವಮಾನ: ಖಂಡನೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು ಕುವೆಂಪು ಮತ್ತು ನಾಡಗೀತೆಗೆ ಅವಮಾನ ಮಾಡಿದ್ದಾರೆ ಎಂದು ರಾಜ್ಯ ಒಕ್ಕಲಿಗರ ಸಂಘ ದೂರಿದೆ. ರೋಹಿತ್ ಚಕ್ರತೀರ್ಥ ಅವರು ಈ ಹಿಂದೆ ತಿರುಚಿದ ನಾಡಗೀತೆಯ ಸಾಲುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚುವುದರ ಮೂಲಕ ನಾಡಗೀತೆಗೆ ಅವಮಾನ ಮಾಡಿದ್ದಾರೆ. ಇದು ನಾಡಗೀತೆಗೆ ಅಷ್ಟೇ ಅಲ್ಲದೆ ಇಡೀ ಕನ್ನಡಿಗರಿಗೆ ಮತ್ತು ವಿಶ್ವಮಾನವತೆಯ ಸಂದೇಶ ಸಾರಿದ ಕುವೆಂಪು ಅವರಿಗೆ ಮಾಡಿದ ಅವಮಾನವಾಗಿದೆ. ಇದನ್ನು ರಾಜ್ಯ ಒಕ್ಕಲಿಗರ ಸಂಘ ತೀವ್ರವಾಗಿ ಖಂಡಿಸುತ್ತದೆ. ರೋಹಿತ್ ಚಕ್ರತೀರ್ಥ ಅವರು ತಮ್ಮ ಈ ಬೇಜವಾಬ್ದಾರಿ ಮತ್ತು ಅಗೌರವಯುತ ನಡವಳಿಕೆಗೆ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ ತಿಳಿಸಿದ್ದಾರೆ.

31 ಕ್ಕೆ ಪ್ರತಿಭಟನೆ

ಬೆಂಗಳೂರು: ಪಠ್ಯಪುಸ್ತಕಗಳ ಪರಿಷ್ಕರಣೆ ವಿರೋಧಿಸಿ ಇದೇ 31 ರಂದು ವಿವಿಧ ಸಂಘಟನೆಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿವೆ. ಸೋಮವಾರ ನಗರದಲ್ಲಿ ಈ ಬಗ್ಗೆ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಶಿಕ್ಷಣ ತಜ್ಞರು, ಸಾಹಿತಿಗಳು, ಸಂಘಟನೆಗಳ ಮುಖಂಡರು, ರೋಹಿತ್ ಚಕ್ರತೀರ್ಥ ಸಮಿತಿ ರದ್ದುಪಡಿಸಬೇಕು ಹಾಗೂ ಪಠ್ಯಪುಸ್ತಕದಿಂದ ಕೆಲವು ಪಾಠಗಳನ್ನು ಕೈಬಿಟ್ಟಿರುವುದನ್ನು ಖಂಡಿಸಿದರು. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ), ಎಐಎಸ್ಎಫ್, ಎಐಡಿಎಸ್ಒ, ಕೆವಿಎಸ್, ಮಾನವ ಬಂಧುತ್ವ ವೇದಿಕೆ, ಜನವಾದಿ ಮಹಿಳಾ ಸಂಘಟನೆ, ವಕೀಲರ ಸಂಘ, ದಲಿತ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

ಸುದ್ದಿ 2 ನಿಮಿಷ

ಚುನಾವಣೆ ಪ್ರಚಾರಕ್ಕೆ ಪ್ರಿಯಾಂಕಾ ಗಾಂಧಿ: ಡಿ.ಕೆ. ಶಿವಕುಮಾರ್

ನವದೆಹಲಿ: 'ಮುಂದಿನ ವರ್ಷ ನಡೆಯಲಿರುವ ಕರ್ನಾಟಕದ ವಿಧಾನಸಭೆ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಪಾಲ್ಗೊಳ್ಳಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯ ವಿಧಾನಸಭೆ ಚುನಾವಣೆ ಸಂದರ್ಭ ಪಕ್ಷಕ್ಕೆ ಬಲ ನೀಡುವ ನಿಟ್ಟಿನಲ್ಲಿ ಪ್ರಿಯಾಂಕಾ ಗಾಂಧಿ ಅವರು ಪ್ರಚಾರದಲ್ಲಿ ಭಾಗವಹಿಸುವಂತೆ ಇತ್ತೀಚೆಗೆ ಉದಯಪುರದಲ್ಲಿ ನಡೆದ ಚಿಂತನ ಶಿಬಿರದಲ್ಲಿ ಪಕ್ಷದ ರಾಜ್ಯ ಮುಖಂಡರ ನಿಯೋಗ ಮನವಿ ಸಲ್ಲಿಸಿದೆ. ಅವರು ಬಹುತೇಕ ಒಪ್ಪಿಗೆ ಸೂಚಿಸಿದ್ದಾರೆ' ಎಂದು ಅವರು ಹೇಳಿದರು.

'ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆ ಮಾಡುವ ಪಕ್ಷದ ಅಭ್ಯರ್ಥಿಗಳನ್ನು ಹೈಕಮಾಂಡ್ ಅಂತಿಮಗೊಳಿಸಲಿದ್ದಾರೆ' ಎಂದ ಅವರು, 'ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೊಂದಿಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲ. ವಿಧಾನ ಪರಿಷತ್ ಮತ್ತು ರಾಜ್ಯಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ನಮ್ಮ ನಡುವೆ ಹಗ್ಗ-ಜಗ್ಗಾಟ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

'ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಪ್ರಿಯಾಂಕಾ ಗಾಂಧಿ ಅವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

ವಾಹನಗಳ ಮೇಲಿನ ಸರ್ಕಾರಿ ಲಾಂಛನ ತೆರವುಗೊಳಿಸದಿದ್ದರೆ ಕ್ರಮ

ಬೆಂಗಳೂರು: ನಿಗಮ, ಮಂಡಳಿ ಮತ್ತು ಸರ್ಕಾರದ ಅಧೀನದ ಸಂಸ್ಥೆಗಳ ವಾಹನಗಳ ಮೇಲೆ ಸರ್ಕಾರಿ ಲಾಂಛನ ಬಳಕೆ ಮುಂದುವರಿಸಿದರೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದು ರಾಜ್ಯ ಸರ್ಕಾರ ಎಚ್ಚರಿಕೆ ನೀಡಿದೆ.

'ಸರ್ಕಾರದ ಲಾಂಛನ ಇರುವ ನೋಂದಣಿ ಸಂಖ್ಯೆಯ ಫಲಕಗಳನ್ನು ಅಳವಡಿಕೆ ಮಾಡಿದ್ದರೆ ಕೂಡಲೇ ತೆರವುಗೊಳಿಸಿ ಮೇ 24 ರೊಳಗೆ ಮಾಹಿತಿ ಒದಗಿಸಬೇಕು. ವಿಫಲವಾದಲ್ಲಿ ಆಯಾ ನಿಗಮ ಅಥವಾ ಸಂಸ್ಥೆಗಳ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಿ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ನಿಂದನಾ ಕ್ರಮ ಜರುಗಿಸಲಾಗುವುದು' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

ಖಾಸಗಿ ಸಂಸ್ಥೆಗಳು ತಮ್ಮ ವಾಹನಗಳ ಮೇಲೆ ಸರ್ಕಾರದ ಲಾಂಛನ ಅಥವಾ ಚಿಹ್ನೆಗಳನ್ನು ಅಳವಡಿಸಿಕೊಂಡಿದ್ದರೆ ತೆರವುಗೊಳಿಸಲು ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಬೇಕು. ಪೊಲೀಸ್ ಇಲಾಖೆಯಲ್ಲಿರುವ ಪೊಲೀಸ್-ಇ-ಆ್ಯಪ್ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಅನಧಿಕೃತ ಫಲಕಗಳ ಬಗ್ಗೆ ಸಾರ್ವಜನಿಕರು ಮಾಹಿತಿ ಒದಗಿಸಲು ಸಾರಿಗೆ ಇಲಾಖೆ ವಾಟ್ಸ್ ಆ್ಯಪ್ ಸಂಖ್ಯೆ ಒದಗಿಸಬೇಕು. ಸಾರ್ವಜನಿಕರು ಚಿತ್ರ ಸಹಿತ ಮಾಹಿತಿ ಒದಗಿಸಿದರೆ ಕೂಡಲೇ ನೋಟಿಸ್ ಜಾರಿ ಮಾಡಿ ಲಾಂಛನ ತೆರವುಗೊಳಿಸಬೇಕು. ಮಧ್ಯಪ್ರದೇಶದ ಇಂದೋರ್‌ನಲ್ಲಿ ಸಿಆರ್‌ಪಿಸಿ ಕಾಯ್ದೆಯಡಿ ಆದೇಶ ಹೊರಡಿಸಿ ವಾಹನಗಳಿಗೆ ಫ್ಯಾನ್ಸಿ ನಂಬರ್ ಫಲಕ ತಯಾರಿಕೆ ಮತ್ತು ಅಳವಡಿಕೆ ನಿಷೇಧಿಸಿದೆ. ಅದೇ ಮಾದರಿಯನ್ನು ರಾಜ್ಯದಲ್ಲೂ ಅನುಸರಿಸಲು ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

'ಗಾಂಧಿ, ಕುವೆಂಪು ಪಾಠ ಬಿಟ್ಟಿದ್ದ ಬರಗೂರು'

ಒಂದನೇ ಪುಟದಿಂದ...

'ಯಾವುದೇ ಸಮಾಜ ಸುಧಾರಕರ ವಿಷಯಗಳನ್ನು ಕೈಬಿಟ್ಟಿಲ್ಲ. ಸತ್ಯವನ್ನು ಬೋಧಿಸಲು ಪ್ರಯತ್ನಿಸಿದ್ದೇವೆ. ಹೀಗಾಗಿಯೇ ಪಠ್ಯಗಳನ್ನು ಪರಿಷ್ಕರಿಸಿದ್ದೇವೆ. ಹಿಂದಿನ ಬರಗೂರು ಸಮಿತಿ ಗಾಂಧೀಜಿ, ಅಂಬೇಡ್ಕರ್ ಸೇರಿದಂತೆ ಆರು ಮಹನೀಯರ ಪಾಠಗಳನ್ನು ಕಿತ್ತು ಹಾಕಿತ್ತು. ಆಗ ಏಕೆ ಬಾಯಿಗೆ ಬೀಗ ಹಾಕಿಕೊಂಡು ಕೂತಿದ್ದರು? ಮೈಸೂರು ಮಹಾರಾಜರ ಕುರಿತು ಐದು ಪುಟಗಳ ಪಾಠವಿತ್ತು. ಅದನ್ನು ತೆಗೆದು ಹಾಕಿ ಕೇವಲ ನಾಲ್ಕು ಸಾಲುಗಳನ್ನು ಮಾತ್ರ ಉಳಿಸಿದ್ದರು. ಬದಲಿಗೆ ಆರು ಪುಟಗಳ ಟಿಪ್ಪು ಸುಲ್ತಾನ್ ಅಧ್ಯಾಯ ಸೇರಿಸಿದರು. ಒಂದು ಸಮುದಾಯವನ್ನು ಓಲೈಸಲು ಹೀಗೆ ಮಾಡಿದರು' ಎಂದು ಟೀಕಿಸಿದರು.

'ತಜ್ಞರ ಅಭಿಪ್ರಾಯದಂತೆ ನಾರಾಯಣ ಗುರು ಅವರ ಪಾಠವನ್ನು ಸಮಾಜ ವಿಜ್ಞಾನದಿಂದ ತೆಗೆದು ಕನ್ನಡ ವಿಷಯದ ಪಠ್ಯಕ್ಕೆ ಸೇರಿಸಲಾಗಿದೆ' ಎಂದು ಹೇಳಿದರು.

'ಪೆರಿಯಾರ್ ಅವರ ಕೆಲವು ಸಾಲುಗಳನ್ನು ತೆಗೆದುಹಾಕಿದ್ದೇವೆ. ರಾಮ ನಮಗೆ ಆದರ್ಶವಾಗಬೇಕು. ರಾಮನ ಫೋಟೊಗೆ ಚಪ್ಪಲಿಯಲ್ಲಿ ಹೊಡೆದು, ರಾವಣನನ್ನು ಪೂಜಿಸುವುದನ್ನು ನಮ್ಮ ಮಕ್ಕಳಿಗೆ ಓದಿಸಬೇಕಾ? ರಾಮ ವೈದಿಕ ಸಂಸ್ಕೃತಿ ಪ್ರತಿನಿಧಿಸುತ್ತಾನೆ ಮತ್ತು ರಾವಣ ದ್ರಾವಿಡರ ಸಂಸ್ಕೃತಿ ಬಿಂಬಿಸುತ್ತಾನೆ ಎನ್ನುವುದನ್ನು ಮಕ್ಕಳಿಗೆ ಪಾಠ ಮಾಡಬೇಕೇ? ಇಂತಹ ವಿಷಯಗಳನ್ನು ಸಮರ್ಥಿಸಿಕೊಳ್ಳುವ ಬುದ್ಧಿಜೀವಿಗಳು ಎಂದು ಕರೆಯಿಸಿಕೊಂಡವರು ರಾಕ್ಷಸರ ವಂಶಸ್ಥರೇ' ಎಂದು ಕೇಳಿದರು.

'ಕುವೆಂಪು ಅವರಿಗೆ ನಾವು ಅವಮಾನ ಮಾಡಿಲ್ಲ. ನಾವು ರಾಮಾಯಣ ದರ್ಶನಂ ಸೇರಿಸಿದ್ದೇವೆ. ಹಿಂದಿನ ಸಮಿತಿಯೇ ಕುವೆಂಪು ಅವರಿಗೆ ಅವಮಾನ ಮಾಡಿತ್ತು. ಈ ಸಮಿತಿಯೇ ಮಕ್ಕಳಲ್ಲಿ ಜಾತೀಯ ವಿಷಬೀಜ ಮತ್ತು ದ್ವೇಷ ಬಿತ್ತುವ ಕಾರ್ಯವನ್ನು ಮಾಡಿತ್ತು' ಎಂದು ಕಿಡಿಕಾರಿದರು.

'ಟಿಪ್ಪು ಮತಾಂತರ ಮಾಡಿದ್ದ'

'ಬ್ರಿಟಿಷರ ವಿರುದ್ಧ ಟಿಪ್ಪು ಸುಲ್ತಾನ್ ಹೋರಾಡಿದ್ದು ನಿಜ. ಆದರೆ, ಬಲವಂತದಿಂದ ಮತಾಂತರ ಮಾಡುತ್ತಿದ್ದ. ಕೊಡಗು, ಕಾಸರಗೋಡಿನಲ್ಲಿ ಜನರನ್ನು ಮತಾಂತರಗೊಳಿಸಿದ್ದ. ಮೈಸೂರು ಮಹಾರಾಜರನ್ನು ಜೈಲಿನಲ್ಲಿರಿಸಿ ಹೈದರ್ ಅಲಿ ಆಡಳಿತ ನಡೆಸಿದ್ದ. ಇಂತಹ ವಿಷಯವನ್ನು ಪಠ್ಯಗಳಲ್ಲಿ ಇದುವರೆಗೆ ಪ್ರಸ್ತಾಪಿಸಿರಲಿಲ್ಲ. ಹೀಗಾಗಿ, ನಾವು ನಿಜವಾದ ಇತಿಹಾಸದ ಚಿತ್ರಣವನ್ನು ವಿವರಿಸಿದ್ದೇವೆ' ಎಂದು ಸಚಿವರು ತಿಳಿಸಿದರು.

'ಹಿಂದಿನ ಸಮಿತಿಯು ಬ್ರಿಟಿಷರ ವಿರುದ್ಧ ಹೋರಾಡಿದ ಸಂಗೊಳ್ಳಿ ರಾಯಣ್ಣ, ಅಬ್ಬಕ್ಕ, ಮದಕರಿ ನಾಯಕ ಅವರನ್ನು ಹಿಂದೂ ಎನ್ನುವ ಕಾರಣಕ್ಕೆ ಅವರನ್ನೆಲ್ಲ ಕೈಬಿಡಲಾಗಿತ್ತು. ಹೆಜ್ಜೆ, ಹೆಜ್ಜೆಗೂ ಹಿಂದೂಗಳ ವಿಷಯವನ್ನು ತಡೆಹಿಡಿಯಲಾಗಿತ್ತು. ಹಿಂದೂ ಮಹಾಸಾಗರ ಎನ್ನುವುದನ್ನು ಸಹ 'ಇಂಡಿಯನ್ ಓಷನ್' ಎಂದು ಕರೆದರು.

'ನಾವು ಟಿಪ್ಪು ಮತ್ತು ಸೇಡಿನ ರಾಜಕೀಯ ಮಾಡಿಲ್ಲ. ಟಿಪ್ಪು ಸುಲ್ತಾನ್ ಪಠ್ಯ ತೆಗೆದಿಲ್ಲ, ಸತ್ಯವನ್ನು ಅಳವಡಿಸುವ ಪ್ರಯತ್ನ ಮಾಡಿದ್ದೇವೆ' ಎಂದು ಸ್ಪಷ್ಟಪಡಿಸಿದರು.

> ರೋಹಿತ್ ಚಕ್ರತೀರ್ಥ ಯಾರೆಂದು ಪ್ರಶ್ನಿಸುತ್ತಾರೆ. ಅವರು ಐಐಟಿ ಪ್ರೊಫೆಸರ್. ಐಐಟಿ ಮತ್ತು ಸಿಇಟಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾರೆ
> **ಬಿ.ಸಿ.ನಾಗೇಶ್**, ಶಿಕ್ಷಣ ಸಚಿವ

ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ

'ಸದ್ಯದಲ್ಲೇ ಡಿಸೈನ್ ನೀತಿ ಜಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರವು ಸದ್ಯದಲ್ಲೇ 'ವಿನ್ಯಾಸ(ಡಿಸೈನ್) ನೀತಿ'ಯನ್ನು ಜಾರಿಗೆ ತರಲಿದ್ದು, ಈ ವರ್ಷದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ (ಬಿಟಿಎಸ್) ಜತೆಯಲ್ಲೇ 'ಬೆಂಗಳೂರು ಡಿಸೈನ್ ಫೆಸ್ಟಿವಲ್' ಅನ್ನು ಕೂಡಾ ಆಯೋಜಿಸಲಿದೆ. ಅಲ್ಲದೆ, ವಿನ್ಯಾಸದ ಕುರಿತ ಚಿಂತನೆ ಮತ್ತು ಜಾಗೃತಿಯನ್ನು ಶಾಲಾ- ಕಾಲೇಜುಗಳ ಪಠ್ಯಕ್ರಮದಲ್ಲೇ ಅಳವಡಿಸಲಾಗುವುದು ಎಂದು ಐಟಿ- ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ಡಬ್ಲ್ಯುಡಿಸಿ, ಡಬ್ಲ್ಯುಡಿಒ ಮತ್ತು ಯುಕೆ ಡಿಸೈನ್ ಕೌನ್ಸಿಲ್ ನಿಯೋಗದ ಸದಸ್ಯರು ಐಟಿಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಲಂಡನ್‌ನಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು.

ಲಂಡನ್‌ನಲ್ಲಿ ವರ್ಲ್ಡ್ ಡಿಸೈನ್ ಕೌನ್ಸಿಲ್ (ಡಬ್ಲ್ಯುಡಿಸಿ), ವರ್ಲ್ಡ್ ಡಿಸೈನ್ ಆರ್ಗನೈಸೇಶನ್ (ಡಬ್ಲ್ಯುಡಿಒ) ಮತ್ತು ಯುನೈಟೆಡ್ ಕಿಂಗ್ಡಂ ಡಿಸೈನ್ ಕೌನ್ಸಿಲ್‌ನ ಉನ್ನತ ಮಟ್ಟದ ಪ್ರತಿನಿಧಿಗಳೊಂದಿಗೆ ಮಾತುಕತೆ ಸಂದರ್ಭದಲ್ಲಿ ಈ ವಿಷಯ ತಿಳಿಸಿದರು.

ಭಾರತ ಸರ್ಕಾರವು ಈಗಾಗಲೇ 'ರಾಷ್ಟ್ರೀಯ ಡಿಸೈನ್ ನೀತಿ'ಯನ್ನು ಹೊಂದಿದ್ದು, ರಾಜ್ಯವು ಅದರಲ್ಲಿನ ಉಪಯುಕ್ತ ಅಂಶಗಳನ್ನು ತನ್ನ ನೀತಿಯಲ್ಲೂ ಅಳವಡಿಸಿಕೊಳ್ಳಲಿದೆ. ಜತೆಗೆ, ವರ್ಲ್ಡ್ ಡಿಸೈನ್ ಕೌನ್ಸಿಲ್‌ನಿಂದಲೂ ಸಲಹೆ ಪಡೆದುಕೊಂಡು ಸಮಗ್ರ ನೀತಿ ರೂಪಿಸಲಾಗುವುದು ಎಂದು ಅಶ್ವತ್ಥನಾರಾಯಣ ಹೇಳಿದ್ದಾರೆ.

ಸಚಿವರ ಜತೆ ವಿಚಾರ ವಿನಿಮಯದ ವೇಳೆ ನಿಯೋಗವು, ಬೆಂಗಳೂರು ಡಿಸೈನ್ ಡಿಸ್ಟ್ರಿಕ್ಟ್ (ಬಿಡಿಡಿ) ಅನ್ನು ಸ್ಥಾಪಿಸಲು ಅಗತ್ಯವಿರುವ ಔದ್ಯಮಿಕ ನೆರವನ್ನು ನೀಡುವ ಬಗ್ಗೆ ಆಸಕ್ತಿ ವ್ಯಕ್ತಪಡಿಸಿತು. ಜತೆಗೆ, ಇದನ್ನೆಲ್ಲ ಶಾಲಾ- ಕಾಲೇಜುಗಳ ಪಠ್ಯಕ್ರಮದ ಭಾಗವನ್ನಾಗಿ ಮಾಡುವ ಪ್ರಕ್ರಿಯೆಯಲ್ಲೂ ಸಹಾಯ ನೀಡುವ ಭರವಸೆ ನೀಡಿತು.

ಈ ಕುರಿತು ಹೆಚ್ಚಿನ ಚರ್ಚೆಗಾಗಿ ಬೆಂಗಳೂರಿಗೆ ಬರುವಂತೆ ನಿಯೋಗದ ಸದಸ್ಯರನ್ನು ಆಹ್ವಾನಿಸಿದರು. ಸಮಾಜದಲ್ಲಿ ವಿನ್ಯಾಸದ ಬಗ್ಗೆ ಜಾಗೃತಿ ಮೂಡಿಸಿ, ಈ ಜ್ಞಾನಧಾರೆಗೆ ಬೇಡಿಕೆ ಸೃಷ್ಟಿಸಲು ಅಗತ್ಯ ವ್ಯವಸ್ಥೆಗಳನ್ನು ಮಾಡುವುದು ಸರ್ಕಾರದ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಡಿಸೈನ್ ಡಿಸ್ಟ್ರಿಕ್ಟ್ ಸ್ಥಾಪನೆ ನೆರವಾಗಲಿದೆ. ಮೊದಲಿಗೆ, ಪ್ರಾಯೋಗಿಕವಾಗಿ ಆಯ್ದ ಶಾಲೆಗಳಲ್ಲಿ ಡಿಸೈನ್ ಬೋಧನೆಗೆ ಚಾಲನೆ ನೀಡಬಹುದು. ಇದರ ಫಲಿತಾಂಶ ಆಧರಿಸಿ, ನಂತರ ರಾಜ್ಯಾದ್ಯಂತ ವಿಸ್ತರಿಸಬಹುದು. ರಾಜ್ಯದ ಐಟಿ ಇಲಾಖೆಯೇ ನೂತನ ವಿನ್ಯಾಸ ನೀತಿ ರೂಪಿಸಲಿದೆ ಎಂದು ವಿವರಿಸಿದರು. ನಿಯೋಗದಲ್ಲಿದ್ದ ಡಬ್ಲ್ಯುಡಿಸಿ ಮುಖ್ಯಸ್ಥೆ ಪೌಲಾ ಗ್ರಹಾಂ ಗೆಜಾರ್ಡ್ ಮಾತನಾಡಿದರು.

ಕೋರೆಗೆ 'ಜೀವಮಾನ ಸಾಧನೆ' ಪ್ರಶಸ್ತಿ

ಬೆಳಗಾವಿ: ನ್ಯೂಯಾರ್ಕ್‌ನ ಭಾರತೀಯ ರಾಯಭಾರಿ ಕಚೇರಿಯಲ್ಲಿ ಮೇ 21ರಂದು ನಡೆದ ಸಮಾರಂಭದಲ್ಲಿ ಅಮೆರಿಕದ ಇಂಡೊ-ಅಮೆರಿಕನ್ ಪ್ರೆಸ್ ಕ್ಲಬ್‌ನಿಂದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಗ್ರಾಮೀಣ ಜನರಿಗೆ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಒದಗಿಸುತ್ತಿರುವುದನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. ಭಾರತೀಯ ರಾಯಭಾರಿ ಕಚೇರಿಯ ಕನ್ಸೂಲ್ ಜನರಲ್ ರಣಧೀರ ಜೈಸ್ವಾಲ್ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ನ್ಯೂಯಾರ್ಕ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಭಾರತೀಯ ಉದ್ಯಮಿ ಪ್ಯಾಮ್ ಕ್ವಾತ್ರಾ, ಬಿಲ್ ಡೆ ಬ್ಲಾಸಿಯೊ, ಝೇವಿಯರ್ ವಿಶ್ವವಿದ್ಯಾಲಯದ ಅಧ್ಯಕ್ಷ ರವಿಶಂಕರ ಭೂಪ್ಲಾಪುರ, ಡಾ.ದತ್ತಾತ್ರೇಯುಡು ನೋರಿ, ಇಂಡೊ-ಅಮೆರಿಕನ್ ಪ್ರೆಸ್ ಕ್ಲಬ್ ಕಾರ್ಯಾಧ್ಯಕ್ಷ ಕಮಲೇಶ್ ಮೆಹ್ತಾ ಹಾಜರಿದ್ದರು.

ಜಬ್ಬಾರ್, ಯಾದವ್‌ಗೆ ಕಾಂಗ್ರೆಸ್ ಟಿಕೆಟ್

ಒಂದನೇ ಪುಟದಿಂದ...

ಒಟ್ಟು 7 ಸ್ಥಾನಗಳ ಪೈಕಿ ಕಾಂಗ್ರೆಸ್ ಪಾಲಿಗೆ 2 ಸ್ಥಾನಗಳನ್ನು ಮಾತ್ರ ಗೆಲ್ಲುವುದಕ್ಕೆ ಸಾಧ್ಯವಿದೆ. ಈ ಎರಡು ಸ್ಥಾನಗಳಿಗೆ ಪಕ್ಷದ ಅಲ್ಪಸಂಖ್ಯಾತರ ರಾಜ್ಯ ಘಟಕದ ಅಧ್ಯಕ್ಷ ಕೆ.ಅಬ್ದುಲ್ ಜಬ್ಬಾರ್ ಹಾಗೂ ಬಿಎಂಟಿಸಿ ಮಾಜಿ ಅಧ್ಯಕ್ಷ ಎಂ.ನಾಗರಾಜು ಯಾದವ್ ಅವರಿಗೆ ಸೋಮವಾರ ಟಿಕೆಟ್ ಘೋಷಿಸಲಾಯಿತು.

ಅಬ್ದುಲ್ ಜಬ್ಬಾರ್ ಅವರು ಈ ಹಿಂದೆ ಪರಿಷತ್ ಸದಸ್ಯರಾಗಿದ್ದರೆ, ಯಾದವ್ ಅವರು ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲಿ ಬಿಎಂಟಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಟಿಕೆಟ್‌ಗಾಗಿ ಪಕ್ಷದಲ್ಲಿ ಭಾರಿ ಪೈಪೋಟಿ ಏರ್ಪಟ್ಟಿತ್ತು. ಟಿಕೆಟ್ ನಿರೀಕ್ಷೆಯಲ್ಲಿದ್ದ ಹಿರಿಯ ಮುಖಂಡ, ಪರಿಷತ್‌ನ ಮಾಜಿ ಸದಸ್ಯ ಎಸ್.ಆರ್. ಪಾಟೀಲ ಮತ್ತಿತರರಿಗೆ ತೀವ್ರ ನಿರಾಸೆ ಆದಂತಾಗಿದೆ. ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಸದಸ್ಯರನ್ನು ಆಯ್ಕೆ ಮಾಡುವ ಸಂಬಂಧ ನಾಮಪತ್ರ ಸಲ್ಲಿಕೆಗೆ ಮಂಗಳವಾರ ಕೊನೆಯ ದಿನವಾಗಿದೆ.

ಮಣೆ ಹಾಕದ ವರಿಷ್ಠರು: ಮಾಜಿ ಸಚಿವ ಎಂ.ಆರ್. ಸೀತಾರಾಮ್ ಅಥವಾ ಐವಾನ್ ಡಿಸೋಜಾ ಅವರ ಪರ ಒಲವು ತೋರಿದ್ದ ಸಿದ್ದರಾಮಯ್ಯ ಅವರ ಮಾತು ನಡೆಯಲಿಲ್ಲ. ಮತ್ತೊಂದೆಡೆ ಕೇಂದ್ರದ ಮಾಜಿ ಸಚಿವ ರೆಹಮಾನ್ ಖಾನ್ ಅವರ ಪುತ್ರ ಮನ್ಸೂರ್ ಅಲಿ ಖಾನ್ ಹಾಗೂ ಎಸ್.ಆರ್. ಪಾಟೀಲ ಅವರ ಪರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕೊನೆ ಕ್ಷಣದವರೆಗೂ ನಡೆಸಿದ ಪ್ರಯತ್ನ ಫಲಿಸಿಲ್ಲ.

ಮುಸ್ಲಿಂ ಸಮುದಾಯವು ಎಸ್‌ಡಿಪಿಐ ಪರ ವಾಲುವ ಸಾಧ್ಯತೆಯನ್ನು ಮನಗಂಡ ವರಿಷ್ಠರು, ಅಲ್ಪಸಂಖ್ಯಾತ ಘಟಕದ ರಾಜ್ಯ ಅಧ್ಯಕ್ಷ ಕೆ.ಅಬ್ದುಲ್ ಜಬ್ಬಾರ್ ಅವರ ಪರ ಒಲವು ತೋರಿದ್ದಾರೆ. ಹಿಂದುಳಿದ ವರ್ಗದ ಮುಖಂಡರನ್ನು ಪಕ್ಷದಲ್ಲೇ ಹಿಡಿದಿಟ್ಟುಕೊಳ್ಳುವ ಪ್ರಯತ್ನವಾಗಿ ಗೊಲ್ಲ ಸಮುದಾಯಕ್ಕೆ ಸೇರಿರುವ ಯಾದವ್ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸಾಮೂಹಿಕ ನಾಯಕತ್ವಕ್ಕೆ ಆದ್ಯತೆ ನೀಡಲಾಗುವುದು ಎಂಬ ಸಂದೇಶವನ್ನು ಸಾರಿರುವ ಕಾಂಗ್ರೆಸ್ ಹೈಕಮಾಂಡ್, ಪರಿಷತ್ ಟಿಕೆಟ್ ಹಂಚಿಕೆ ಕಾರಣ ರಾಜ್ಯ ಮುಖಂಡರಲ್ಲಿ ವೈಮನಸ್ಯ ಉಂಟಾಗುವ ಸಾಧ್ಯತೆ ಇದ್ದುದರಿಂದ ಯಾರ ಶಿಫಾರಸುಗಳಿಗೂ ಮಹತ್ವ ನೀಡದೇ ಸ್ಪಷ್ಟ ಸಂದೇಶ ರವಾನಿಸಿದೆ.

ಹೆತ್ತಮಗುವನ್ನೇ 'ಅನಾಥ' ಎಂದರು

ಮೈಸೂರು: ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿದ್ದ ಪ್ರಿಯಕರನಿಗಾಗಿ ಮಹಿಳೆಯೊಬ್ಬಳು ಹೆತ್ತ ಮಗುವನ್ನೇ 'ಅನಾಥ ಮಗು' ಎಂದು ಹೇಳಿ ಇದೀಗ ಪೊಲೀಸರ ಅತಿಥಿಯಾಗಿದ್ದಾರೆ.

ರಾಯಚೂರಿನ 23 ವರ್ಷದ ವಿವಾಹಿತೆಗೂ ಸ್ಥಳೀಯ ನಿವಾಸಿ ರಘು (23) ಎಂಬಾತನಿಗೂ ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾಗಿದೆ. ಇಬ್ಬರೂ ವಿವಾಹವಾಗಲು ನಿರ್ಧರಿಸಿದರು.

'ಮಹಿಳೆಗೆ 9 ತಿಂಗಳು ಮಗುವಿದ್ದು, ಆ ಮಗುವನ್ನು ಜತೆಯಲ್ಲಿರಿಸಿಕೊಂಡು ಸಂಸಾರ ನಡೆಸುವುದು ಕಷ್ಟ' ಎಂದು ರಘು ಹೇಳಿದ್ದಾನೆ. ಹೀಗಾಗಿ, ಮಗುವನ್ನೇ ಬಿಡಲು ಮಹಿಳೆ ನಿರ್ಧರಿಸಿದಳು.

ಆಕೆ ಹಾಗೂ ಮಗುವನ್ನು ರಾಯಚೂರಿನಿಂದ ಮೇ 10ರಂದು ಕರೆದುಕೊಂಡು ನಗರಕ್ಕೆ ಬಂದಿದ್ದಾನೆ. ಮಗುವಿನೊಂದಿಗೆ ಇಲ್ಲಿನ ಲಷ್ಕರ್ ಪೊಲೀಸ್ ಠಾಣೆಗೆ ತೆರಳಿ, 'ರಾಯಚೂರಿನ ಬಸ್ ನಿಲ್ದಾಣದಲ್ಲಿ ಅಪರಿಚಿತ ಮಹಿಳೆಯೊಬ್ಬರು ನನಗೆ ಮಗು ನೀಡಿ ಹೊರಟು ಹೋದರು. ಎಷ್ಟೇ ಹುಡುಕಾಡಿದರೂ ಆಕೆ ಸಿಗಲಿಲ್ಲ. ಅನಿವಾರ್ಯವಾಗಿ ಇಲ್ಲಿಗೆ ತಂದಿದ್ದೇನೆ' ಎಂದು ಹೇಳಿ ಪೊಲೀಸರಿಗೆ ಆ ಮಗುವನ್ನು ಒಪ್ಪಿಸಿದ್ದಾನೆ.

ಬಳಿಕ ಪೊಲೀಸರು ತನಿಖೆ ಕೈಗೊಂಡು, ರಾಯಚೂರಿನಲ್ಲಿ ಜಾಲಾಡಿದ್ದಾರೆ. ಅತ್ತ, ಪತ್ನಿ ಮತ್ತು ಮಗು ಕಾಣೆಯಾಗಿದ್ದಾರೆ ಎಂದು ಮಹಿಳೆಯ ಪತಿ ದೂರು ನೀಡಿರುವ ಮಾಹಿತಿ ಲಭಿಸಿದೆ. ಪತಿಯನ್ನು ವಿಚಾರಿಸಿದಾಗ ಮಗು ಅವರದ್ದೇ ಎಂದು ಗೊತ್ತಾಯಿತು. ಬಳಿಕ ಯುವಕ, ಮಹಿಳೆಯನ್ನು ವಿಚಾರಣೆಗೆ ಒಳಪಡಿಸಿದಾಗ ಪ್ರಕರಣ ಬಯಲಾಯಿತು ಎಂದು ಪೊಲೀಸರು ವಿವರಿಸಿದ್ದಾರೆ.

ಚಕ್ರತೀರ್ಥ ಸಮಿತಿಗೆ ಪಿಯು ಪಠ್ಯ ಪರಿಷ್ಕರಣೆ ಹೊಣೆ

ಒಂದನೇ ಪುಟದಿಂದ...

ಈ ಬಗ್ಗೆ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿರುವ ಸಚಿವ ಬಿ.ಸಿ. ನಾಗೇಶ್, 'ಪದವಿಪೂರ್ವ ತರಗತಿಯ ಪಠ್ಯಗಳನ್ನು ಸಹ ಖಂಡಿತ ಪರಿಷ್ಕರಣೆ ಮಾಡುತ್ತೇವೆ. ಒಂದು ಅಧ್ಯಾಯದಲ್ಲಿ ಆಕ್ಷೇಪಾರ್ಹ ವಿಷಯಗಳಿವೆ. ಇದನ್ನು ಸರಿಪಡಿಸಬೇಕಾಗಿದೆ. ಹೀಗಾಗಿ, ಇದನ್ನು ಪುನರ್ ಪರಿಷ್ಕರಿಸಲಾಗುವುದು. ರೋಹಿತ್ ನೇತೃತ್ವದ ಸಮಿತಿಗೆ ಜವಾಬ್ದಾರಿ ನೀಡಲಾಗಿದೆ' ಎಂದರು.

ಹೊರಟ್ಟಿ ವಿರುದ್ಧ ಜೆಡಿಎಸ್‌ನ ಗಡದಿನ್ನಿ

ಬೆಂಗಳೂರು: ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ವಿರುದ್ಧ ಶ್ರೀಶೈಲ ನಿಂಗಪ್ಪ ಗಡದಿನ್ನಿ ಅವರನ್ನು ಕಣಕ್ಕಿಳಿಸಲು ಜೆಡಿಎಸ್ ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, 'ನಮ್ಮ ಪಕ್ಷ ಬಿಟ್ಟು ಹೊರಟ್ಟಿ ಅವರು ಬಿಜೆಪಿಗೆ ಹೋಗಿ ಚುನಾವಣೆಗೆ ನಿಂತಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಅವರಿಗೆ ಯಾವ ರೀತಿ ನ್ಯಾಯ ಸಿಕ್ಕಿದೆ ಎಂಬುದು ಗೊತ್ತಿಲ್ಲ. ನಾವು ಸ್ಪರ್ಧೆಯಿಂದ ಹಿಂದೆ ಸರಿಯುವುದಿಲ್ಲ. ವಾಯವ್ಯ ಶಿಕ್ಷಕರ ಕ್ಷೇತ್ರದಿಂದ ಚಂದ್ರಶೇಖರ ಇ. ಲೋಣಿ ಅವರಿಗೆ ಟಿಕೆಟ್ ನೀಡಲಾಗಿದೆ' ಎಂದರು. 'ಜೂನ್ 3ರ ನಂತರ ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಎರಡು ದಿನ ಪ್ರವಾಸ ಮಾಡಿ ಮತಯಾಚನೆ ಮಾಡುತ್ತೇನೆ' ಎಂದರು.

ಸಂಕ್ಷಿಪ್ತ ಸುದ್ದಿ

ವಿನಯ್ ಸಕ್ಸೇನಾ ದೆಹಲಿ ಲೆಫ್ಟಿನೆಂಟ್ ಗವರ್ನರ್

ನವದೆಹಲಿ(ಪಿಟಿಐ): ವಿನಯ್ ಕುಮಾರ್ ಸಕ್ಸೇನಾ ಅವರು ದೆಹಲಿಯ ನೂತನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕವಾಗಿದ್ದಾರೆ. ಈ ಹಿಂದಿನ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಾಲ್ ಅವರು ವೈಯಕ್ತಿಕ ಕಾರಣಕ್ಕೆ ಕೆಲ ದಿನಗಳ ಹಿಂದಷ್ಟೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಸಕ್ಸೇನಾ ಅವರು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಮುಖ್ಯಸ್ಥರಾಗಿದ್ದರು.

ವಿನಯ್ ಕುಮಾರ್ ಅವರು ರಾಷ್ಟ್ರ ರಾಜಧಾನಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕವಾಗಿದ್ದಾರೆ ಎಂದು ರಾಷ್ಟ್ರಪತಿ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಲ್ಕು ಮಕ್ಕಳಿಗೆ ಜನ್ಮ

ಶಿವಮೊಗ್ಗ: ಭದ್ರಾವತಿ ತಾಲ್ಲೂಕಿನ ತಡಸದ ಅಲ್ಮಾಜ್ ಬಾನು ಅವರು ಸೋಮವಾರ ನಾಲ್ವರು ಶಿಶುಗಳಿಗೆ ಜನ್ಮ ನೀಡಿದ್ದಾರೆ. ನಗರದ ಸರ್ಜಿ ಆಸ್ಪತ್ರೆಯ ವೈದ್ಯರು 22 ವರ್ಷದ ಮಹಿಳೆಗೆ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸಿದ್ದಾರೆ.

ತಾಯಿ ಜೊತೆಗೆ ಎರಡು ಗಂಡು, ಎರಡು ಹೆಣ್ಣು ಶಿಶುಗಳು ಆರೋಗ್ಯವಾಗಿವೆ. ಮಕ್ಕಳು 1.1 ಕೆ.ಜಿಯಿಂದ 1.8 ಕೆ.ಜಿ. ತೂಕವಿವೆ. ನಾಲ್ಕೂ ಶಿಶುಗಳನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ.

'ಅನುವಂಶೀಯ ಕಾರಣಗಳಿಂದ 5.12 ಲಕ್ಷ ತಾಯಂದಿರಲ್ಲಿ ಒಂದು ಇಂತಹ ಪ್ರಕರಣ ವರದಿಯಾಗಲಿದೆ. ನಮ್ಮ ಆಸ್ಪತ್ರೆಯಲ್ಲಿ ಇದು ಮೊದಲ ಪ್ರಕರಣ. ಎಲ್ಲ ಮಕ್ಕಳಿಗೂ ಎದೆಹಾಲು ಕೊಡಿಸಲು ವ್ಯವಸ್ಥೆ ಮಾಡಿದ್ದೇವೆ' ಎಂದು ಆಸ್ಪತ್ರೆ ಮುಖ್ಯಸ್ಥ ಡಾ.ಧನಂಜಯ ಸರ್ಜಿ ಪ್ರತಿಕ್ರಿಯಿಸಿದರು.

ಸಂಜಯ್ ರಾವುತ್ ವಿರುದ್ಧ ಮಾನನಷ್ಟ ಮೊಕದ್ದಮೆ

ಮುಂಬೈ (ಪಿಟಿಐ): ಬಿಜೆಪಿ ನಾಯಕ ಕಿರಿಟ್ ಸೋಮಯ್ಯ ದಂಪತಿ ಸುಮಾರು ₹100 ಕೋಟಿಯ 'ಶೌಚಾಲಯ ಹಗರಣ'ದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ್ದ ಶಿವಸೇನಾ ಸಂಸದ ಸಂಜಯ್ ರಾವುತ್ ವಿರುದ್ಧ ಕಿರಿಟ್ ಸೋಮಯ್ಯ ಅವರ ಪತ್ನಿ ಮೇಧಾ ಸೋಮಯ್ಯ ಹೈಕೋರ್ಟ್‌ನಲ್ಲಿ ಸೋಮವಾರ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ರಾವುತ್ ಅವರು ₹100 ಕೋಟಿ ಪರಿಹಾರ ಪಾವತಿಸಬೇಕು ಅಥವಾ ಈ ಮೊತ್ತವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ಠೇವಣಿ ಇಡಲು ನಿರ್ದೇಶನ ನೀಡುವಂತೆ ಕೋರಿ ಅವರು ಹೈಕೋರ್ಟ್‌ಗೆ ಮನವಿ ಸಲ್ಲಿಸಿದರು.

ಬಜೆಟ್ ಅಧಿವೇಶನ: ಆಜಂ ಖಾನ್ ಗೈರು

ಲಖನೌ(ಪಿಟಿಐ): ಉತ್ತರ ಪ್ರದೇಶದ ಬಜೆಟ್ ಅಧಿವೇಶನದ ಮೊದಲ ದಿನ ಸಮಾಜವಾದಿ ಪಕ್ಷದ ಹಿರಿಯ ನಾಯಕ ಆಜಂ ಖಾನ್ ಅವರು ಭಾಗವಹಿಸಲಿಲ್ಲ. ಅಲ್ಲದೆ, ಸೋಮವಾರ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರ ಭಾಷಣ ಮಾಡುವ ವೇಳೆಯೇ ಸಮಾಜವಾದಿ ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ಸದನ ಆರಂಭವಾಗುತ್ತಿದ್ದಂತೆ ಕಾನೂನು ಸುವ್ಯವಸ್ಥೆ, ರೈತರು ಹಾಗೂ ಅತ್ಯಾಚಾರ ಘಟನೆಗೆ ಸಂಬಂಧಿಸಿದ ಫಲಕಗಳನ್ನು ಹಿಡಿದು, ಸದನದ ಬಾವಿಗೆ ಧುಮುಕಿದ ಎಸ್‌ಪಿ ಸದಸ್ಯರು, 'ರಾಜ್ಯಪಾಲರೇ ವಾಪಸ್ ಹೋಗಿ' ಎಂಬ ಘೋಷಣೆಗಳನ್ನು ಕೂಗಿದರು. ಆದಾಗ್ಯೂ, ರಾಜ್ಯಪಾಲೆ ಆನಂದಿಬೆನ್ ಪಟೇಲ್ ಅವರು, 15 ನಿಮಿಷದಲ್ಲಿ ಭಾಷಣವನ್ನು ಓದಿ ಮುಗಿಸಿದರು.

ನಿಧನ ವಾರ್ತೆ

ಯಶೋವರ್ಮ

ಉಜಿರೆ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಎಸ್‌ಡಿಎಂ) ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ, ಉಜಿರೆಯ ನಿವಾಸಿ ಡಾ.ಬಿ.ಯಶೋವರ್ಮ (67) ಭಾನುವಾರ ತಡರಾತ್ರಿ ಸಿಂಗಾಪುರದಲ್ಲಿ ನಿಧನರಾದರು.

ಅವರಿಗೆ ಪತ್ನಿ ಸೋನಿಯಾವರ್ಮ, ಪುತ್ರರಾದ ಪೂರನ್‌ವರ್ಮ ಮತ್ತು ಕೆಯೂರ್ ವರ್ಮ ಇದ್ದಾರೆ. ಅನಾರೋಗ್ಯ ಪೀಡಿತರಾಗಿದ್ದ ಅವರನ್ನು ಚಿಕಿತ್ಸೆಗಾಗಿ ಸಿಂಗಪುರಕ್ಕೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅಲ್ಲಿ ನಿಧನರಾದರು.

ಮೃತರ ಗೌರವಾರ್ಥ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಎಲ್ಲ ಶಾಲಾ-ಕಾಲೇಜುಗಳಿಗೆ ಸೋಮವಾರ ರಜೆ ನೀಡಲಾಯಿತು.

ಬೆಳ್ತಂಗಡಿ ತಾಲ್ಲೂಕಿನ ಪೆರಾಡಿಬೀಡಿನವರಾದ ಅವರು, ಮೂಡುಬಿದಿರೆ ಜೈನ್ ಹೈಸ್ಕೂಲ್‌ನ 'ಕನ್ನಡ ಪಂಡಿತ'ರೆಂದೇ ಚಿರಪರಿಚಿತರಾಗಿದ್ದ ದಿವಂಗತ ಟಿ.ರಘುಚಂದ್ರ ಶೆಟ್ಟಿ ಮತ್ತು ಪೆರಾಡಿ ಬೀಡು ಪುಷ್ಪಾವತಿ ದಂಪತಿಯ ಪುತ್ರ.

ಸಸ್ಯವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರರಾದ ಅವರು, ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಉಜಿರೆಯ ಎಸ್‌ಡಿಎಂ ಕಾಲೇಜು ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿ ಬಳಿಕ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಯಾಗಿದ್ದರು.

ಯಶೋವರ್ಮ ಅವರ ಪಾರ್ಥಿವ ಶರೀರವು ವಿಮಾನದ ಮೂಲಕ ಮಂಗಳವಾರ ಬೆಳಿಗ್ಗೆ ಬೆಂಗಳೂರಿಗೆ ಬರಲಿದ್ದು, ನಂತರ ರಸ್ತೆ ಮಾರ್ಗದಲ್ಲಿ ಉಜಿರೆ ತಲುಪಲಿದೆ. ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಮಧ್ಯಾಹ್ನ 2ರಿಂದ 5.30 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ನಂತರ ಉಜಿರೆಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಪುಸ್ತಕ ಖರೀದಿಸಿದೆ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನದಿಂದ ನನ್ನ ಶಿಕ್ಷಣಕ್ಕೆ ಅನುಕೂಲವಾಯಿತು. ಸದ್ಯ ದ್ವಿತೀಯ ಪಿಯುಸಿ ವಿಜ್ಞಾನ ವಿಷಯ ವ್ಯಾಸಂಗ ಮಾಡುತ್ತಿದ್ದೇನೆ. ಪತ್ರಿಕೆಯು ನೀಡಿದ ಹಣದಿಂದ ಪುಸ್ತಕಗಳನ್ನು ಖರೀದಿಸಿದೆ. ಶಿಕ್ಷಣಕ್ಕೆ ಸಹಕಾರ ನೀಡಿದ 'ಪ್ರಜಾವಾಣಿ'ಗೆ ಆಭಾರಿಯಾಗಿದ್ದೇನೆ.

ಲೋಕೇಶ ಎನ್, ಜನ್ನೂರು ಹೊಸೂರು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ

ಪತ್ರಿಕೆಗೆ ಧನ್ಯವಾದ

'ಪ್ರಜಾವಾಣಿ' ನೀಡಿದ ಧನ ಸಹಾಯದ ಸ್ವಲ್ಪ ಭಾಗವನ್ನು ಪಿಯು ಕಾಲೇಜಿನ ಶುಲ್ಕವನ್ನು ಪಾವತಿಸಲು ಬಳಸಿದೆ. ಉಳಿದ ಹಣದಲ್ಲಿ ಪುಸ್ತಕಗಳು, ಚೀಲ ಇನ್ನಿತರ ಸಾಮಗ್ರಿಗಳನ್ನು ಖರೀದಿಸಿದೆ. ವೈದ್ಯನಾಗಬೇಕು ಎಂಬ ಹಂಬಲದಿಂದ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ನನಗೆ ಪ್ರೋತ್ಸಾಹ ನೀಡಿದ ಪತ್ರಿಕೆಗೆ ಧನ್ಯವಾದಗಳು

ನಾಗೇಂದ್ರ ಪ್ರಸಾದ್ ಆರ್, ರಾಮಸಮುದ್ರ, ಚಾಮರಾಜನಗರ

EXAM DH ಪ್ರಜಾವಾಣಿ MASTERMIND

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.com ಗೆ ಭೇಟಿ ಕೊಡಿ

ಗುಣಮಟ್ಟದ ಜೀವನಕ್ಕೆ ಹತ್ತು ಆಧಾರ ಸ್ತಂಭಗಳು

ಡಾ. ಕಿರಣ್ ವಿ. ಎಸ್.

‘ಜೀವನ ದೊಡ್ಡದಾಗಿರಬೇಕು; ಉದ್ದವಾಗಿಯಲ್ಲ’ ಎಂದೋ, ಅಥವಾ ‘ಜೀವನದಲ್ಲಿ ಎಷ್ಟು ಕ್ಷಣಗಳಿವೆ ಎಂಬುದು ಮುಖ್ಯವಲ್ಲ; ಬದುಕಿರುವ ಪ್ರತಿಯೊಂದು ಕ್ಷಣದಲ್ಲೂ ಎಷ್ಟು ಜೀವನವಿದೆ ಎಂಬುದು ಮುಖ್ಯ’ ಎನ್ನುವ ಕಾವ್ಯಾತ್ಮಕ ಮಾತುಗಳನ್ನು ಕೇಳಿರುತ್ತೇವೆ. ಜೀವನದ ಗುಣಮಟ್ಟ ಎಂದರೇನು; ಅದನ್ನು ನಿರ್ಧರಿಸುವ ಅಂಶಗಳು ಯಾವುವು ಎಂದು ಸಂತರಿಂದ ಹಿಡಿದು ವಿಜ್ಞಾನಿಗಳವರೆಗೆ ಪ್ರತಿಯೊಬ್ಬರೂ ಆಲೋಚಿಸಿರುತ್ತಾರೆ. ಈ ನಿಟ್ಟಿನಲ್ಲಿ ವೈಜ್ಞಾನಿಕ ಅಧ್ಯಯನಗಳು ಏನನ್ನು ಹೇಳುತ್ತವೆ?

1970ರ ದಶಕದಲ್ಲಿ ‘ಜೀವನ ಗುಣಮಟ್ಟದ ಭೌತಿಕ ಸೂಚ್ಯಂಕ’ ಎನ್ನುವ ಮಾಪನ ಚಾಲ್ತಿಗೆ ಬಂದಿತು. ಅಭಿವೃದ್ಧಿಯನ್ನು ಅಳೆಯಲು ಅಲ್ಲಿಯವರೆಗೆ ಆಯಾ ದೇಶದ ಉತ್ಪಾದಕತೆಯನ್ನು ಬಳಸಲಾಗುತ್ತಿತ್ತು. ಆದರೆ, ದೇಶದ ಉತ್ಪಾದಕತೆಗೂ, ಅಲ್ಲಿನ ಜನರ ಜೀವನ ಗುಣಮಟ್ಟಕ್ಕೂ ನೇರ ಸಂಬಂಧವಿಲ್ಲ ಎಂದು ಸಮಾಜವಿಜ್ಞಾನಿಗಳು ಆಗ್ರಹಿಸಿದರು. ಹೀಗಾಗಿ, ಜನರ ಜೀವನಮಟ್ಟದ ಮಾಪನಗಳಾದ ಸಾಕ್ಷರತೆ, ಜೀವಿತಾವಧಿ, ಮತ್ತು ಜನಿಸಿದವರ ಪೈಕಿ ಎಷ್ಟು ಮಕ್ಕಳು ಒಂದು ವರ್ಷದ ನಂತರವೂ ಜೀವಂತ ಇರುತ್ತಾರೆ ಎನ್ನುವ ಲೆಕ್ಕಾಚಾರಗಳ ಸರಾಸರಿಯ ‘ಜೀವನ ಗುಣಮಟ್ಟದ ಭೌತಿಕ ಸೂಚ್ಯಂಕ’ವನ್ನು ಮೋರಿಸ್ ಡೇವಿಡ್ ಅಭಿವೃದ್ಧಿಗೊಳಿಸಿದರು. ಇದರಲ್ಲಿ ಜನರ ಆದಾಯದ ನೇರ ಪ್ರಸ್ತಾಪ ಇಲ್ಲವೆನ್ನುವುದು ಮಹತ್ವದ ವಿಷಯ. ದೇಶದ ಆದಾಯ ಹೆಚ್ಚಿದಂತೆ ಈ ಮೂರೂ ಮಾಪನಗಳೂ ಹೆಚ್ಚಬೇಕು. ಆಗ ಮಾತ್ರ ದೇಶದ ಆದಾಯ ಸಾಮಾನ್ಯ ಜನರ ಅಭಿವೃದ್ಧಿಗೆ ಬಳಕೆ ಆಗುತ್ತಿದೆ ಎಂದರ್ಥ. ಹೀಗಾಗಿ, ‘ಜೀವನ ಗುಣಮಟ್ಟದ ಭೌತಿಕ ಸೂಚ್ಯಂಕ’ ದೇಶದ ಒಟ್ಟಾರೆ ಪ್ರಗತಿಯ ಪರೋಕ್ಷ ಮಾಪನ ಎಂದಾಯಿತು. 2010ರಲ್ಲಿ ವಿಶ್ವಸಂಸ್ಥೆ ‘ಜೀವನ ಗುಣಮಟ್ಟದ ಭೌತಿಕ ಸೂಚ್ಯಂಕ’ವನ್ನು ಬದಲಾಯಿಸಿ, ‘ಮಾನವ ಅಭಿವೃದ್ಧಿಯ ಸೂಚ್ಯಂಕ’ವನ್ನು ತಂದಿತು. ಇದರಲ್ಲಿ ಒಂದು ವರ್ಷದ ಮಕ್ಕಳ ಜೀವಂತತೆಯ ಸಂಖ್ಯೆಯನ್ನು ಕೈಬಿಟ್ಟು, ದೇಶದ ಜನರ ಸರಾಸರಿ ಆದಾಯವನ್ನು ಸೇರಿಸಲಾಯಿತು. ಇದಕ್ಕೆ ಎಷ್ಟೇ ವಿರೋಧಗಳೂ ವಿಮರ್ಶೆಗಳೂ ಇದ್ದರೂ, ಬೇರೊಂದು ಪ್ರಮಾಣವತ್ತಾದ ಸೂಚ್ಯಂಕ ಬರುವವರೆಗೆ ಯಾವುದೇ ದೇಶದ ಅಭಿವೃದ್ಧಿಯ ಸಂಕೇತವಾಗಿ ಇದನ್ನೇ ಬಳಸಲಾಗುತ್ತಿದೆ.

ದೇಶ ಎನ್ನುವುದು ಪ್ರಜೆಗಳ ಸಂಘ. ಇಡೀ ದೇಶದ ಪ್ರಗತಿಯ ಸಂಕೇತವಾಗಿ ನೀಡುವ ಒಂದು ಸೂಚ್ಯಂಕ ಅಪಾರ ವೈವಿಧ್ಯದ ಪ್ರಜೆಗಳ ಬಗ್ಗೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಹೆಚ್ಚಿನದೇನನ್ನೂ ಸೂಚಿಸುವುದಿಲ್ಲ. ಹೀಗಾಗಿ, ಪ್ರತಿಯೊಬ್ಬ ವ್ಯಕ್ತಿಯ ಮಟ್ಟದಲ್ಲಿ ಜೀವನದ ಗುಣಮಟ್ಟವನ್ನು ಸುಧಾರಿಸಬಲ್ಲ ಮಾಪನಗಳನ್ನು ತಜ್ಞರು ಸೂಚಿಸಿದ್ದಾರೆ. ಈ ಹತ್ತು ಮಾಪನಗಳನ್ನು ಪ್ರತಿಯೊಬ್ಬರೂ ತಂತಮ್ಮ ಪ್ರಯತ್ನಗಳಿಂದ, ವ್ಯವಸ್ಥೆಯ ನೆರವಿಲ್ಲದೆಯೇ ಅಭಿವೃದ್ಧಿಗೊಳಿಸಬಹುದು.

ವೈಯಕ್ತಿಕ ಸಂಬಂಧಗಳು: ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಅತ್ಯಂತ ಮಹತ್ವದ ಅಂಶ ಸಂಬಂಧಗಳು. ಇದು ಕೌಟುಂಬಿಕ, ವೃತ್ತಿಸಂಬಂಧಿ, ಸ್ನೇಹ, ಪರಿಚಯ ಯಾವುದಾದರೂ ಆಗಬಹುದು. ಸಂಬಂಧಗಳ ಸೂಕ್ಷ್ಮತೆಯನ್ನು ಗುರುತಿಸಿ, ಅದಕ್ಕೆ ತಕ್ಕಂತೆ ನಡೆದುಕೊಳ್ಳಬಲ್ಲ ಸಾಮರ್ಥ್ಯ ಇರುವವರು ತಂತಮ್ಮ ಜೀವನದ ಗುಣಮಟ್ಟವನ್ನು ಬಹುವಾಗಿ ಹೆಚ್ಚಿಸಬಲ್ಲರು. ತಮ್ಮ ಜೀವನದಲ್ಲಿ ಒಂದೇ ಒಂದು ಬದಲಾವಣೆಯನ್ನು ಮಾಡಿಕೊಳ್ಳಲು ಇಚ್ಛಿಸುವವರು ವೈಯಕ್ತಿಕ ಸಂಬಂಧಗಳನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂಬುದನ್ನು ಅಧ್ಯಯನಗಳು ಕಾಣಿಸಿವೆ. ಸಾಕಷ್ಟು ಏರಿರುವ ವೈಯಕ್ತಿಕ ಆದಾಯ,

> ನಮ್ಮ ಹಿರಿಯರ ಜೀವನ ನಮ್ಮಲ್ಲಿ ಬೆರಗು ಮೂಡಿಸುತ್ತದೆ. ಸಾಂಘಿಕ ಬದುಕಿಗೆ ಬಹಳ ಮಹತ್ವ ನೀಡಿದ ತಲೆಮಾರುಗಳು ನಮ್ಮ ದೇಶದ ಸಾಮಾಜಿಕ ಏಕತೆಗೆ ಕಾರಣವಾಗಿದ್ದವು.

ಬೇಕಬೇಕಾದ ವಸ್ತುಗಳು ಮನೆಬಾಗಿಲಿಗೆ ಬರುವ ಸೌಲಭ್ಯಗಳ ಇಂದಿನ ದಿನಗಳಲ್ಲಿ ‘ನನಗೆ ಬದುಕಲು ಯಾರ ಅವಶ್ಯಕತೆಯೂ ಇಲ್ಲ’ ಎನ್ನುವ ಹುಂಬತನ ಬೆಳೆಯುತ್ತಿದೆ. ಈ ಮನೋಭಾವ ದೀರ್ಘಕಾಲಿಕ ನೆಲೆಯಲ್ಲಿ ಅನೇಕ ಸಮಸ್ಯೆಗಳನ್ನು ತರುತ್ತದೆ. ಅವಲಂಬನೆಯ ಹೊರತಾಗಿಯೂ ಮಧುರವಾದ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವುದು ಜೀವನದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವ ಅತ್ಯಂತ ಸಮಂಜಸ ವಿಧಾನ.

ಕೆಲಸ ಮತ್ತು ವೃತ್ತಿ: ಕೆಲಸವಿಲ್ಲದ ಮಿದುಳು ಸೈತಾನನ ಕಾರ್ಯಾಗಾರ ಎನ್ನುವ ಮಾತಿದೆ! ಕೆಲಸವೆನ್ನುವುದು ಯಾಂತ್ರಿಕವಲ್ಲ; ಅದು ನಮ್ಮ ದೇಹ, ಮನಸ್ಸು, ಬುದ್ಧಿ ಮತ್ತು ಚಿಂತನೆಗಳನ್ನು ಏಕತ್ರಗೊಳಿಸುವ ಸಾಧನ. ಸಫಲವಾಗಿ ಮಾಡಿದ ಕೆಲಸ ಈ ನಾಲ್ಕೂ ವಿಭಾಗಗಳಿಗೆ ಸಮಾಧಾನ ನೀಡುತ್ತದೆ. ಇದರಿಂದ ಆರೋಗ್ಯ ಸುಧಾರಿಸಿ, ಜೀವನದ ಗುಣಮಟ್ಟ ವೃದ್ಧಿಸುತ್ತದೆ.

ಹಣಕಾಸು: ಜೀವನದಲ್ಲಿ ಹಣಕಾಸಿನ ಸ್ಥಿರತೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉತ್ತಮ ಗುಣಮಟ್ಟಕ್ಕೆ ಕಾರಣವಾಗುತ್ತದೆ. ಯಾವುದೇ ರೀತಿಯಿಂದ ಹಣ ಮಾಡುವ ಗೀಳು ಹಾನಿಕಾರಕವಾಗಬಲ್ಲದು. ಆದರೆ, ಮಾಡಿದ ಕೆಲಸಕ್ಕೆ ಪಡೆಯುವ ಸೂಕ್ತ ಸಂಭಾವನೆ ನೆಮ್ಮದಿಗೆ ಕಾರಣವಾಗುತ್ತದೆ. ಜೀವನದ ಅವಶ್ಯಕತೆಗಳನ್ನು ಪೂರೈಸುವ ಹಂತದವರೆಗೆ ಹಣ ಸಂಪಾದನೆ ಮಾಡುವುದು ಒಳ್ಳೆಯ ಬದುಕಿಗೆ ಆಧಾರ.

ಆರೋಗ್ಯ: ಸಕ್ಷಮವಾದ ದೈಹಿಕ ಮತ್ತು ಮಾನಸಿಕ ಆರೋಗ್ಯಗಳು ಸಂತೃಪ್ತ ಬದುಕಿಗೆ ಪ್ರಮುಖ ಒತ್ತಾಸೆಗಳು. ಒಳ್ಳೆಯ ಆರೋಗ್ಯ ಜೀವನದ ಗುಣಮಟ್ಟವನ್ನು ಬೆಳೆಸಿದರೆ, ಅನಾರೋಗ್ಯದ ಸ್ಥಿತಿ ಅದನ್ನು ಇಳಿಸಬಲ್ಲದು. ಹೀಗೆ, ಆರೋಗ್ಯಕ್ಕೂ, ಜೀವನದ ಗುಣಮಟ್ಟಕ್ಕೂ ನೇರವಾದ ಸಂಬಂಧವಿದೆ.

ವಿರಾಮ: ಜಡವಾಗಿ ಬಿದ್ದುಕೊಳ್ಳುವುದು ವಿರಾಮವಲ್ಲ! ದೇಹಕ್ಕೆ ಮತ್ತು ಮನಸ್ಸನ್ನು ನಿರಾಳಗೊಳಿಸುವ ಚಟುವಟಿಕೆಗಳು ವಿರಾಮ ಎನಿಸಿಕೊಳ್ಳುತ್ತವೆ. ಹಿತವೆನಿಸುವ ಹವ್ಯಾಸಗಳಲ್ಲಿ ತೊಡಗಿಕೊಳ್ಳುವುದು, ಸಂಗೀತ ಕೇಳುವುದು, ವಿಶೇಷ ಅಡುಗೆ ಮಾಡುವುದು, ಕುಟುಂಬದ ಸದಸ್ಯರ, ಸ್ನೇಹಿತರ ಜೊತೆಯಲ್ಲಿ ಯಾವುದಾದರೂ ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಳ್ಳುವುದು, ಮೊದಲಾದುವು ಜೀವನದ ಗುಣಮಟ್ಟವನ್ನು ಬೆಳೆಸಲು ಕಾರಣವಾಗುತ್ತವೆ.

ಮಾನಸಿಕ ನೆಮ್ಮದಿ: ಏಕಾಗ್ರತೆ, ಧ್ಯಾನ, ಪ್ರಾಣಾಯಾಮ, ವ್ಯಾಯಾಮ ಮೊದಲಾದುವುಗಳು ಮಾನಸಿಕ ನೆಮ್ಮದಿಗೆ, ಆತ್ಮಾವಲೋಕನಕ್ಕೆ, ಸ್ವ-ನಿಯಂತ್ರಣಗಳಿಗೆ, ತನ್ಮೂಲಕ ದೈಹಿಕ ಆರೋಗ್ಯಕ್ಕೆ ಮತ್ತು ಗುಣಮಟ್ಟದ ಜೀವನಕ್ಕೆ ರಹದಾರಿ.

ಆತ್ಮಗೌರವ: ಒಳ್ಳೆಯ ನಡವಳಿಕೆ, ಧನಾತ್ಮಕ ಮನೋಭಾವಗಳು, ಸಂತೃಪ್ತ ಜೀವನಶೈಲಿ ನೀಡುವ ಆತ್ಮಗೌರವದ ಭಾವಜೀವನದ ಗುಣಮಟ್ಟಕ್ಕೆ ಕಾರಣವಾಗುತ್ತದೆ. ಬೇರೆಲ್ಲವೂ ಇದ್ದೂ ಆತ್ಮಗೌರವದ ಭಾವ ಇಲ್ಲದಿದ್ದರೆ ಖಿನ್ನತೆಯೇ ಮೊದಲಾದ ಮಾನಸಿಕ ಅನಾರೋಗ್ಯಗಳಿಗೆ ತುತ್ತಾಗಬಹುದು ಎಂದು ಹಲವಾರು ಅಧ್ಯಯನಗಳು ತೋರಿವೆ.

ಗತಿಸಿದ ಘಟನೆಗಳ ಬಗೆಗಿನ ಮನೋಧರ್ಮ: ಜೀವನವೆನ್ನುವುದು ಸರಳರೇಖೆಯಲ್ಲ. ಅದು ಹಲವಾರು ಬೆಟ್ಟ-ಇಳಿಜಾರುಗಳ ಮೂಲಕ ಕ್ರಮಿಸುವ ಪಯಣ. ಜೀವನದ ವಾಸ್ತವಗಳ ಜೊತೆಗೆ ಎಷ್ಟು ಬೇಗ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ ಎಂಬುದು ನಮ್ಮ ಸ್ತಿಮಿತವನ್ನು ನಿರ್ಧರಿಸುತ್ತದೆ. ಸಂಗಾತಿಯ ಅಗಲಿಕೆ, ಕೆಲಸ ಕಳೆದುಕೊಳ್ಳುವುದು, ಆರ್ಥಿಕ ನಷ್ಟ ಮೊದಲಾದ ಸಂದರ್ಭಗಳಲ್ಲಿ ಮಾನಸಿಕ ಸಂತುಲನ ಉಳಿಸಿಕೊಳ್ಳುವವರ ಜೀವನದ ಗುಣಮಟ್ಟ ಅಧಿಕವಾಗಿರುತ್ತದೆ ಎಂದು ಮಾನಸಿಕ ತಜ್ಞರ ಅಭಿಪ್ರಾಯ.

ಮಾನಸಿಕತೆ: ಸಂತಸ ಎನ್ನುವುದು ಮಾನಸಿಕ ಸ್ಥಿತಿ. ಎಲ್ಲವೂ ಇದ್ದೂ ಏನೂ ಇಲ್ಲವೆಂದು ಕೊರಗುವವರಿಗಿಂತ ಇದ್ದ ಸ್ವಲ್ಪದಲ್ಲೇ ನೆಮ್ಮದಿ ಕಾಣುವವರ ಜೀವನದ ಗುಣಮಟ್ಟ ಹೆಚ್ಚು. ಜೀವನಪ್ರೀತಿ ಬೆಳೆಸುವ ಮಾನಸಿಕತೆಗಳು ಬದುಕಿನ ಸ್ತರವನ್ನು ಏರಿಸುತ್ತವೆ.

ಜೀವನನಿರ್ವಹಣೆಯ ಕೌಶಲಗಳು: ಬದುಕು ಸಾಗಿದಂತೆಲ್ಲಾ ಅನಿವಾರ್ಯವಾಗುವ ಬದಲಾವಣೆಗಳಿಗೆ ಯಾವ ರೀತಿ ಸ್ಪಂದಿಸುತ್ತಾ ಜೀವನವನ್ನು ಸುಖಮಯವಾಗಿಸುತ್ತೇವೆ ಎಂಬುದು ಗುಣಮಟ್ಟದ ಮಾಪನ. ಬದುಕಿನ ಗಮ್ಯಗಳ ನಿರ್ಧಾರ, ಅವುಗಳ ಸಾಧನೆ, ವೃತ್ತಿಜೀವನದ ಹೊಸತುಗಳ ಕಲಿಕೆ, ಪ್ರಪಂಚದ ನಾವೀನ್ಯಗಳಿಗೆ ತೆರೆದುಕೊಳ್ಳುವಿಕೆಗಳು ಸಂತಸದಾಯಕ ಅನುಭವಗಳು.

ಅಧ್ಯಯನಗಳ ಮೂಲಕ ಕಂಡುಕೊಂಡ ಈ ಪಟ್ಟಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ತಲೆತಲಾಂತರಗಳಿಂದ ಇದರಂತೆಯೇ ಬಾಳಿ ಬದುಕಿದ ನಮ್ಮ ಹಿರಿಯರ ಜೀವನ ನಮ್ಮಲ್ಲಿ ಬೆರಗು ಮೂಡಿಸುತ್ತದೆ. ಸಾಂಘಿಕ ಬದುಕಿಗೆ ಬಹಳ ಮಹತ್ವ ನೀಡಿದ ತಲೆಮಾರುಗಳು ನಮ್ಮ ದೇಶದ ಸಾಮಾಜಿಕ ಏಕತೆಗೆ ಕಾರಣವಾಗಿದ್ದವು. ಆಧುನಿಕ ಕಾಲದಲ್ಲೂ ಇದು ಜೀವನದ ಗುಣಮಟ್ಟವನ್ನು ಎತ್ತರಿಸಬಲ್ಲವು ಎಂದು ಸಿದ್ಧವಾಗಿದೆ. ❖

ದೇಹದಲ್ಲಿದೆ ಆರೋಗ್ಯದ ಅಲಾರಾಂ!

ಡಾ. ಕೆ.ಎಸ್. ಪವಿತ್ರ

ಬೇಸಿಗೆಯ ನಿದ್ರೆ ನಡೆಯುತ್ತಿದೆ. ಮಧ್ಯಾಹ್ನ ಮಲಗುವಂತೆ ಮಾಡುವ, ಕಣ್ಣುರೆಪ್ಪೆಗಳು ಅಂಟುಕೊಂಡಿವೆಯೇನೋ ಎಂಬಂತೆ ಭಾಸವಾಗುವ ನಿದ್ರೆ. ಅದೇ ಬೆಳಿಗ್ಗೆ ಏಳುವುದು ಈಗ ಚಳಿಗಾಲದಲ್ಲಿ ಏಳುವಷ್ಟು ಕಷ್ಟವಾದಂತಲ್ಲ. ಮಳೆ ಬರುವ ವಾತಾವರಣ, ಮೋಡ ಕವಿದಿದೆ, ಮನಸ್ಸಿಗೆ ಏಕೆ ನಿರುತ್ಸಾಹ?! ಹೊದ್ದು ಮಲಗಿಬಿಡೋಣ, ತುಂಬಾ ಕ್ರಿಯಾಶೀಲರಾದವರಿಗೂ ಹೆಚ್ಚೆಂದರೆ ಬಿಸಿ ಬಿಸಿ ಕಾಫಿ ಕುಡಿಯುತ್ತಾ, ಬೆಚ್ಚಗೆ ಹೊದ್ದು ಪುಸ್ತಕ/ ಮೊಬೈಲ್ ನೋಡುವುದೇ ಸರಿ ಎಂಬಂತೆ. ಇವೆಲ್ಲಕ್ಕೂ ಕಾರಣ ವಾತಾವರಣವೇ, ನಮ್ಮ ಮನಸ್ಸು-ಮಿದುಳುಗಳೇ?

ವಾತಾವರಣಕ್ಕೂ, ಮಿದುಳಿಗೂ ಸಂಬಂಧವಿದೆ ಎಂದರೆ ಅಚ್ಚರಿಯೆನಿಸಬಹುದು. ಆದರೆ ವಿಜ್ಞಾನ ಇದನ್ನು ದೃಢಪಡಿಸಿದೆ. ಅಷ್ಟೇ ಅಲ್ಲ, ನಿದ್ರೆ ಆರೋಗ್ಯಗಳಿಗೆ ಈ ನಂಟು ಸರಿಯಾಗಿ ಕೆಲಸ ಮಾಡುವುದು ಬಹು ಮುಖ್ಯ ಎನ್ನುವುದನ್ನೂ ನಿರೂಪಿಸಿದೆ.

ನಮ್ಮ ಮಿದುಳಿನಲ್ಲೊಂದು ಅಲಾರಾಂ ಗಡಿಯಾರವಿದೆ! ಅದೇ ಜೈವಿಕ ಗಡಿಯಾರ. ಮಿದುಳಿನ ತಳಭಾಗದಲ್ಲಿರುವ ಹೈಪೋಥ್ಯಾಲಮಸ್‌ನಲ್ಲಿ ಸೂಪ್ರಾಕೈಯಾಸ್ಮ್ಯಾಟಿಕ್ ನ್ಯೂಕ್ಲಿಯಸ್ ಎಂಬ ನರಕೋಶಗಳ ಸಮೂಹವೊಂದು ಅಡಗಿ ಕುಳಿತಿದೆ. ಪ್ರತಿದಿನ ಬೆಳಿಗ್ಗೆ ಸೂರ್ಯನ ಬೆಳಕು ಅಕ್ಷಿಪಟಲದ ಮೇಲೆ ಬಿದ್ದಾಕ್ಷಣ ವಿಶೇಷ ಸಂಕೇತಗಳು ಸೂಪ್ರಾಕೈಯಾಸ್ಮ್ಯಾಟಿಕ್ ನ್ಯೂಕ್ಲಿಯಸ್‌ನ್ನು ತಲುಪುತ್ತವೆ. ಅದು ಪೈನಿಯಲ್ ಗ್ರಂಥಿಯನ್ನು ಪ್ರಚೋದಿಸಿ, ‘ಮೆಲಟೋನಿನ್’ ಎಂಬ ಹಾರ್ಮೋನನ್ನು ಸ್ರವಿಸುವಂತೆ ಮಾಡುತ್ತದೆ. ಸಂಜೆಯಾದಂತೆ ಮೆಲಟೋನಿನ್‌ನ ಪ್ರಮಾಣ ಹೆಚ್ಚುತ್ತದೆ. ಮೆಲಟೋನಿನ್‌ನ ಪರಿಣಾಮವೇ ದೇಹದ ತಾಪಮಾನ ಕಡಿಮೆಯಾಗಿ, ನಿದ್ರೆ ಮಾಡುವುದನ್ನು ಪ್ರೇರೇಪಿಸುತ್ತದೆ.

ಸೂರ್ಯನ ಬೆಳಕು-ಹೊರಗಿನ ವಾತಾವರಣಗಳೆಲ್ಲವೂ ನಮ್ಮ ಮಿದುಳಿನ ಮೇಲೆ ವಿವಿಧ ಪರಿಣಾಮಗಳನ್ನು ಉಂಟುಮಾಡುತ್ತವೆ. ಅದರೊಂದಿಗೆ ಪ್ರಕೃತಿಯೇ ಜೀವರಾಶಿಗೊಂದು ಲಯವನ್ನು ತಾನೇ ನಿರ್ದಿಷ್ಟವಾಗಿರಿಸಿದೆ. ಮಾನವ ದೇಹದಲ್ಲಿ ನಿದ್ರೆ-ಎಚ್ಚರಗಳ ಲಯ ಹೊರಗಿನ ಸಂಪರ್ಕವಿಲ್ಲದೆಯೂ ಸರಿಯಾಗಿಯೇ ನಡೆಯುತ್ತದೆ ಎಂದು ಅಧ್ಯಯನಗಳು ತೋರಿಸಿವೆ. ಈ ಲಯವನ್ನೇ ‘ಸರ್ಕಾಡಿಯನ್ ರಿದಂ’ ಎಂದು ವಿಜ್ಞಾನ ಗುರುತಿಸುತ್ತದೆ. ದೇಹದ ಪ್ರತಿಯೊಂದು ಅಂಗ, ಜೀವಕೋಶಗಳಲ್ಲಿ ಮಿಲಯನ್‌ಗಟ್ಟಲೆ ಚಿಕ್ಕ ಚಿಕ್ಕ ‘ಟೈಮ್ ಮೆಶೀನ್’ಗಳು ಇವೆ. ನಿರ್ದಿಷ್ಟ ಪ್ರೊಟೀನ್ ಕಣಗಳಿಂದ ಇವು ಮಾಡಲ್ಪಟ್ಟಿವೆ. ಮಿದುಳಿನಲ್ಲಿರುವ ‘ಮಾಸ್ಟರ್ ಗಡಿಯಾರ’ ಇವೆಲ್ಲಕ್ಕೂ ಆಗಾಗ ‘ಕೀ’ ಕೊಡುತ್ತಿರುತ್ತದೆ. ಹಾಗಾಗಿಯೇ ನಮ್ಮ ದೇಹದಲ್ಲಿ ಆಗಾಗ ನಾವು ಅನುಭವಿಸುವ ಹಸಿವು, ನಿದ್ರೆ, ಏಕಾಗ್ರತೆಗಳು ಒಂದೇ ರೀತಿಯಾಗಿರದೆ ದಿನಪೂರ್ತಿ ಏರಿಳಿತಗಳನ್ನು ಕಾಣುತ್ತವೆ.

‘ಜೀವಲಯ’ವನ್ನು ಅರ್ಥ ಮಾಡಿಕೊಳ್ಳುವುದು, ಅದನ್ನು ಮನೆಯ ಗಡಿಯಾರವನ್ನು ‘ಸರಿ’ಯಾಗಿಡುವಂತೆ ‘ಸೆಟ್’ ಮಾಡಿಟ್ಟುಕೊಳ್ಳುವುದು, ದೈಹಿಕ-ಮಾನಸಿಕ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯಕ. ಇದರ ಬಹು ಮುಖ್ಯ ಉದಾಹರಣೆಗಳೆಂದರೆ ನಿದ್ರೆಯ ಅಭ್ಯಾಸ ಮತ್ತು ಆಹಾರ ಸೇವಿಸುವ ಕ್ರಮ. ಹದಿಹರೆಯದ ಮಕ್ಕಳಲ್ಲಿ ಯುವಕ-ಯುವತಿಯರಲ್ಲಿ ಸಾಮಾನ್ಯವಾಗಿ ಗಮನಿಸುವಂಥ ಅಭ್ಯಾಸಗಳು ಎರಡು. ಮೊದಲನೆಯದು ಮಲಗುವಾಗ, ಹಾಸಿಗೆಯ ಮೇಲೆ ಅರ್ಧ ಮಲಗಿ, ಬಹು ಕಾಲ ಮೊಬೈಲ್ ಹಿಡಿದು ನೋಡುವುದು. ಎರಡನೆಯದು ರಾತ್ರಿ ತಡವಾಗಿ ಮಲಗಿ, ಬೆಳಿಗ್ಗೆ ತಡವಾಗಿ ಏಳುವುದು. ಇದರಿಂದ ನಿದ್ರಾಹೀನತೆಯಷ್ಟೇ ಅಲ್ಲ, ವಿವಿಧ ಆರೋಗ್ಯದ ಸಮಸ್ಯೆಗಳು ಮುಂದೆ ಕಟ್ಟಿಟ್ಟ ಬುತ್ತಿ. ಈ ಎರಡೂ ಅಭ್ಯಾಸಗಳು ನೇರವಾಗಿ ಜೀವಲಯದ ತಾಳ ತಪ್ಪಿಸುತ್ತವೆ.

ಮಿದುಳಿನ ಮಾಸ್ಟರ್ ಗಡಿಯಾರ ಬಹು ಸೂಕ್ಷ್ಮವಾಗಿ ಸ್ಪಂದಿಸುವುದು ಯಾವುದೇ ರೀತಿಯ ಬೆಳಕಿಗೆ. ಹಾಗಾಗಿ ಮೊಬೈಲ್ ಬೆಳಕು, ರಾತ್ರಿ ಎಚ್ಚರವಿರುವುದು, ಬೆಳಿಗ್ಗೆ ಮಲಗಿರುವುದು ಅದಕ್ಕೆ ಗೊಂದಲ ಉಂಟು ಮಾಡುತ್ತದೆ. ಮಾಸ್ಟರ್ ಗಡಿಯಾರ ತಾಳ ತಪ್ಪಿದರೆ, ದೇಹದ ತುಂಬ ಇರುವ ಮಿಲಿಯನ್‌ಗಟ್ಟಲೆ ಮಿನಿ ಗಡಿಯಾರಗಳೂ ದಾರಿ ತಪ್ಪುತ್ತವೆ. ಬೆಳವಣಿಗೆ-ಮುಟ್ಟು-ಹೃದಯಸಂಬಂಧಿ ಪ್ರಕ್ರಿಯೆಗಳು-ಹಸಿವು – ಈ ಎಲ್ಲವೂ ಏರುಪೇರಾಗುತ್ತವೆ. ಕೊನೆಗೆ ಯುವಜನರು ಬಹುವಾಗಿ ತಲೆಕೆಡಿಸಿಕೊಳ್ಳುವ ದೇಹದ ಸೌಂದರ್ಯ ಮತ್ತು ತೂಕಕ್ಕೂ ಜೀವಲಯಕ್ಕೂ ನಿಕಟ ಸಂಬಂಧವಿದೆ. ಯುವಜನರಲ್ಲಿ ಆಹಾರ ಸೇವಿಸುವ ಕ್ರಮವೂ ಜೀವಲಯದ ವಿರುದ್ಧವಾಗಿರಬಹುದು. ಬೆಳಿಗ್ಗೆ ತಡವಾಗಿ ಏಳುವ ಕಾರಣ ತಿಂಡಿ ತಿನ್ನದಿರುವುದು, ಸಮಯಕ್ಕೆ ಸರಿಯಾಗಿ ಊಟ ಮಾಡದಿರುವುದು, ನಿದ್ರೆಯನ್ನು ಹಾಳುಗೆಡುವ ಅತಿ ಮಸಾಲೆ-ಎಣ್ಣೆಯುಕ್ತ ಆಹಾರಗಳು ಸಮಸ್ಯೆಗಳನ್ನು ಹೆಚ್ಚಿಸಬಲ್ಲವು. ಹಾಗಾಗಿ ಜೀವಲಯವನ್ನು ತಾಳ ತಪ್ಪದಂತೆ ಕಾಯ್ದುಕೊಳ್ಳಲು ಕೆಲವು ಸರಳ ಸೂತ್ರಗಳನ್ನು ಪಾಲಿಸುವುದು ಸೂಕ್ತ.

ಸೂರ್ಯನೊಡನೆ ಸ್ನೇಹ: ಸಹಜ ಬೆಳಕನ್ನು ಪ್ರತಿದಿನ ಬೆಳಿಗ್ಗೆ ಎದ್ದು ಅನುಭವಿಸುವುದು ಜೀವಲಯ ಕಾಯ್ದುಕೊಳ್ಳುವ ಒಂದು ಪ್ರಬಲ ಸಾಧನ. ನಿಯಮಿತವಾದ ನಿದ್ರಾ ದಿನಚರಿಯನ್ನು ರೂಢಿಸಿಕೊಳ್ಳುವುದು - ರಾತ್ರಿ 8 ಗಂಟೆಗಳ ಕಡ್ಡಾಯ ನಿದ್ರೆ. ಯಾವುದೇ ರೀತಿಯ ಒತ್ತಡಗಳ ನಡುವೆಯೂ, ಅವೆಲ್ಲವನ್ನೂ ಬದಿಗಿಟ್ಟು ಸರಿಯಾದ ಸಮಯಕ್ಕೆ ನಿದ್ರೆ ಮಾಡುವ ದಿಟ್ಟತನ ಬೆಳೆಸಿಕೊಳ್ಳಬೇಕು. ಇದು ಜೀವಲಯವನ್ನು ಸರಿಯಾಗಿ ನಡೆಯುವಂತೆ ಮಾಡಿ, ಜೀವಲಯವು ನಿದ್ರೆಯನ್ನು ಪ್ರಚೋದಿಸುವುದರಲ್ಲಿ ಯಶಸ್ವಿಯಾಗುತ್ತದೆ. ಹೀಗೆ ನಿರಾಳವಾದ, ಆಳವಾದ ನಿದ್ರೆ ನಿಮ್ಮದಾಗುತ್ತದೆ.

ಕನಿಷ್ಠ 30 ನಿಮಿಷಗಳ ವ್ಯಾಯಾಮ ಪ್ರತಿನಿತ್ಯ ಮಾಸ್ಟರ್ ಗಡಿಯಾರಕ್ಕೆ ಕೀಲಿಗೆ ಎಣ್ಣೆ ಹಾಕಿದ ರೀತಿ ಸುಗಮವಾಗಿ ನಡೆಯುವಂತೆ ಮಾಡುತ್ತದೆ. ಹಾಸಿಗೆಗೆ ಮಲಗಲು ಹೋಗುವ ಮುನ್ನ ದೀಪಗಳನ್ನು ಆರಿಸುವುದು - ಇಂದಿನ ದಿನಗಳಲ್ಲಿ ವಿಶೇಷವಾಗಿ ‘ದೀಪ’ವೆಂದರೆ ಮೊಬೈಲ್ / ಕಂಪ್ಯೂಟರ್ ತೆರೆಗಳು. ಇವುಗಳನ್ನು ಹಾಸಿಗೆಯಿಂದ ಸಾಧ್ಯವಾದಷ್ಟು ದೂರ, ಕಡ್ಡಾಯವಾಗಿ ಮಲಗುವ ಕನಿಷ್ಠ ಅರ್ಧ ಗಂಟೆ ಮೊದಲು ಆರಿಸಿ ಬಿಡಿ.

ಮಧ್ಯಾಹ್ನದ ನಿದ್ರೆಯ ಅಭ್ಯಾಸವನ್ನು ಆದಷ್ಟು ಕಡಿಮೆಯಾಗಿಸುವುದು. 20 ನಿಮಿಷಗಳ ‘ಪವರ್ ನ್ಯಾಪ್’ - ‘ಶಕ್ತಿಯ ಕಿರುನಿದ್ರೆ’ಯನ್ನು ಮಾಡಿ ಪುನಶ್ಚೇತನಗೊಳ್ಳುವ ಅಭ್ಯಾಸ ನಿಮ್ಮದಾದರೆ ಮಾತ್ರ ತೊಂದರೆಯಿಲ್ಲ. ಅದಕ್ಕಿಂತ ಹೆಚ್ಚು ಮಧ್ಯಾಹ್ನದ ನಿದ್ರಾಪ್ರಿಯರು ನೀವಾದರೆ ಎಚ್ಚರ, ಎಚ್ಚರ!

ಜೀವಲಯವನ್ನು ಈ ಸರಳ ಅಭ್ಯಾಸಗಳ ಮೂಲಕ ಕಾಪಾಡಿಕೊಳ್ಳುವುದು ಆರೋಗ್ಯದ ಆನಂದಕ್ಕೆ ಸುಲಭ ಹಾದಿ ಎಂದು ನೆನಪಿಡಿ. ❖

ನಮ್ಮದೇ ದೇಹದ ಬಗ್ಗೆ ನಾಚಿಕೆಯೇಕೆ?

ಲಾವಣ್ಯಗೌರಿ ವೆಂಕಟೇಶ್

‘ದೇಹೋ ದೇವಾಲಯ ಪ್ರೋಕ್ತೋ ಜೀವೋ ದೇವ ಸನಾತನಃ’- ಅಂದರೆ ಈ ದೇಹವೆಂಬ ದೇವಾಲಯದಲ್ಲಿ ಜೀವಾತ್ಮನ ರೂಪದಲ್ಲಿ ಭಗವಂತ ನೆಲೆಸಿದ್ದಾನೆ ಎಂದು. ಅಂತಿದ್ದ ಮೇಲೆ ಅದನ್ನು ಜರಿಯುವುದೇಕೆ? ಎಷ್ಟೇ ಕರಾರುವಕ್ಕಾದ ದೇಹವಿದ್ದರೂ, ಬಹಳಷ್ಟು ಮಂದಿಗೆ ಅದನ್ನು ಇನ್ನೂ ಸರಿ ಮಾಡುವ ಆಸೆ. ಅನೇಕರಿಗೆ ತಮ್ಮ ದೇಹದ ಬಗ್ಗೆ ಒಂದಲ್ಲಾ ಒಂದು ಕೊರಗು ಇದ್ದೇ ಇರುತ್ತದೆ. ಇದಕ್ಕೆ ಪೂರಕವಾಗಿ ನಮ್ಮ ಸುತ್ತಮುತ್ತಲಿರುವವರ ಕುಮ್ಮಕ್ಕು ಬೇರೆ. ಬೇರೆಯವರ ಮಾತಿನಿಂದಲೇ ಬಹಳಷ್ಟು ಜನರು ತಮ್ಮದೇ ದೇಹದ ಮೇಲೆ ಜಿಗುಪ್ಸೆಯನ್ನು ಹೊಂದಿರುತ್ತಾರೆ. ಪ್ರತಿಯೊಬ್ಬರಿಗೂ ಆತ್ಮಾಭಿಮಾನದಂತೆ ದೇಹಾಭಿಮಾನವಿರಬೇಕು. ಈ ದೇಹವೆಂಬ ದೇಗುಲ ಹೇಗೇ ಇದ್ದರೂ ಅದರ ಬಗ್ಗೆ ಹೆಮ್ಮೆ ಇರಬೇಕು. ನಮ್ಮ ದೇಹದ ಕಾಳಜಿ ನಮ್ಮ ಕರ್ತವ್ಯವಲ್ಲವೇ?

ಹಿಂದೆಲ್ಲಾ ರೂಪದರ್ಶಿಯರು, ಸಿನಿಮಾ ನಟ-ನಟಿಯರು ಮಾತ್ರ ದೇಹದ ಬಗ್ಗೆ ವಹಿಸುತ್ತಿದ್ದ ಕಾಳಜಿ ಈಗ ಸಾಮಾನ್ಯ ಜನರಿಂದ ಹಿಡಿದು ಸಣ್ಣ ಮಕ್ಕಳವರೆಗೂ ಹಬ್ಬಿದೆ. ನಮ್ಮ ಪಕ್ಕದ ಮನೆಯ 14ರ ಕಿಶೋರಿ ದೇಹದ ತೂಕವನ್ನು ಕಡಿಮೆ ಮಾಡಲು ಜಿಮ್‌ಗೆ ಹೋಗುತ್ತಾಳೆ. ಇದಕ್ಕೆ ಆಕೆಯ ಪೋಷಕರ ಸಹಮತಿ ಇದೆ ಎನ್ನುವುದು ಮಾತ್ರ ವಿಷಾದನೀಯ! ದೇಹದ ಆಕಾರ, ಬಣ್ಣ, ಗಾತ್ರ ಯಾವುದನ್ನೂ ನಾವು ನಿರ್ಧರಿಸಲಾಗುವುದಿಲ್ಲ. ಆದರೆ ದೇಹವನ್ನು ಆರೋಗ್ಯಕರವಾಗಿಟ್ಟುಕೊಳ್ಳುವ ನಿರ್ಣಯ ಮಾತ್ರ ನಮ್ಮದೇ ಆಗಿರುತ್ತದೆ. ಕೆಲವೊಮ್ಮೆ ದೇಹದಲ್ಲಿ ಆಗುವ ಹಾರ್ಮೋನ್‌ನ ಬದಲಾವಣೆಯಿಂದಲೂ ದೇಹದ ಗಾತ್ರದಲ್ಲಿ ವ್ಯತ್ಯಾಸಗಳಾಗುತ್ತವೆ. ಅನುವಂಶೀಯತೆ, ಅಂದರೆ ಜೀನ್ಸ್ ಸಹ ನಮ್ಮ ದೇಹದ ಸ್ಥಿತಿ–ಗತಿಗಳ ಮೇಲೆ ಪರಿಣಾಮ ಬೀರುತ್ತದೆ. ಹೀಗಿದ್ದ ಮೇಲೆ ಕಾರಣ ತಿಳಿಯದೆ ದೇಹವನ್ನು ದಂಡಿಸುವುದು ಎಷ್ಟರಮಟ್ಟಿಗೆ ಸರಿ? ಹಾಗಾದರೆ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ?

ದಪ್ಪ, ಸಣ್ಣ, ಎತ್ತರ, ಕುಳ್ಳು, ಬಿಳಿ, ಕಪ್ಪು – ಹೀಗೆ ಏನಾದರೊಂದು ವ್ಯಥೆ ಅನೇಕ ಜನರನ್ನು ಕಾಡುತ್ತಲೇ ಇರುತ್ತದೆ. ಪ್ರತಿಯೊಬ್ಬರ ಬದುಕೂ ನಿಂತ ನೀರಲ್ಲ, ನಿರಂತರವಾಗಿ ಹರಿಯುವ ನದಿಯಂತೆ. ಈ ಪಯಣದಲ್ಲಿ ಅನೇಕ ಅಡೆತಡೆಗಳು ಬರುತ್ತಿರುತ್ತವೆ. ಅದನ್ನು ದಾಟಿ ಅಥವಾ ಕೆಲವೊಮ್ಮೆ ಉಪೇಕ್ಷಿಸಿ ಮುಂದೆ ಹೋಗುವುದೇ ಜೀವನ. ದಿನಗಳೆದಂತೆ ದೇಹದಲ್ಲಿ ಬದಲಾವಣೆ ಸಹಜ. ಹುಟ್ಟಿದ ದಿನದಿಂದ ಸಾಯುವವರೆಗೂ ದೇಹದಲ್ಲಿ ಬದಲಾವಣೆ ನಿರಂತರ. ಅದು ಪ್ರಕೃತಿಯ ನಿಯಮ ಕೂಡ! ನಮ್ಮ ಬಗ್ಗೆ ಹಾಗೂ ನಮ್ಮ ದೇಹದ ಬಗ್ಗೆ ನಮಗೆ ಮೊದಲು ಗೌರವವಿರಬೇಕು. ಬೇರೆಯವರ ಟೀಕೆಗೆ ಕೊನೆ ಮೊದಲೆಂಬುದಿಲ್ಲ. ಜಗತ್ತಿನಲ್ಲಿ ಯಾರನ್ನೂ ಯಾವುದರಿಂದಲೂ ತೃಪ್ತಿ ಪಡಿಸಲು ಸಾಧ್ಯವಿಲ್ಲ. ಅಂದ ಮೇಲೆ ಯಾರದೋ ಮಾತಿಗಾಗಿ ನಮ್ಮ ದೇಹದ ಬಗ್ಗೆ ನಾವೇ ನಾಚಿಕೆಪಟ್ಟುಕೊಳ್ಳುವುದು ನ್ಯಾಯವೇ? ನಮ್ಮ ದೇಹ ಹಾಗೂ ಮನಸ್ಸನ್ನು ಆರೋಗ್ಯವಾಗಿಟ್ಟುಕೊಳ್ಳುವುದು ಮಾತ್ರ ನಮ್ಮ ಕರ್ತವ್ಯ. ‘ಜಂಕ್ ಫುಡ್’ ತಿನ್ನದೆ, ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ನಮ್ಮ ದೇಹ ಹಾಗೂ ಮನಸ್ಸು ಎರಡೂ ಕ್ರಿಯಾತ್ಮಕವಾಗಿ ಇರುತ್ತದೆ. ಸಕ್ರಿಯ ಕಾರ್ಯಶೀಲತೆಗಾಗಿ, ಚಟುವಟಿಕೆಯಿಂದಿರಲು ವ್ಯಾಯಾಮ ಅಗತ್ಯ. ಆದರೆ ನಮ್ಮ ದೇಹ ಹೇಗಿದೆಯೋ ಹಾಗೆ ಅದನ್ನು ಒಪ್ಪಿಕೊಳ್ಳಬೇಕು. ಅದಕ್ಕೆ ಮಾನಸಿಕ ಸ್ಥೈರ್ಯ ಬೇಕು. ಮೊದಲು ಮನಸ್ಸಿನ ‘ಫಿಟ್‌ನೆಸ್’ ಬಗ್ಗೆ ಗಮನ ಕೊಡುವುದು ಬಹಳ ಮುಖ್ಯ. ಮನಸ್ಸು ಸ್ಥಿರವಾಗಿ, ದೃಢವಾಗಿದ್ದರೆ, ಅದು ಬೇರೆಯವರ ಟೀಕೆಗೆ ಕಿವಿಗೊಡುವುದಿಲ್ಲ.

ಸೌಂದರ್ಯವೆನ್ನುವುದು ದೇಹದ ಆಕಾರ ಗಾತ್ರದಿಂದ ಬರುವುದಿಲ್ಲ. ನಿಜವಾದ ಸೌಂದರ್ಯವಿರುವುದು ಪ್ರತಿಯೊಬ್ಬರ ಮನಸ್ಸಿನಲ್ಲಿ. ಮನಸ್ಸು ನಿರ್ಮಲವಾಗಿ, ಪ್ರೌಢವಾಗಿ, ವಿಶಾಲವಾಗಿ, ಶಾಂತವಾಗಿದ್ದರೆ ದೇಹದ ಮೇಲೆ ಅದರ ಪರಿಣಾಮವನ್ನು ತೋರುತ್ತದೆ. ಮನಸ್ಸಿನ ಆರೋಗ್ಯದ ಕಡೆ ಗಮನ ಕೊಟ್ಟರೆ ದೇಹಾರೋಗ್ಯ ತಾನಾಗೇ ಸುಧಾರಿಸುತ್ತದೆ. ‘ಪರ್ಫೆಕ್ಟ್ ಬಾಡಿ’(ಕರಾರುವಕ್ಕಾದ ದೇಹ)ಯ ಕಲ್ಪನೆಗೆ ಸಿಲುಕಿ ಮಾನಸಿಕ ಆರೋಗ್ಯವನ್ನು ಹಾಳು ಮಾಡಿಕೊಳ್ಳಬಾರದು. ಪ್ರತಿಯೊಬ್ಬರೂ ನಮ್ಮನ್ನು ನಾವಿರುವ ಹಾಗೇ ಒಪ್ಪಿಕೊಂಡು ಗೌರವಿಸಿ, ಪ್ರೀತಿಸಿದಾಗಲೇ, ಮತ್ತೊಬ್ಬರನ್ನು ಗೌರವಿಸಲು ಹಾಗೂ ಪ್ರೀತಿಸಲು ಸಾಧ್ಯ! ದೇಹ ಮತ್ತು ಮನಸ್ಸಿನ ‘ಫಿಟ್‌ನೆಸ್’ಗಾಗಿ ನಗುವೆಂಬ ಆಭರಣವೊಂದನ್ನು ಧರಿಸಿದರೆ ಸಾಕು! ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಮಗೆ ಗೊತ್ತಿರುವುದು ಒಂದು ಹನಿಯಷ್ಟಾದರೆ,
ಗೊತ್ತಿಲ್ಲದೇ ಇರುವುದು ಸಾಗರದಷ್ಟು.

–ಐಸಾಕ್ ನ್ಯೂಟನ್

ಜಿಎಸ್‌ಟಿ ಕುರಿತ 'ಸುಪ್ರೀಂ' ತೀರ್ಪು: ಒಕ್ಕೂಟ ತತ್ವದ ಪುನರುಚ್ಚಾರ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ ಶಿಫಾರಸುಗಳು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಪಾಲಿಗೆ ಕಡ್ಡಾಯವಾಗಿ ಪಾಲಿಸಬೇಕಾದವು ಅಲ್ಲ, ಆ ಶಿಫಾರಸುಗಳು 'ಮನವೊಲಿಕೆಯ ಸ್ವರೂಪ'ದವು ಮಾತ್ರ ಎಂದು ಸುಪ್ರೀಂ ಕೋರ್ಟ್ ಕಳೆದ ವಾರ ನೀಡಿರುವ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. ಇದು, ನಮ್ಮ ಸಂವಿಧಾನದ ಕೇಂದ್ರ ಬಿಂದುವಿನಲ್ಲಿ ಇರುವ ಒಕ್ಕೂಟ ವ್ಯವಸ್ಥೆಯ ತತ್ವಗಳನ್ನು ಗಟ್ಟಿ ದನಿಯಲ್ಲಿ ಹೇಳಿದಂತೆ ಇದೆ. ಸಂವಿಧಾನದ 246(ಎ) ಹಾಗೂ 279ನೇ ವಿಧಿಗಳಲ್ಲಿ ಈಗಾಗಲೇ ಹೇಳಿರುವ ಮಾತುಗಳನ್ನು ಈ ತೀರ್ಪು ಮತ್ತೊಮ್ಮೆ ಹೇಳಿದೆ, ಅದನ್ನು ಇನ್ನಷ್ಟು ಸ್ಪಷ್ಟಪಡಿಸಿದೆ. 'ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ವಿಧಿಸುವ ಸರಕು ಮತ್ತು ಸೇವಾ ತೆರಿಗೆ ವಿಚಾರದಲ್ಲಿ ಕಾನೂನು ರೂಪಿಸಲು ಪ್ರತೀ ರಾಜ್ಯದ ಶಾಸನಸಭೆಗೆ ಅಧಿಕಾರ ಇದೆ' ಎಂದು 246(ಎ) ವಿಧಿ ಹೇಳುತ್ತದೆ. ಜಿಎಸ್‌ಟಿ ಮಂಡಳಿಯ ರಚನೆ ವಿಚಾರವಾಗಿ ಪ್ರಕ್ರಿಯೆಗಳನ್ನು, ಮಂಡಳಿಯಲ್ಲಿ ಯಾರಿರಬೇಕು ಎಂಬುದನ್ನು, ಮಂಡಳಿಯ ಅಧಿಕಾರ ಹಾಗೂ ಜವಾಬ್ದಾರಿಗಳನ್ನು 279ನೇ ವಿಧಿಯು ಹೇಳುತ್ತದೆ. ಜಿಎಸ್‌ಟಿ ಮಂಡಳಿಯು ತೆರಿಗೆಯ ವಿವಿಧ ಆಯಾಮಗಳ ವಿಚಾರವಾಗಿ 'ಕೇಂದ್ರ ಹಾಗೂ ರಾಜ್ಯಗಳಿಗೆ ಶಿಫಾರಸುಗಳನ್ನು ಮಾಡಬೇಕು' ಎಂದು ಈ ವಿಧಿಯು ಸ್ಪಷ್ಟವಾಗಿ ಹೇಳಿದೆ. ಮಂಡಳಿ ಮಾಡುವ ಶಿಫಾರಸುಗಳನ್ನು ಪಾಲಿಸುವುದು ಕಡ್ಡಾಯ ಎಂದು ವಿಧಿಯು ಎಲ್ಲಿಯೂ ಹೇಳಿಲ್ಲ. ಹೀಗಾಗಿ, ಮಂಡಳಿ ಮಾಡಿರುವ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಕಡ್ಡಾಯವಾಗಿ ಪಾಲಿಸಬೇಕಾಗಿಲ್ಲ, ಜಿಎಸ್‌ಟಿಗೆ ಸಂಬಂಧಿಸಿದ ಕಾನೂನು ರೂಪಿಸುವ ವಿಚಾರದಲ್ಲಿ 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಮಾನ, ವಿಶಿಷ್ಟ ಅಧಿಕಾರ ಇದೆ' ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಜಿಎಸ್‌ಟಿ ಕುರಿತ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಇದೆ.

ಈ ತೀರ್ಪು ಹಾಗೂ ಅದರಲ್ಲಿ ಇರುವ ವಿವೇಕವು ಜಿಎಸ್‌ಟಿ ವ್ಯವಸ್ಥೆಯ ಎಲ್ಲ ಪಾಲುದಾರರು ಇನ್ನಷ್ಟು ಸೂಕ್ಷ್ಮವಾಗಿ ವರ್ತಿಸಿ, ಎಲ್ಲರ ಅನಿಸಿಕೆಗಳಿಗೆ ಬೆಲೆ ಕೊಡುವಂತೆ ಪ್ರೇರಣೆ ನೀಡಬೇಕು

ಗುಜರಾತ್ ಹೈಕೋರ್ಟ್ ನೀಡಿದ್ದ ಆದೇಶವೊಂದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿ, ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಸಮುದ್ರ ಮಾರ್ಗವಾಗಿ ಸರಕು ಸಾಗಣೆಗೆ ಶೇಕಡ 5ರಷ್ಟು ತೆರಿಗೆ ವಿಧಿಸುವುದು ಅಸಾಂವಿಧಾನಿಕ ಎಂದು ಹೈಕೋರ್ಟ್ ಹೇಳಿತ್ತು. ಈ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ, ಸುಪ್ರೀಂ ಕೋರ್ಟ್ ವಿಸ್ತೃತ ವಿಚಾರಗಳ ಬಗ್ಗೆ ಸ್ಪಷ್ಟನೆ ನೀಡಿದೆ. ಜಿಎಸ್‌ಟಿ ಕಾನೂನನ್ನು ಸಂವಿಧಾನದ ಚೌಕಟ್ಟಿನಲ್ಲಿ ಇರಿಸಿ, ಅದರ ಹಿನ್ನೆಲೆಯಲ್ಲಿ ಕೆಲವು ವಿವರಣೆಗಳನ್ನು ನೀಡಿದೆ. 'ಒಂದು ದೇಶ, ಒಂದು ತೆರಿಗೆ' ಪರಿಕಲ್ಪನೆಯನ್ನು ಸಾಕಾರಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸರಕುಗಳು ಮತ್ತು ಸೇವೆಗಳಿಗೆ ತೆರಿಗೆ ವಿಧಿಸುವ ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟವು. ಅವು ಹೊಸ ವ್ಯವಸ್ಥೆಯೊಂದನ್ನು ರೂಪಿಸಲು ಬಿಟ್ಟುಕೊಟ್ಟ ಅಧಿಕಾರವು ಪೂರ್ತಿಯಾಗಿ ಅಳಿಸಿಹೋಗಿದೆ ಎಂದು ಭಾವಿಸಬೇಕಾಗಿಲ್ಲ. ಕೇಂದ್ರಕ್ಕೆ ರಾಜ್ಯಗಳ ಒಕ್ಕೂಟದಲ್ಲಿ ಇರುವಷ್ಟೇ ಪಾಲು ಏಕೀಕೃತ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಾಜ್ಯಗಳಿಗೂ ಇದೆ. ಜಿಎಸ್‌ಟಿ ಮಂಡಳಿಯಲ್ಲಿ ರಾಜ್ಯಗಳಿಗೆ ಮೂರನೆಯ ಎರಡರಷ್ಟು ಮತದಾನದ ಹಕ್ಕು ಇದೆ. ಕೇಂದ್ರಕ್ಕೆ ಇಲ್ಲಿ ಮೂರನೆಯ ಒಂದರಷ್ಟು ಮತದಾನದ ಹಕ್ಕು ಇದೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ತಮಗೆ ಸಮಾನ ಹಕ್ಕುಗಳು ಇವೆ ಎಂಬ ಸತ್ಯವನ್ನು ರಾಜ್ಯಗಳಿಗೂ ಕೇಂದ್ರಕ್ಕೂ ತಿಳಿಹೇಳುವಂತೆ ಇದೆ ಈ ತೀರ್ಪು. ಜಿಎಸ್‌ಟಿ ಮಂಡಳಿಯು 'ಸರಕು ಮತ್ತು ಸೇವೆಗಳಿಗೆ ರಾಷ್ಟ್ರ ಮಟ್ಟದಲ್ಲಿ ಸೌಹಾರ್ದದ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವ ಅಗತ್ಯದ ಆಧಾರದಲ್ಲಿ' ಮುನ್ನಡೆಯಬೇಕು ಎಂದು 279(ಎ) ವಿಧಿಯು ಹೇಳುತ್ತದೆ. ಸುಪ್ರೀಂ ಕೋರ್ಟ್‌ನ ಈ ತೀರ್ಪಿನ ಕಾರಣದಿಂದಾಗಿ ಕೇಂದ್ರದ ಸೂಚನೆಯನ್ನು ರಾಜ್ಯಗಳು ತಿರಸ್ಕರಿಸುತ್ತವೆ, ಅವುಗಳನ್ನು ಅನುಷ್ಠಾನಕ್ಕೆ ತರಲು ನಿರಾಕರಿಸುತ್ತವೆ, ಆಗ ಜಿಎಸ್‌ಟಿ ವ್ಯವಸ್ಥೆಯೇ ಕುಸಿದುಬೀಳುತ್ತದೆ ಎಂದು ಅರ್ಥೈಸುವುದು ಸರಿಯಲ್ಲ. ಈ ತೀರ್ಪು ಹಾಗೂ ಅದರಲ್ಲಿ ಇರುವ ವಿವೇಕವು ಜಿಎಸ್‌ಟಿ ವ್ಯವಸ್ಥೆಯ ಎಲ್ಲ ಪಾಲುದಾರರು ಇನ್ನಷ್ಟು ಸೂಕ್ಷ್ಮವಾಗಿ ವರ್ತಿಸಿ, ಎಲ್ಲರ ಅನಿಸಿಕೆಗಳಿಗೆ ಬೆಲೆ ಕೊಡುವಂತೆ ಪ್ರೇರಣೆ ನೀಡಬೇಕು. ಜಿಎಸ್‌ಟಿ ವ್ಯವಸ್ಥೆಯಿಂದ ರಾಜ್ಯಗಳ ಆದಾಯಕ್ಕೆ ಆಗಬಹುದಾದ ನಷ್ಟಕ್ಕೆ ಪರಿಹಾರ ಕೊಡುವ ಅವಧಿಯು ಮುಂದಿನ ತಿಂಗಳು ಕೊನೆಗೊಳ್ಳಲಿದೆ. ಇಂತಹ ಸಂದರ್ಭದಲ್ಲಿ ಕೇಂದ್ರವು ರಾಜ್ಯಗಳ ಆತಂಕಗಳಿಗೆ ಹೆಚ್ಚು ಸಂವೇದನಾಶೀಲವಾಗಿ ಸ್ಪಂದಿಸಬೇಕು.

ದಿನದ ಟ್ವೀಟ್

ನಕಲಿ ಅರ್ಜಿಗಳ ಕಾರುಬಾರು

ಮೌಲ್ಯ ನಿಗದಿಯಲ್ಲಿನ ಅಧ್ವಾನದ ನಂತರ, ಇದೀಗ ಹಿಂದೆಂದೂ ಕಾಣದ ಮಟ್ಟದಲ್ಲಿ ನಕಲಿ ಅರ್ಜಿಗಳು ಸಲ್ಲಿಕೆಯಾಗಿರುವ ಸುದ್ದಿ ಬಂದಿದೆ. ಎಲ್‌ಐಸಿ ಐಪಿಒದಲ್ಲಿ 20 ಲಕ್ಷ ಅರ್ಜಿಗಳು (ಒಟ್ಟು ಅರ್ಜಿಗಳಲ್ಲಿ ಶೇ 28ರಷ್ಟು!) ಷೇರು ಹಂಚಿಕೆಗೆ ಅನರ್ಹವಾಗಿರುವುದು ಕಂಡುಬಂದಿದೆ. ಅಸಮರ್ಪಕ ಸಲಹೆ ಹಾಗೂ ಕೆಟ್ಟದಾಗಿ ಜಾರಿಗೆ ತಂದ ಈ ಐಪಿಒದಿಂದ ಸಣ್ಣ ಹೂಡಿಕೆದಾರರು ಮತ್ತು ಎಲ್‌ಐಸಿ ಪಾಲಿಸಿದಾರರ ಮೇಲೆ ಕೆಟ್ಟ ಪರಿಣಾಮವಾಗಿದೆ.

ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ

ಕಿಡಿನುಡಿ

ಆಶಾ ಕಾರ್ಯಕರ್ತೆಯರ ಕೊಡುಗೆಯನ್ನು ವಿಶ್ವ ಆರೋಗ್ಯ ಸಂಸ್ಥೆ ಗುರುತಿಸುತ್ತದೆ, ಆದರೆ ನಾವು ಗುರುತಿಸುವುದಿಲ್ಲ! ವಾಸ್ತವದಲ್ಲಿ ಅವರನ್ನು ಗೌರವಾನ್ವಿತ ಗುಲಾಮರಂತೆ ನಡೆಸಿಕೊಳ್ಳಲಾಗುತ್ತಿದೆ. ಅವರಿಗೆ ಕಡಿಮೆ ವೇತನ ನೀಡಲಾಗುತ್ತಿದೆ, ಹೆಚ್ಚಿನ ಕೆಲಸದ ಹೊರೆ ಹೊರಿಸಲಾಗಿದೆ. ಕಾಯಂ ಉದ್ಯೋಗಿಗಳೆಂದು ಸಹ ಪರಿಗಣಿಸುವುದಿಲ್ಲ, ಆದರೆ ಅವರು 'ಸ್ವಯಂಸೇವಕರು'. ಹೀಗಾಗಿ ಅವರು ಉದ್ಯೋಗದ ಸೌಲಭ್ಯಗಳನ್ನು ಪಡೆಯಲು ಅನರ್ಹರಾಗಿದ್ದಾರೆ.

ಕತ್ಯೂಶಾ, ಶಿಕ್ಷಕಿ

25 ವರ್ಷಗಳ ಹಿಂದೆ

ಶನಿವಾರ, 24-5-1997

• **ಎಪಿಎಂಸಿಗಳಿಗೆ ಮೂವರು ಸದಸ್ಯರ ನಾಮಕರಣ: ಸುಗ್ರೀವಾಜ್ಞೆ ಜಾರಿ**

ಬೆಂಗಳೂರು, ಮೇ 23– ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರನ್ನು ನಾಮಕರಣ ಮಾಡಲು ಸರ್ಕಾರ ಗುರುವಾರ ಸುಗ್ರೀವಾಜ್ಞೆ ಹೊರಡಿಸಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರ ನಾಮಕರಣ ಮಾಡುವ ಸರ್ಕಾರದ ನಿರ್ಧಾರ ಸಾಕಷ್ಟು ವಿವಾದ ಸೃಷ್ಟಿಸಿದ ಹಿನ್ನೆಲೆಯಲ್ಲಿ ಈ ಸುಗ್ರೀವಾಜ್ಞೆಗೆ ವಿಶೇಷ ಮಹತ್ವ ಬಂದಿತ್ತು.

ಈ ವಿಚಾರದಲ್ಲಿ ರಾಜ್ಯ ಸಚಿವ ಸಂಪುಟ ನಿರ್ಧಾರ ತಳೆದು ಕರಡನ್ನು ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದ ಕೂಡಲೇ ಕಾಂಗ್ರೆಸ್ ಪಕ್ಷದವರು ನಿಯೋಗದಲ್ಲಿ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರನ್ನು ಭೇಟಿ ಮಾಡಿ, ಸುಗ್ರೀವಾಜ್ಞೆ ತರುವುದಕ್ಕೆ ಅವಕಾಶ ಕೊಡಬಾರದು ಎಂದು ಒತ್ತಾಯಪೂರ್ವಕ ಮನವಿ ಮಾಡಿಕೊಂಡಿದ್ದರು.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ರಾಜ್ಯಪಾಲರು ಸುಗ್ರೀವಾಜ್ಞೆ ಸಂಬಂಧದಲ್ಲಿ ಕೆಲವೊಂದು ಸ್ಪಷ್ಟನೆಗಳನ್ನು ಸರ್ಕಾರದಿಂದ ಕೇಳಿದ್ದರು.

ನಂತರ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ಕಾನೂನು ಸಚಿವ ಎಂ.ಸಿ. ನಾಣಯ್ಯ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಬಂದಿದ್ದರು. ಇದಾದ ನಂತರ ರಾಜ್ಯಪಾಲರು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಿತ–ತಿದ್ದುಪಡಿ) ಸುಗ್ರೀವಾಜ್ಞೆ – 1997 ಅನ್ನು ಹೊರಡಿಸಿ ಒಮ್ಮೆಗೇ ಇದನ್ನು ಜಾರಿಗೊಳಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 24-5-1972

• **ಉದ್ಯೋಗಾವಕಾಶ: ರಾಜ್ಯಗಳಿಗೆ ಕೇಂದ್ರದ ಹೆಚ್ಚುವರಿ ನೆರವು**

ನವದೆಹಲಿ, ಮೇ 23– ವಿಶೇಷ ಉದ್ಯೋಗ ಕಾರ್ಯಕ್ರಮಗಳಿಗೆ ಪ್ರಸಕ್ತ ಹಣಕಾಸು ವರ್ಷದಲ್ಲಿ ರಾಜ್ಯ ಸರ್ಕಾರಗಳಿಗೆ ಕೇಂದ್ರವು 26.5 ಕೋಟಿ ರೂಪಾಯಿ ಹೆಚ್ಚುವರಿ ನೆರವನ್ನು ನೀಡಿದೆ. ಕೇಂದ್ರಾಡಳಿತ ಪ್ರದೇಶಗಳಿಗೆ ಇದೇ ಉದ್ದೇಶಕ್ಕೆಂದು 50 ಲಕ್ಷ ರೂಪಾಯಿ ಹೆಚ್ಚುವರಿ ನೆರವನ್ನು ನೀಡಲಾಗಿದೆ.

ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನಾ ಆಯೋಗ ಬರೆದಿರುವ ಪತ್ರದಲ್ಲಿ, ಇಂತಹ ವಿಶೇಷ ಯೋಜನೆಗಳಿಗೆ ಸರ್ಕಾರಗಳೂ ಕೊನೆಯಪಕ್ಷ ಇಷ್ಟೇ ಪ್ರಮಾಣದ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಬೇಕೆಂದು ಹೇಳಿದೆ.

• **ರಾಜ್ಯದ 3 ಖಾಸಗಿ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿ ಪುನರ್‌ರಚನೆಗೆ ಸರ್ಕಾರ ಸೂಚನೆ**

ಬೆಂಗಳೂರು, ಮೇ 23– ಮಣಿಪಾಲ, ಬೆಳಗಾವಿ ಮತ್ತು ಕಲ್ಬುರ್ಗಿಯಲ್ಲಿರುವ ಖಾಸಗಿ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿಗಳನ್ನು ಸರ್ಕಾರಿ ನಿಯಂತ್ರಣಕ್ಕೆ ಅವಕಾಶವಾಗುವಂತೆ ಪುನರ್‌ರಚಿಸಲು, ಆರೋಗ್ಯ ಇಲಾಖೆ ಈ ಕಾಲೇಜುಗಳ ಈಗಿನ ಸಂಚಾಲಕರಿಗೆ ಸೂಚಿಸಿದೆ.

ಈ ಸೂಚನೆಯ ಪ್ರಕಾರ, ಹೊಸ ಆಡಳಿತ ಮಂಡಳಿಯಲ್ಲಿ ಏಳು ಮಂದಿ ಸದಸ್ಯರಿದ್ದು, ಅವರ ಪೈಕಿ 4 ಮಂದಿ ಸರ್ಕಾರದಿಂದ ಸೂಚಿಸಲ್ಪಡುವವರಾಗಿರುವರು. ಸರ್ಕಾರ ಸೂಚಿಸಿದ ಪ್ರತಿನಿಧಿಯು ಮಂಡಳಿಯ ಅಧ್ಯಕ್ಷರಾಗಿರುವರು.

ಈಗಿನ ಯುದ್ಧದಿಂದ ಸಂತ್ರಸ್ತರಾಗಿರುವ ಎಲ್ಲರ ನೋವನ್ನೂ ಜಗತ್ತು ಗಮನಿಸಬೇಕು

ಗೋಧಿ ಹೇಳಿದ ಯುದ್ಧದ ಆರ್ಥಿ'ಕತೆ'

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಈಜಿಪ್ಟ್‌ನ ಕೈರೊದಲ್ಲಿ ಒಂದು ಸಣ್ಣ ಮಸೀದಿ. ಶುಕ್ರವಾರದ ಪ್ರಾರ್ಥನೆಯ ಹೊತ್ತಿನಲ್ಲಿ ಬ್ರೆಡ್ ಬಗ್ಗೆ ಗಂಭೀರವಾದ ಮಾತುಕತೆ ನಡೆಯುತ್ತಿತ್ತು. ಬ್ರೆಡ್‌ನ ಬೆಲೆ ಹೆಚ್ಚಿಸಬಾರದೆಂದು ಬೇಕರಿ ಮಾಲೀಕರನ್ನು ಕೇಳಿಕೊಳ್ಳುತ್ತಿದ್ದರು. ಅರೇಬಿಕ್ ಭಾಷೆಯಲ್ಲಿ ಬ್ರೆಡ್ಡನ್ನು 'ಐಷ್' (ಅಂದರೆ 'ಬದುಕು') ಎಂದು ಕರೆಯುತ್ತಾರೆ. ಅದು ಬದುಕಿನಷ್ಟೇ ಮುಖ್ಯ. ಅದಿಲ್ಲದೆ ಅವರ ಊಟ ಪೂರ್ತಿಯಾಗುವುದಿಲ್ಲ. ಅವರಿಗದು ಸ್ವಾತಂತ್ರ್ಯ, ಸಾಮಾಜಿಕ ನ್ಯಾಯದಷ್ಟೇ ಮುಖ್ಯ.

ಜಗತ್ತಿನಲ್ಲಿ ಅತಿಹೆಚ್ಚು ಗೋಧಿ ಆಮದು ಮಾಡಿಕೊಳ್ಳುವ ದೇಶ ಈಜಿಪ್ಟ್. ಅದಕ್ಕೆ ವಾರ್ಷಿಕ 2.13 ಕೋಟಿ ಟನ್ ಗೋಧಿ ಬೇಕು. ಅವರು ಬೆಳೆಯುವುದು 90 ಲಕ್ಷ ಟನ್. ಉಳಿದದ್ದು ಆಮದಾಗಬೇಕು. ಆಮದಿನಲ್ಲಿ ಶೇಕಡ 85ರಷ್ಟು ರಷ್ಯಾ ಹಾಗೂ ಉಕ್ರೇನಿನಿಂದ ಬರುತ್ತಿತ್ತು. ಯುದ್ಧದಿಂದ ಗೋಧಿಯ ಬೆಲೆ ಟನ್ನಿಗೆ 2,000 ಈಜಿಪ್ಟ್ ಪೌಂಡ್‌ಗಳಷ್ಟು ಜಾಸ್ತಿಯಾಗಿದೆ. ಬ್ರೆಡ್ ಬೆಲೆ ಶೇಕಡ 25ರಷ್ಟು ಏರಿದೆ. ಜನ ತಲಾ 130-189 ಕೆ.ಜಿ. ಬ್ರೆಡ್ ಬಳಸುತ್ತಾರೆ. ಪ್ರತಿಯೊಬ್ಬರಿಗೂ ಸಬ್ಸಿಡಿಯಲ್ಲಿ ಬ್ರೆಡ್ ನೀಡುವ ವ್ಯವಸ್ಥೆಯಿದೆ. ಸಬ್ಸಿಡಿ ಬ್ರೆಡ್‌ನ ಬೆಲೆ 34 ವರ್ಷಗಳಿಂದ ಏರಿಲ್ಲ. ಬ್ರೆಡ್‌ನ ಬೆಲೆ ಏರಿದರೆ ಅಲ್ಲಿ ದಂಗೆಯೇ ಆಗಿಬಿಡಬಹುದು. 1977ರಲ್ಲಿ ಇಂಥದ್ದೊಂದು ದಂಗೆಯಾಗಿತ್ತು. ಈಜಿಪ್ಟ್‌ನಲ್ಲಿ ಈಗಿರುವ ಆರ್ಥಿಕ ದುಃಸ್ಥಿತಿ ನೋಡಿದರೆ ಬ್ರೆಡ್ ಬೆಲೆ ಏರಿಬಿಡಬಹುದೇನೊ! ಉಕ್ರೇನಿನ ಮೇಲೆ ರಷ್ಯಾದ ದಾಳಿ, ರಷ್ಯಾ ಮೇಲಿನ ನಿರ್ಬಂಧ ಇವು ದೂರದ ಈಜಿಪ್ಟ್‌ನಂತಹ ದೇಶಗಳಲ್ಲಿ ದಂಗೆಗೂ ಕಾರಣವಾಗಬಹುದು.

ಇಡೀ ಜಗತ್ತಿನ ಇಂಧನ, ಆಹಾರಧಾನ್ಯ ಹಾಗೂ ರಸಗೊಬ್ಬರದ ಮಾರುಕಟ್ಟೆಯಲ್ಲಿ ರಷ್ಯಾ ಹಾಗೂ ಉಕ್ರೇನ್‌ಗಳದ್ದೇ ದೊಡ್ಡ ಪಾಲು. ರಷ್ಯಾ ಜಗತ್ತಿನಲ್ಲೇ ಅತಿಹೆಚ್ಚು ಗೋಧಿಯನ್ನು ರಫ್ತು ಮಾಡುವ ದೇಶ. ಉಕ್ರೇನ್ ಐದನೆಯ ಸ್ಥಾನದಲ್ಲಿದೆ. ಮಧ್ಯಪ್ರಾಚ್ಯ ಹಾಗೂ ಉತ್ತರ ಆಫ್ರಿಕಾದ ದೇಶಗಳಿಗೆ ಬಹುಪಾಲು ಗೋಧಿ ಸರಬರಾಜಾಗುವುದೇ ಅಲ್ಲಿಂದ.

ಯುದ್ಧದಿಂದಾಗಿ ಉಕ್ರೇನಿನ ಬಂದರುಗಳು ಬಂದ್ ಆಗಿವೆ. ನಿರ್ಬಂಧಗಳಿಂದ ರಷ್ಯಾ ಹೊರದೇಶಗಳಿಗೆ ರಫ್ತು ಮಾಡುವಂತಿಲ್ಲ. ಉಕ್ರೇನ್ ಗೋದಾಮುಗಳಲ್ಲಿ 2 ಕೋಟಿ ಟನ್ ಗೋಧಿ ರಫ್ತಿಗಾಗಿ ಕಾಯುತ್ತಿದೆಯಂತೆ. ಆದರೆ ಉಕ್ರೇನ್ ಬಂದರುಗಳು ಜಗತ್ತಿನ ಸಂಪರ್ಕ ಕಳೆದುಕೊಂಡಿವೆ. ಉಳಿದಿರುವ ಪರ್ಯಾಯವೆಂದರೆ, ಇಕ್ಕಟ್ಟಾದ ರಸ್ತೆಗಳ ಮೂಲಕ ಸಾಗಿಸಬೇಕು. ಅದೀಗ ತುಂಬಾ ಅಪಾಯಕಾರಿ. ಉಕ್ರೇನಿನ ಗೋಧಿ ಬೆಳೆಯುವ ಪ್ರಮುಖ ಪ್ರದೇಶಗಳೆಲ್ಲ ನಾಶವಾಗಿವೆ. ರಷ್ಯಾ, ಉಕ್ರೇನ್‌ಗಳ ಸರಬರಾಜು ಇಲ್ಲವಾದರೆ, ಬೇರೆಡೆಯಿಂದ ಆಮದು ಮಾಡಿಕೊಳ್ಳಬೇಕು. ಅದು ತುಂಬಾ ದುಬಾರಿ. ಇಂಧನದ ಬೆಲೆ ವಿಪರೀತವಾಗಿದೆ. ಡಾಲರ್ ಮೌಲ್ಯ ಜಾಸ್ತಿಯಾಗಿದೆ. ಅದರಿಂದ ಆಮದಿನ ಬೆಲೆ, ಸಾಗಣೆ ವೆಚ್ಚ ಹೆಚ್ಚಿದೆ.

ಗೋಧಿ ಬೆಳೆಯುವ ಇತರ ದೇಶಗಳಿಗೆ ಇದೊಂದು ಅವಕಾಶ. ಭಾರತವು ರಫ್ತನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಚೀನಾ ಬಿಟ್ಟರೆ ಅತಿಹೆಚ್ಚು ಗೋಧಿ ಉತ್ಪಾದಿಸುವ ರಾಷ್ಟ್ರ ಭಾರತ. ಜಗತ್ತಿನ ಶೇ 13.53ರಷ್ಟು ಗೋಧಿ ಇಲ್ಲಿ ಬೆಳೆಯುತ್ತದೆ. ಆದರೆ ನಮ್ಮ ರಫ್ತಿನ ಪ್ರಮಾಣ ತುಂಬಾ ಕಡಿಮೆ. ಜಾಗತಿಕ ಒಟ್ಟು ರಫ್ತಿನ 1ರಷ್ಟನ್ನು ಮಾತ್ರ ನಾವು ಮಾಡುತ್ತಿದ್ದೆವು. 2021–22 ರಲ್ಲಿ ಪರವಾಗಿಲ್ಲ. 9.63 ಲಕ್ಷ ಟನ್ ಗೋಧಿಯನ್ನು ರಫ್ತು ಮಾಡಿದ್ದೇವೆ. ಅದರ ಹಿಂದಿನ ವರ್ಷ 1.30 ಲಕ್ಷ ಟನ್‌ನಷ್ಟಾಗಿತ್ತು. 2022- 23ರಲ್ಲಿ 1 ಕೋಟಿ ಟನ್ ರಫ್ತು ಮಾಡುವ ನಿರೀಕ್ಷೆಯಿದೆ. ಹಲವು ದೇಶಗಳು ನಮ್ಮಿಂದ ಗೋಧಿ ಕೊಳ್ಳಲು ಮುಂದಾಗಿವೆ. ಈಜಿಪ್ಟ್ 10 ಲಕ್ಷ ಟನ್‌ಗೆ ಬೇಡಿಕೆಯನ್ನಿಟ್ಟಿದೆ.

ಜಗತ್ತಿಗೇ ಆಹಾರ ಒದಗಿಸುತ್ತೇವೆಂದು ನಮ್ಮ ಸರ್ಕಾರ ಹೇಳಿಕೆ ಬೇರೆ ನೀಡಿತ್ತು. ಹಲವು ದೇಶಗಳಿಗೆ ವ್ಯಾಪಾರಿ ಪ್ರತಿನಿಧಿಗಳನ್ನು ಕಳುಹಿಸುವ ತಯಾರಿಯನ್ನೂ ನಡೆಸಿತ್ತು. ಗೋಧಿಯನ್ನು ಸಂಗ್ರಹಿಸಲು ಗೋದಾಮುಗಳ ನಿರ್ಮಾಣಕ್ಕೆ, ಗೋಧಿಯ ಗುಣಮಟ್ಟ ಪರೀಕ್ಷಿಸಲು ಪ್ರಯೋಗಾಲಯಗಳ ನಿರ್ಮಾಣಕ್ಕೂ ತಯಾರಿ ನಡೆಸಿತ್ತು. ಆದರೆ ಈ ಲೆಕ್ಕಾಚಾರ ಅಷ್ಟು ಸರಳವಲ್ಲ. ಹಣದುಬ್ಬರ, ಅದರಲ್ಲೂ ಆಹಾರದ ಹಣದುಬ್ಬರ ಹಿಡಿತಕ್ಕೇ ಸಿಗುತ್ತಿಲ್ಲ. ಗೋಧಿ ಉತ್ಪಾದನೆಯ ಲೆಕ್ಕಾಚಾರದಲ್ಲೂ ಎಡವಟ್ಟಾಗಿದೆ. ಬಿಸಿಲಿನ ತಾಪ ಏರಿದ್ದರಿಂದ ಉತ್ಪಾದನೆ ಕಡಿಮೆಯಾಗಿದೆ. 11.13 ಕೋಟಿ ಟನ್ ಬೆಳೆಯುತ್ತದೆ ಅಂದುಕೊಂಡಿದ್ದರು. ಈಗ 10.6 ಕೋಟಿ ಟನ್ ಕೂಡ ಅನುಮಾನ ಅನ್ನುತ್ತಿದ್ದಾರೆ. ಖಾಸಗಿ ವ್ಯಾಪಾರಿಗಳು ಸಿಕ್ಕಷ್ಟನ್ನು ಕೊಂಡಿದ್ದಾರೆ.

ರೈತರಿಗೆ ಅಪರೂಪಕ್ಕೆ ಕನಿಷ್ಠ ಬೆಂಬಲ ಬೆಲೆಗಿಂತ ಒಳ್ಳೆಯ ಬೆಲೆ ಸಿಕ್ಕಿದೆ. ಇನ್ನೊಂದಿಷ್ಟು ಹೆಚ್ಚಬಹುದೆಂದು ಮಾರದೆ ಕಾಯುತ್ತಿದ್ದಾರೆ. ಸ್ವಾಭಾವಿಕವಾಗಿಯೇ ಸರ್ಕಾರಕ್ಕೆ ನಿರೀಕ್ಷೆಯಷ್ಟು ಗೋಧಿಯನ್ನು ಸಂಗ್ರಹಿಸಲಾಗುತ್ತಿಲ್ಲ. 4.4 ಕೋಟಿ ಟನ್ ಸಂಗ್ರಹಿಸಬೇಕೆನ್ನುವ ಲೆಕ್ಕಾಚಾರ ಇತ್ತು. ಆದರೆ ಕೇವಲ 1.95 ಕೋಟಿ ಟನ್ ಸಂಗ್ರಹಿಸುವುದಕ್ಕೆ ಸಾಧ್ಯ ಆಗಿದೆ. ದಾಸ್ತಾನೂ ಕರಗಿದೆ. ಕೇವಲ 1.90 ಕೋಟಿ ಟನ್ ಉಳಿದಿದೆ. ಎರಡೂ ಸೇರಿ ಇರುವ ಒಟ್ಟು 3.85 ಕೋಟಿ (1.90 + 1.95) ಟನ್ನಿನಲ್ಲಿ 75 ಲಕ್ಷ ಟನ್‌ಗಳನ್ನು ತುರ್ತು ಸಂದರ್ಭಕ್ಕಾಗಿ ಮೀಸಲಿಡಬೇಕು. ಸಾರ್ವಜನಿಕ ಪಡಿತರ ವ್ಯವಸ್ಥೆಗೆ 2.6 ಕೋಟಿ ಟನ್ ಬೇಕು. ಇನ್ನು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ನಿಧಿಗೆ 1 ಕೋಟಿ ಟನ್ ಬೇಕಾಗುತ್ತದೆ. ರಫ್ತಿಗೆ ಉಳಿಯುವುದು ಕಮ್ಮಿ.

ಇಂತಹ ಪರಿಸ್ಥಿತಿಯಲ್ಲಿ ಗೋಧಿಯನ್ನು ರಫ್ತು ಮಾಡಿದರೆ ಗೋಧಿಯ ಜೊತೆಗೆ ಉಳಿದೆಲ್ಲಾ ಆಹಾರ ಪದಾರ್ಥಗಳ ಬೆಲೆಯೂ ಗಗನಕ್ಕೇರುತ್ತದೆ. ಸರ್ಕಾರ ದಿಢೀರನೆ ನಿರ್ಧಾರ ಬದಲಿಸಿ ರಫ್ತನ್ನು ನಿಷೇಧಿಸಿಬಿಟ್ಟಿತು. ರೈತರು ಕಂಗಾಲಾದರು. ನಮ್ಮನ್ನು ನೆಚ್ಚಿಕೊಂಡಿದ್ದ ರಾಷ್ಟ್ರಗಳು ಸಂಕಷ್ಟಕ್ಕೆ ಸಿಲುಕಿದವು. ಭಾರತದ ಮೇಲಿನ ನಂಬಿಕೆಗೆ ಪೆಟ್ಟು ಬಿತ್ತು. ಭಾರತದ ಕ್ರಮವನ್ನು ಹಲವು ದೇಶಗಳು ವಿರೋಧಿಸಿವೆ. ಜಾಗತಿಕ ಮಟ್ಟದಲ್ಲಿ ಗೋಧಿ ಬೆಲೆ ಶೇ 6ರಷ್ಟು ಏರಿತು. ವಾಯಿದಾ ವಹಿವಾಟಿನಲ್ಲಿ (ಫ್ಯೂಚರ್ ಮಾರುಕಟ್ಟೆ) ಈಗಾಗಲೇ ದಾಖಲೆ ಬೆಲೆಯೇರಿಕೆ ಕಂಡಿದ್ದ ಗೋಧಿಯ ಬೆಲೆ ಮತ್ತೆ ಶೇ 6ರಷ್ಟು ಏರಿದೆ. ವಾಯಿದಾ ವ್ಯಾಪಾರ ಅನ್ನುವುದು, ಮುಂದಿನ ನಿರ್ದಿಷ್ಟ ದಿನಾಂಕದಲ್ಲಿ ಮೊದಲೇ ಗೊತ್ತು ಮಾಡಿದ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಹಾಗೂ ಕೊಳ್ಳುವುದಕ್ಕೆ ಮಾಡಿಕೊಂಡ ಒಪ್ಪಂದ. ಈಗ ಹೂಡಿಕೆದಾರರಿಗೆ ಆಹಾರದ ವಾಯಿದಾ ವ್ಯವಹಾರದಲ್ಲಿ ಹಣ ಹೂಡುವುದು ಹೆಚ್ಚು ಲಾಭದಾಯಕವಾಗಿ ತೋರುತ್ತಿದೆ. ಇಂತಹ ಸಟ್ಟಾ ವ್ಯಾಪಾರವು ಆಹಾರದ ಬಿಕ್ಕಟ್ಟನ್ನು ಸೃಷ್ಟಿಸಬಲ್ಲದು ಎಂಬುದನ್ನು 2007- 08ರಲ್ಲಿ ನೋಡಿದ್ದೇವೆ. ಅದರಿಂದ ಲಕ್ಷಾಂತರ ಜನರ ಬದುಕು ದುರ್ಭರವಾಗಿದ್ದನ್ನು ಕಂಡಿದ್ದೇವೆ.

ಈಗಾಗಲೇ ಹಲವು ಬಡರಾಷ್ಟ್ರಗಳು ಆಹಾರ ಹಾಗೂ ಅವಶ್ಯಕ ವಸ್ತುಗಳ ಕೊರತೆಯಿಂದ, ವಿಪರೀತ ಸಾಲದ ಹೊರೆಯಿಂದ ಜರ್ಝರಿತವಾಗಿವೆ. ನೆರವಿಗಾಗಿ ಹಪಹಪಿಸುತ್ತಿವೆ. ಡಬ್ಲ್ಯುಎಫ್‌ಪಿ- ಸಂಯುಕ್ತ ರಾಷ್ಟ್ರಗಳ ಜಾಗತಿಕ ಆಹಾರ ಕಾರ್ಯಕ್ರಮ ಸಂಘಟನೆಯು ಅಂತಹ ದೇಶಗಳ ಜನರಿಗೆ ಆಹಾರ ಒದಗಿಸುತ್ತಿತ್ತು. ಅಲ್ಲಿಗೂ ಬಹುತೇಕ ಪದಾರ್ಥಗಳು ಉಕ್ರೇನ್, ರಷ್ಯಾದಿಂದಲೇ ಬರುತ್ತಿದ್ದವು. ಈಗ ಅದಕ್ಕೂ ಬೆಲೆಯೇರಿಕೆಯ ಹೊಡೆತ ಬಿದ್ದಿದೆ. ನೆರವಿನ ಖರ್ಚು ಏರಿದೆ. ಹಣದ ಕೊರತೆ ಅದನ್ನೂ ಕಾಡುತ್ತಿದೆ.

ಬರಗಾಲದ ಅಪಾಯದಲ್ಲಿರುವ ಈ ದೇಶಗಳಿಗೆ ಬೇಕಾದಷ್ಟು ನೆರವು ಸಿಗುತ್ತಿಲ್ಲ. ಅಫ್ಗಾನಿಸ್ತಾನಕ್ಕೆ ಕೇಳಿಕೊಂಡಿದ್ದರ ಶೇಕಡ 13.5ರಷ್ಟು ಸಿಕ್ಕಿದೆ. ಸೊಮಾಲಿಯಾಕ್ಕೆ ಸಿಕ್ಕಿರುವುದು ಶೇ 4.4ರಷ್ಟು ಮಾತ್ರ. ಉಕ್ರೇನಿಗೆ ಶೇ 65ರಷ್ಟು ಸಿಕ್ಕಿದೆ. ನಮ್ಮಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಕಲ್ಯಾಣ ಕಾರ್ಯಕ್ರಮಗಳಲ್ಲಿ ಕಡಿತವಾಗುತ್ತಿದೆ. ಸಾರ್ವಜನಿಕ ಆಹಾರ ವಿತರಣೆಗೆ ಹಾಗೂ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಆಹಾರ ಯೋಜನೆಗೆ ಇಟ್ಟಿದ್ದ ಗೋಧಿಯ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಜಗತ್ತಿನ ಮೂರನೇ ಒಂದರಷ್ಟು ಜನ ಅದಾಗಲೇ ಅರೆಹೊಟ್ಟೆ ತಿನ್ನುತ್ತಿದ್ದರು. ಕೋವಿಡ್‌ನಿಂದ ಅವರ ಸಂಕಟ ಹೆಚ್ಚಿತು. ಯುದ್ಧವು ಅವರ ಸ್ಥಿತಿಯನ್ನು ಇನ್ನಷ್ಟು ಭಯಂಕರಗೊಳಿಸಿದೆ. ಪರಿಣಾಮವು ಎರಡನೆಯ ಮಹಾಯುದ್ಧಕ್ಕಿಂತ ಭೀಕರವಾಗಬಹುದು ಎಂದು ಕೆಲವರು ಹೇಳುತ್ತಿದ್ದಾರೆ.

ನಿಜ, ಜಗತ್ತು ಈ ಯುದ್ಧದಲ್ಲಿನ ಸಂತ್ರಸ್ತರನ್ನು ಗಮನಿಸಬೇಕು. ಹಾಗೆಯೇ ಈ ಯುದ್ಧ ಪ್ರದೇಶದಿಂದ ಬಹುದೂರ ಇರುವ, ಸುದ್ದಿಯಲ್ಲೇ ಇಲ್ಲದ, ಜಗತ್ತಿನ ಅತ್ಯಂತ ಬಡವರು ಹಾಗೂ ತೊಂದರೆಗೀಡಾದವರ ನೋವನ್ನೂ ಗಮನಿಸಬೇಕು. ಈ ಯುದ್ಧದಲ್ಲಿ ಗೆದ್ದವರು ಯಾರು? ಸೋತವರು ಯಾರು?

ಲೇಖಕ: ಸಂಖ್ಯಾಶಾಸ್ತ್ರ ನಿವೃತ್ತ ಪ್ರಾಧ್ಯಾಪಕ, ಮೈಸೂರು

ಚುರುಮುರಿ



ಕಷ್ಟಮಂಗಲ ಪ್ರಶ್ನೆ

• ಲಿಂಗರಾಜು ಡಿ.ಎಸ್.

'ಸಾ ನಿರ್ಮಲವ್ವ, ಮೋದಿ ಮಾವಾರು ಪೆಟ್ರೋಲಿಗೆ ಹತ್ತು ರೂಪಾಯಿ ಏರಿಸಿ ಈಗ ಒಂಬತ್ತು ರೂಪಾಯಿ ಇಳಿಸಿ 'ನಮಗೆ ಜನರೇ ಮೊದಲು' ಅಂತ ನುಲೀತವ್ರೆ?' ಅಂದೆ.

'ಇವುರ ಸಿಂಡಾಟಕೆ ಏನೇಳನೆ! ಸಿದ್ದಣ್ಣ ಗೋಮಾಂಸ ಉಣ್ಣಕ್ಕೂ ರೆಡಿಯಂತೆ, ಕುಮಾರಣ್ಣನೋ 'ಬಿಜೆಪಿ-ಕಾಂಗ್ರೆಸ್ ಲೂಟಿ ದಾಖಲೆ ನಂತಾವದ. ಅದ ಈಚಿಗೆ ಬುಟ್ರೆ ತಲೆಗಳೇ ಉಳ್ಯೋಯ್ತವ!' ಅಂತ ಸೋಬಾನೆ ಹಾಡ್ತದೆ. ಇವುರ ದೆಸಿಂದಾಗಿ ನಮ್ಮ ಬದುಕು ಅಂಬಲಿ-ತುಂಬೆಸೊಪ್ಪು ತಿನ್ನೋ ಲೆವೆಲ್ಲಿಗೆ ಬಂದದೆ' ಯಂಟಪ್ಪಣ್ಣ ನೊಂದ್ಕತ್ತು.

'ಅಣೈ, ಕುಮಾರಣ್ಣ ಕುಂತಲ್ಲೇ ತೆವೀತಿರಲಿ, ನಾವು ನಮ್ಮೂರ ಐನೋರ ತಾವ್ಹೋಗಿ ಕಷ್ಟಮಂಗಲ ಪ್ರಶ್ನೆ ಕೇಳಮು!' ತುರೇಮಣೆ ಘೋಷಿಸಿದರು.

'ಇದ್ಯಾವುದು ಸಾ ಕಷ್ಟಮಂಗಲ? ಆಯ್ತು ಅಯ್ನೋರ ಏನು ಪ್ರಶ್ನೆ ಕೇಳೀರಿ?' ಅಂತಂದೆ.

'ಬೊಡ್ಡಿಹೈದ್ನೆ, ಕೇಳಕೇನು ಬೇಕಾದೊಷ್ಟವೆ! ಡ್ರಗ್ಸ್ ಕೇಸು, ಪಿಎಸ್‌ಐ ಅಕ್ರಮಿಗಳಿಗೆ ಶಿಕ್ಷೆಯಾದದಾ? ರೈತರ ಬೆಳೆಗೆ ಸರಿಯಾದ ಬೆಲೆ ಸಿಕ್ಕದು ಯಾವಾಗ? ರೋಡುಗಳು ಯಾವಾಗ ಬಾಯಿ ಮುಚ್ಚಿಕಂಡಾವು? ಕೊಂದಾಯ ಇಲಾಖೆ ಸರೋಗದು ಯಾವಾಗ? ರಾಜಕೀಯದೋರ ಟ್ವೀಟಾಟಕೆ ಯಾವಾಗ ನಿಂತದು? ಜನಕ್ಕೆ ಒಳ್ಳೇದು ಮಾಡೋ ಬುದ್ಧಿ ರಾಜಕೀಯ ಪಕ್ಷಗಳಿಗೆ ಯಾವಾಗ ಬಂದದು? ಕರ್ನಾಟಕದ ರಾಜಕಾರಣದ ದೂಳು ಮೋದಿ ಕಣ್ಣಿಗೆ ಬಿದ್ದಿಲ್ವಾ? ಗುತ್ತಿಗೆ ಪರ್ಸೆಂಟೇಜ್ ಕಥೆ ಮುಗೀತಾ ಅಂತ ತಿಳಕಮು' ಅಂದರು.

ಅಯ್ನೋರು ಕವಡೆ ಬುಟ್ಟು ಬೆಳ್ಳು ಎಣಿಸಿ, ಮ್ಯಾಕ್ಕೆ ಕೆಳಿಕ್ಕೆ ನೋಡಿ 'ನಿನ್ನ ಪ್ರಶ್ನೆಗಳಿಗೆಲ್ಲಾ ಉತ್ತರ ಇಲ್ಲ ಕಯ್ಯಾ! ಆದರೂ ಒಂದೊಗಟು ಹೇಳ್ತಿನಿ ಅರ್ಥ ಮಾಡಿಕೋ- ಅಡ್ಡಗೋಡೆ ಮ್ಯಾಲೆ ಲಡ್ಡು ದೀಪ, ಅಟ್ಟದ ಮ್ಯಾಲೆ ಪುಟ್ಟಲಕ್ಷ್ಮಿ ಕುಂತವಳೆ, ಮೂರು ಪಕ್ಷಿಗಳು ಅಟ್ಟ ಹತ್ತುವಾಗ ಮೂರು ಬಣ್ಣ, ಹತ್ತಿದ ಮ್ಯಾಲೆ ಒಂದೇ ಬಣ್ಣ' ಅಂದೋರೆ ಎದ್ದು ಮನೆ ಒಳಿಕೆ ಕಡೆದರು.

ನಾವು ಕೋಲೆಬಸವನ ಥರಾ ಎದ್ದು ಹೊಂಟೋ!

ಸಂಗತ

ವಿದ್ಯಾರ್ಜನೆ ತಾಣ: ಬೇಕು ವ್ಯವಧಾನ

ಮಕ್ಕಳು ವಿದ್ಯೆ ಅರ್ಜಿಸುವ ತಾಣದಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯುವ ಅಗತ್ಯವನ್ನು ಪೋಷಕರು ಮನಗಾಣಬೇಕು

• ಯೋಗಾನಂದ

ಶಾಲೆಗಳಲ್ಲಿ ಆಯಾ ಶೈಕ್ಷಣಿಕ ವರ್ಷದ ಪ್ರವೇಶಾತಿ ಬಿರುಸಾದಾಗಲೆಲ್ಲ ನನಗೆ ಆ ಸಂಗತಿ ಕಾಡುತ್ತದೆ. ಶಾಲೆಗೆ ಹೊಸದಾಗಿ ನೇಮಕಗೊಂಡ ಅಧ್ಯಾಪಕರೊಬ್ಬರು ತರಗತಿಗೆ ಅಡಿಯಿಡುತ್ತಲೇ ಬೆರಗಾಗುತ್ತಾರೆ. ಅಲ್ಲಿ ಬೆಂಚುಗಳನ್ನು ಅಲಂಕರಿಸಿದ್ದವರು ಮಕ್ಕಳಲ್ಲ, ನಲವತ್ತರ ಮೇಲಿನ ವಯೋಮಾನದವರು! ಕ್ಷಣ ಅವರು ಇದೇನು ವಯಸ್ಕರ ಶಿಕ್ಷಣ ತರಗತಿಯೋ ಅಂತ ತಬ್ಬಿಬ್ಬಾಗುವರು. ಅಷ್ಟರಲ್ಲಿ ಹಿರೀಕರೊಬ್ಬರು 'ಸುಧಾರಿಸಿಕೊಳ್ಳಿ ಸಾರ್, ನಾವು ಮಕ್ಕಳ ಪೋಷಕರು. ನಮ್ಮ ಮಕ್ಕಳಿಗೆ ಪಾಠ ಹೇಳುವವರು ಯಾರು, ಏನು, ಎತ್ತ ಅಂತ ಪರಿಚಯಿಸಿಕೊಳ್ಳಲು ಬಂದಿದ್ದೇವೆ' ಎಂದರು.

ಶಾಲೆಯು ಮನೆಯ ವಿಸ್ತರಣೆ ಎನ್ನುತ್ತಾರೆ. ಈ ದಿಸೆಯಲ್ಲಿ ಪಾಲಕರ ಈ ಪರಿಯ ಕಾಳಜಿ ನಿಸ್ಸಂದೇಹವಾಗಿ ಮಾದರಿ. ಮಕ್ಕಳನ್ನು ಶಾಲೆಗೆ ಸೇರಿಸಿ, ಇನ್ನು ಏನಿದ್ದರೂ ಶಾಲೆಯದೇ ಹೊಣೆ ಎನ್ನಲಾದೀತೆ? ಅಷ್ಟಕ್ಕೂ ಶಾಲೆಯು ಒಂದು ವರ್ಷದ ಅವಧಿಯಲ್ಲಿ ಒಂದು ಅಂಕಪಟ್ಟಿ ಹೆರುವ ಎಟಿಎಂ ಎಂದು ಭಾವಿಸಬೇಕೆ?

ಪೋಷಕರ ವೃತ್ತಿ ಯಾವುದೇ ಇರಲಿ, ಅವರು ನಿರಕ್ಷರರೇ ಆಗಿರಲಿ ತಮ್ಮ ಮಕ್ಕಳಿಗೆ ಶಾಲೆಯಿಂದ ಎಂತಹ ಶಿಕ್ಷಣ ಲಭಿಸುತ್ತದೆ ಎಂದು ತಿಳಿದುಕೊಳ್ಳುವುದು ಅನಿವಾರ್ಯವಾಗಬೇಕು. ಅಧ್ಯಾಪಕರ ಬೋಧನಾ ವಿಧಾನವನ್ನು, ಅವರು ಅಶಿಸ್ತು ಹತ್ತಿಕ್ಕಿ ತರಗತಿ ನಿರ್ವಹಿಸುವ ಕ್ರಮವನ್ನು ಪಾಲಕರು ವಿಚಾರಿಸಿ ಅರಿಯದೇ ಸಹಭಾಗಿತ್ವ ಯಶಸ್ವಿಯಾಗದು. ನಿಷ್ಠುರ ಸತ್ಯವೆಂದರೆ, ಶಾಲೆಗಳಿಗೆ ಪೋಷಕರು ಭೇಟಿ ನೀಡುವ ಸಂದರ್ಭಗಳೆಂದರೆ, ಅವರ ಮಕ್ಕಳಿಗೆ ಸಹಪಾಠಿಗಳಿಂದ ಏನಾದರೂ ಕೀಟಲೆ, ತಂಟೆ ಬಾಧಿಸಿದ್ದರೆ ಅಥವಾ ಅವರ ಮಕ್ಕಳೇ ದುರ್ವರ್ತನೆ ತೋರಿದ ಕಾರಣ ಶಾಲೆಯಿಂದ ಬುಲಾವು ಬಂದರೆ! ಹಾಗಾಗಿ ಪೋಷಕರ ಪಾಲಿಗೆ ತಮ್ಮ ಮಕ್ಕಳು ವಿದ್ಯೆ ಅರ್ಜಿಸುವ ತಾಣ ಬಹುತೇಕ ಅಪರಿಚಿತವಾಗಿ ಇರುವುದೇ ಹೆಚ್ಚು.

ಒಂದು ಆಭರಣ, ಜವಳಿ ಅಥವಾ ಕಾರು, ಬೈಕ್ ಖರೀದಿಸುವಾಗ ನಾವು ಏನೆಲ್ಲ ವಿಚಾರಿಸುತ್ತೇವೆ. ಮನೆ ಕಟ್ಟುವ ಗುತ್ತಿಗೆದಾರರೊಂದಿಗೆ ಪಾಯದ ಕಂಬಗಳಿಂದ ಹಿಡಿದು ಬಳಸುವ ಕಚ್ಚಾ ಸಾಮಗ್ರಿಗಳ ಕುರಿತು ಚರ್ಚಿಸುತ್ತೇವೆ. ಇದಿರಲಿ, ಹೋಟೆಲ್‌ಗೆ ಹೋಗಿ ಮೆನು ಹಿಡಿದು, ಸರಬರಾಜಾಗುವ ಪಾನೀಯ, ತಿನಿಸುಗಳ ಬಗ್ಗೆ ಅದೆಷ್ಟು ಸೂಕ್ಷ್ಮವಾಗಿ ಮನಸ್ಸಿಗೆ ತಂದುಕೊಳ್ಳುತ್ತೇವೆ. ಆದರೆ ಹೋಂವರ್ಕ್, ಕಿರು ಪರೀಕ್ಷೆಗಳ ಬಗ್ಗೆ ಕೇಳಿ ಮಾಹಿತಿ ಪಡೆಯುವ ವ್ಯವಧಾನ ಬೇಕು ತಾನೆ? ಆಯಾ ದಿನದ ಕೊನೆಯಲ್ಲಿ ಮಕ್ಕಳ ಉತ್ಸಾಹದ ಕೀಲಿ ಕೈ ಎಂದರೆ ಪೋಷಕರೇ. ಶಾಲೆಗಳೇನೊ ಕಳೆದ ವರ್ಷಗಳಲ್ಲಿ ಪರೀಕ್ಷೆಗಳಲ್ಲಿ ಇಂತಿಷ್ಟು ರ್‍ಯಾಂಕುಗಳು, ಇಷ್ಟು 'ಉತ್ತಮ' ಶೇಕಡಾವಾರು ಫಲಿತಾಂಶ ಬಂದಿದೆ ಎಂದು ಫೋಟೊಸಮೇತ ಭಿತ್ತಿಪತ್ರಗಳನ್ನು ಪ್ರಕಟಿಸಿರುತ್ತವೆ. ಮಕ್ಕಳ ಭವಿತವ್ಯಕ್ಕೆ ಅಂಕಪಟ್ಟಿಯೊಂದೇ ಆಧಾರವಾಗಲಾರದು.

ಪೋಷಕರೇ, ಶಾಲೆಯ ಸುತ್ತ ಒಂದೆರಡು ಸುತ್ತು ಹಾಕಿ. ಗ್ರಂಥಾಲಯ, ಪ್ರಯೋಗಾಲಯ, ಆಟೋಟಗಳಿಗಿರುವ ಅವಕಾಶ ಅವಲೋಕಿಸಿ. ಅಕ್ಷರಶಃ ಪಠ್ಯಕ್ಕಿಂತ ಪಠ್ಯೇತರ ಚಟುವಟಿಕೆಗಳಿಂದಲೇ ಎಳೆಯರು ಹೆಚ್ಚು ಕಲಿಯುತ್ತಾರೆ. ತರಗತಿ ಸಾವಯವವಾಗಿರಲು ಬೋಧಕರ ಪಾತ್ರ ದೊಡ್ಡದೇ. ಬೋಧಿಸುವ ಅಂಶಗಳು ಬದುಕಿಗೆ ಹೇಗೆ ಹತ್ತಿರ, ಅನ್ವಯ ಎನ್ನುವುದು ಮನವರಿಕೆಯಾಗದಿದ್ದರೆ ವಿದ್ಯಾರ್ಥಿಗಳು ಕಲಿಯಲು ಸಹಜವಾಗಿಯೇ ಶ್ರದ್ಧೆ ತೋರರು.

ತರಗತಿಗೆ ಹಾಜರಾಗಲು ಸಮವಸ್ತ್ರಧಾರಣೆ, ಸಮಯಪ್ರಜ್ಞೆಗೂ ಮೀರಿ ಪೂರ್ವ ಬೌದ್ಧಿಕ ತಯಾರಿ ಅತ್ಯಗತ್ಯ. ಇಲ್ಲದಿದ್ದರೆ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಷ್ಟೇ ವಿಪರ್ಯಾಸವಾಗುವುದು. ವಿದ್ಯಾರ್ಥಿಗಳನ್ನು ಪಠ್ಯದ ವಾಕ್ಯಗಳನ್ನು ಓದಲು, ಕಪ್ಪುಹಲಗೆಯ ಮೇಲೆ ಬರೆಯಲು ತೊಡಗಿಸಿ ಅವರನ್ನು ಕ್ರಿಯಾಶೀಲಗೊಳಿಸುವುದು ಉತ್ತಮ ಮಾರ್ಗ. ತಮ್ಮ ಕರ್ತವ್ಯವನ್ನು ಪ್ರೀತಿಸುವ ಶಿಕ್ಷಕರನ್ನು ವಿದ್ಯಾರ್ಥಿಗಳು ಇಷ್ಟಪಡುತ್ತಾರೆ. ತಮ್ಮಿಂದಾದ ತಪ್ಪು, ಪ್ರಮಾದಗಳನ್ನು ಒಪ್ಪಿ ತಿದ್ದಿಕೊಳ್ಳುವ ಪ್ರಾಮಾಣಿಕ ಶಿಕ್ಷಕರನ್ನು ಮೆಚ್ಚುತ್ತಾರೆ. ಬೋಧನೆ, ಕಲಿಕೆಗೆ ಅವಸರಕ್ಕಿಂತ ಕಡು ವೈರಿ ಇನ್ನೊಂದಿಲ್ಲ. ಪಠ್ಯಕ್ರಮ ತ್ವರಿತವಾಗಿ ಮುಗಿಯುವ ಭರಾಟೆಗೆ ಮಣಿದರೆ ತರಗತಿ ಕಾಟಾಚಾರಕ್ಕೆ ಸರಿಯುವುದು.

ಇದು ವಿದ್ಯುನ್ಮಾನ ಯುಗ. ತರಗತಿಯಲ್ಲಿ ಶಿಕ್ಷಕರು ಧಾರಾಳವಾಗಿಯೇ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಆಗ ಪಾಠಗಳಲ್ಲಿ ಇನ್ನಷ್ಟು ಅಚ್ಚರಿ, ಕುತೂಹಲಗಳನ್ನು ತುಂಬಬಹುದು. ತರಗತಿಯಲ್ಲಿ ಪ್ರಶ್ನೋತ್ತರ, ಚರ್ಚೆಗಳು ನಡೆದರೆ ವಿದ್ಯಾರ್ಥಿಗಳಿಗೆ ಸರಾಗವಾಗಿಯೇ ಪಾಠ ನಿಲುಕೀತು. ಗುರು– ಶಿಷ್ಯ ಇಬ್ಬರಲ್ಲೂ ಧನ್ಯತಾಭಾವ ಮೂಡುವುದು.

ವೈವಿಧ್ಯಮಯ ಬೋಧನಾಕ್ರಮ ಕಲಿಕಾರ್ಥಿ ವೃಂದಕ್ಕೆ ಇಷ್ಟವಾಗುತ್ತದೆ. ಏಕೆಂದರೆ ಒಬ್ಬೊಬ್ಬರೂ ಅರಿಯುವ ಕ್ರಮ ಭಿನ್ನ ಭಿನ್ನ. ವಿದ್ಯಾರ್ಥಿಗಳಿಗೆ ಸಮರ್ಥ ಬೋಧನೆ ತಲುಪಿದಾಗಲೇ ಬೋಧಕರು ಪಡೆದ ಬಿ.ಇಡಿ., ಎಂ.ಇಡಿ. ಪದವಿಗಳ ಸಾರ್ಥಕ್ಯ. ಬೋಧನಾ ಪರಿಕರಗಳೇ ಪ್ರಧಾನವಲ್ಲ. ಸೀಮೆಸುಣ್ಣ, ಕಪ್ಪುಹಲಗೆಯಿಂದಲೇ ಶಿಕ್ಷಕರು ಅದ್ಭುತ ಬೋಧನಾ ಕೌಶಲ ಸಾಧಿಸಬಹುದು. ನಿಂತೇ ಪಾಠ ಮಾಡಬೇಕಿಲ್ಲ. ತರಗತಿಯಲ್ಲಿ ಆಗೊಮ್ಮೆ ಈಗೊಮ್ಮೆ ಶತಪಥ ಹಾಕಿದರೆ ಎಲ್ಲ ವಿದ್ಯಾರ್ಥಿಗಳನ್ನೂ ಗಮನಿಸುವ ಅವಕಾಶವಾದೀತು.

ಶಿಕ್ಷಕರು ತಾವು ಕೂರುವ ಆಸನವನ್ನು ಎಲ್ಲ ವಿದ್ಯಾರ್ಥಿಗಳಿಗೂ ಕಾಣಿಸುವಂತೆ ಇರಿಸುವುದು ಅಗತ್ಯ. ತರಗತಿಯ ಸುತ್ತಮುತ್ತಲಿನ ವಾತಾವರಣ ಶಾಂತವಾಗಿರಬೇಕು. ಆಗ ತರಗತಿಯು ಬೋಧಕರು ಹಾಗೂ ವಿದ್ಯಾರ್ಥಿಗಳು ಇಬ್ಬರ ಪಾಲಿಗೂ ಹೊಸದು ಕಲಿಯುವ ನೆಲೆಯಾದೀತು.

ವಾಚಕರ ವಾಣಿ

ಕೃತಿಗಳ ಜೀರ್ಣೋದ್ಧಾರವಾಗಲಿ

ಒಂದು ಸ್ಮಾರಕವೋ ದೇವಸ್ಥಾನವೋ ಶಿಥಿಲಗೊಂಡು 'ಇಲ್ಲವಾಗುತ್ತದೆ' ಎನ್ನುವುದನ್ನು ಗಮನಿಸಿ, ಅದನ್ನು ಮತ್ತೆ ಸದೃಢ ಮಾಡುವ ಕೆಲಸ ಕೈಗೆತ್ತಿಕೊಂಡು ಅದರ ಜೀರ್ಣೋದ್ಧಾರಕ್ಕೆ ಸರ್ಕಾರ ಮುಂದಾಗುವುದು ಸಾಮಾನ್ಯ. ಈ ಪ್ರಕ್ರಿಯೆಯನ್ನು ಇಪ್ಪತ್ತನೇ ಶತಮಾನದಲ್ಲಿ ರಚಿತವಾದ ಸಾಹಿತ್ಯ ಕೃತಿಗಳಿಗೂ ಇಂದು ಅನ್ವಯ ಮಾಡಬೇಕಿದೆ. ಶಿವರಾಮ ಕಾರಂತ, ಕುವೆಂಪು, ಅನಕೃ, ತರಾಸು, ಮಾಸ್ತಿ, ಬಸವರಾಜ ಕಟ್ಟೀಮನಿ, ಬೀಚಿ, ನಿರಂಜನ, ತ್ರಿವೇಣಿ ಹೀಗೆ ಅನೇಕ ಸಾಹಿತಿಗಳು ಅಮೂಲ್ಯ ಕೃತಿಗಳನ್ನು ರಚಿಸಿ ಅಂದಿನ ಯುವಜನಾಂಗದ ಬದುಕಿಗೆ ಮಾರ್ಗದರ್ಶಿಯಾದರು, ಉದಯೋನ್ಮುಖ ಲೇಖಕರಿಗೆ ಸ್ಫೂರ್ತಿಯಾದರು. ಆ ಕೃತಿಗಳು ಇಂದೂ ಪ್ರಸ್ತುತ. ಅವುಗಳಲ್ಲಿ ಜನರಿಗೆ ಸಿಗದಂತೆ ಆಗಿರುವ ಕೃತಿಗಳ ಜೀರ್ಣೋದ್ಧಾರ ಮಾಡುವಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಗ್ರಪಾತ್ರ ವಹಿಸಬೇಕು. ಇದಕ್ಕೆ ಸರ್ಕಾರ ಕೈಜೋಡಿಸಬೇಕು.

ಹಿಂದೆ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯ ಅವರು ಎರಡು ರೂಪಾಯಿ ಸುಲಭ ಬೆಲೆಯಲ್ಲಿ 'ಕುಮಾರವ್ಯಾಸ ಭಾರತ'ವು ಮನೆ ಮನೆ ತಲುಪುವಂತೆ ಮಾಡಿ, ಗದುಗಿನ ನಾರಣಪ್ಪನ ಕೃತಿಗೆ ಮರುಜೀವ ಕೊಟ್ಟರು. ಇದಕ್ಕೆ ಪೂರಕವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಊರು ಊರಲ್ಲಿ ಸಂಸ್ಕೃತಿ ಪ್ರಚಾರಕ್ಕಾಗಿ ಉಪನ್ಯಾಸಗಳನ್ನು ಏರ್ಪಡಿಸುವ ಮಹತ್ ಕಾರ್ಯ ಕೈಗೊಂಡಿತು. ಇಂದು ಅದೇ ಮಾದರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯ ಕೃತಿಗಳ ಪರಿಚಯ ಉಪನ್ಯಾಸ ಏರ್ಪಡಿಸಿ, ಅವುಗಳನ್ನು ಓದುವ ಕುತೂಹಲ ಕೆರಳಿಸಿದರೆ, ಆ ಪುಸ್ತಕ ಓದುವ ಆಸಕ್ತಿ ಯುವಪೀಳಿಗೆಯಲ್ಲಿ ಹುಟ್ಟುತ್ತದೆ. ಬೇಡಿಕೆ ಬಂದರೆ ಪುಸ್ತಕ ಪೂರೈಸುವ ಕಾರ್ಯವನ್ನು ಪ್ರಕಾಶಕರು ಮಾಡುತ್ತಾರೆ. ಇದಕ್ಕೆ ಬೆಂಬಲವಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯೂ ಪುಸ್ತಕಗಳನ್ನು ಖರೀದಿಸಿ ವಾಚನಾಲಯಗಳಿಗೆ ಒದಗಿಸುತ್ತದೆ. ಇದು ಸುಸಂಸ್ಕೃತ ಪೀಳಿಗೆಯ ಸೃಷ್ಟಿಗೆ ಕಾರಣವಾಗುತ್ತದೆ.

ಸತ್ಯಬೋಧ, ಬೆಂಗಳೂರು

ಅಧಿಕಾರಿಗಿಲ್ಲ ವಿಶೇಷ 'ಉಪಚಾರ'!

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಕೇಳಿಬಂದಿರುವ ಡಿವೈಎಸ್ಪಿ ಶಾಂತಕುಮಾರ್ ಅವರು, ಸಿಐಡಿ ಅಧಿಕಾರಿಗಳು ನಡೆಸಿದ ವಿಚಾರಣೆಯ ಸಂದರ್ಭದಲ್ಲಿ ಯಾವುದೇ ಮಾಹಿತಿಯ ಬಗ್ಗೆ ಬಾಯಿಬಿಟ್ಟಿಲ್ಲ ಎಂಬ ಸುದ್ದಿ (ಪ್ರ.ವಾ., ಮೇ 23) ಓದಿ ನನಗೆ ಬಾಲ್ಯದ ವಿಜ್ಞಾನ ಪಾಠದಲ್ಲಿಯ 'ಸಜಾತಿಯ ಧ್ರುವಗಳು ಒಂದನ್ನೊಂದು ವಿಕರ್ಷಿಸುತ್ತವೆ' ಎಂಬ ತತ್ವ ನೆನಪಾಯಿತು. ತಮ್ಮ ವಿಶೇಷ 'ಉಪಚಾರ'ದಿಂದ ಎಂತೆಂತಹ ಆರೋಪಿಗಳಿಂದಲೋ ಬಾಯಿಬಿಡಿಸುವ ಕಲೆಯಲ್ಲಿ ನಿಸ್ಸೀಮರಾಗಿರುವ ಪೊಲೀಸರು ತಮ್ಮದೇ ಇಲಾಖೆಯ ಅಧಿಕಾರಿಯ ಮೇಲೆ ಅಂತಹ ವಿಶೇಷ ಉಪಚಾರವನ್ನು ಪ್ರಯೋಗಿಸಿಲ್ಲವೆಂದು ಕಾಣುತ್ತದೆ. ಅಷ್ಟರಮಟ್ಟಿಗೆ ಆ ಅಧಿಕಾರಿ ಬಚಾವಾಗಿದ್ದಾರೆ. ಮುಂದೆ ಪ್ರಕರಣ ತಿರುವು ಪಡೆದಂತೆ ತಾನಾಗಿಯೇ ಅಥವಾ ಉಪಚಾರದ ನಂತರ ಬಾಯಿಬಿಡುವ ಸಂಭವನೀಯತೆಯನ್ನು ತಳ್ಳಿಹಾಕಲಾಗದು.

ವೆಂಕಟೇಶ್ ಮುದಗಲ್, ಕಲಬುರಗಿ

ವಿಳಂಬ ನೀತಿಯೂ ಭ್ರಷ್ಟಾಚಾರವೇ

ಕಳೆದ ವರ್ಷದ ಫೆಬ್ರುವರಿಯಲ್ಲಿ ನಡೆದ ಎಫ್‌ಡಿಎ ಪರೀಕ್ಷೆಯ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗವು ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಕೇವಲ ಏಳು ತಿಂಗಳ ಅಂತರದಲ್ಲಿ ಬಿಡುಗಡೆ ಮಾಡಿತ್ತು. ಆದರೆ ಆ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆದ ಎಸ್‌ಡಿಎ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಈವರೆಗೂ ಬಿಡುಗಡೆ ಮಾಡದೆ ಮುಂದೂಡುತ್ತಿದೆ. ಇದರ ಹಿಂದಿನ ಉದ್ದೇಶವೇನು ಎಂಬುದು ಅರ್ಥವಾಗುತ್ತಿಲ್ಲ.

ಸುಮಾರು ಎಂಟು ಲಕ್ಷ ವಿದ್ಯಾರ್ಥಿಗಳು ಬರೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನವನ್ನು ಬರೀ ಒಂದು ತಿಂಗಳಿನಲ್ಲಿ ಪೂರ್ಣಗೊಳಿಸಿ ಫಲಿತಾಂಶವನ್ನು ಪ್ರಕಟಿಸಬಹುದಾದರೆ, ಒಂದೂವರೆ ಲಕ್ಷ ಅಭ್ಯರ್ಥಿಗಳಷ್ಟೇ ಬರೆದಿರುವ ಎಸ್‌ಡಿಎ ಪರೀಕ್ಷಾ ಫಲಿತಾಂಶಕ್ಕಾಗಿ ವರ್ಷಾನುಗಟ್ಟಲೆ ತೆಗೆದುಕೊಳ್ಳುವುದು ಇಚ್ಛಾಶಕ್ತಿಯ ಕೊರತೆಯನ್ನು ತೋರಿಸುತ್ತದೆ. ಇದು ಕೂಡ ಒಂದು ರೀತಿ ಭ್ರಷ್ಟಾಚಾರವೇ ಆಗಿದೆ.

ಸುಜ್ಜಲೂರು ವಿಜಿ, ಟಿ.ನರಸೀಪುರ

ಸೌಹಾರ್ದ ಮೂಡಿಸುವ ಹೇಳಿಕೆ ಬರಲಿ

ಕರ್ನಾಟಕದಲ್ಲಿ ಈಗಾಗಲೇ ಹೊಗೆಯಾಡುತ್ತಿರುವ ಕೋಮು ದ್ವೇಷಕ್ಕೆ ಮತ್ತಷ್ಟು ತುಪ್ಪ ಸುರಿದಂತೆ 'ಇಸ್ಲಾಂ, ಕ್ರಿಶ್ಚಿಯನ್ ಧರ್ಮದವರಿಂದ ಅಪಾಯ ಎದುರಾಗಿದೆ' ಎಂದು ಹರಿಹರಪುರದ ಶಾರದಾ ಲಕ್ಷ್ಮೀನರಸಿಂಹಪೀಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಹೇಳಿರುವುದು (ಪ್ರ.ವಾ., ಮೇ 23) ಸರಿಯಲ್ಲ. ಜಗತ್ತಿನಲ್ಲಿ ಭಾರತದ ಸಂಸ್ಕೃತಿ ಅತಿ ಪ್ರಾಚೀನವಾದುದು, ಆದರೆ ಅದನ್ನು ಒಪ್ಪಿಕೊಳ್ಳದಿರುವುದು ವಿದೇಶಿ ಸಂಸ್ಕೃತಿ ಎಂದು ಅವರು ಹೇಳಿದ್ದಾರೆ. ಹಿಂದೂ ಸಂಸ್ಕೃತಿ ಸದೃಢವಾಗಿದ್ದಲ್ಲಿ ಅನ್ಯ ಧರ್ಮದವರ ಬಾಹ್ಯ ಹಾಗೂ ಆಂತರಿಕ ದಾಳಿಗಳಿಗೆ ಹೆದರುವ ಅವಶ್ಯಕತೆಯಿಲ್ಲ. ಭಾರತವು ಸ್ವತಂತ್ರಗೊಂಡು 75 ವರ್ಷಗಳು ಸಂದರೂ ದೇಶದಲ್ಲಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮದವರು ಇನ್ನೂ ಅಲ್ಪಸಂಖ್ಯಾತರೆ. ಅವರಿಂದ ದೇಶಕ್ಕೆ ಅಪಾಯ ಎಂದು ಹೇಳಿರುವುದು ಸತ್ಯಕ್ಕೆ ದೂರವಾದುದು. ದೇಶದಲ್ಲಿ ಸರ್ವಧರ್ಮಗಳೂ ನೆಲೆಗೊಂಡಿವೆ. ಧರ್ಮ- ಧರ್ಮಗಳ ನಡುವೆ ಸೌಹಾರ್ದ ಮೂಡುವಂತಹ ಹೇಳಿಕೆಗಳು ಧರ್ಮನಿಷ್ಠರಿಂದ ಬರಬೇಕೇ ವಿನಾ ಅದನ್ನು ಕದಡುವಂತಹ ಹೇಳಿಕೆಗಳಲ್ಲ.

ಎಲ್.ಚಿನ್ನಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುಎಪಿಎ ಪರಿಷ್ಕರಣೆಗೆ ಕೂಗು

• ಹಮೀದ್ ಕೆ., ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯು (ಯುಎಪಿಎ) ದುರುಪಯೋಗ ಆಗುತ್ತಿದೆ ಮತ್ತು ಈ ಕಾಯ್ದೆಯನ್ನು ಈಗ ಇರುವ ಸ್ವರೂಪದಲ್ಲಿ ಉಳಿಸಿಕೊಳ್ಳಬಾರದು ಎಂಬ ಕೂಗು ಬಲವಾಗಿಯೇ ಕೇಳಿ ಬಂದಿದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮದನ್ ಲೋಕೂರ್ ಅವರು ಈ ಕಾಯ್ದೆಯ ದುರುಪಯೋಗದ ಬಗ್ಗೆ ಶನಿವಾರ ನಡೆದ 'ಸೆಡಿಶನ್ ಸೆ ಆಜಾದಿ' ಎಂಬ ಕಾರ್ಯಕ್ರಮದಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಯುಎಪಿಎಯ ದುಷ್ಪರಿಣಾಮಗಳ ಕುರಿತು 2021ರ ಜುಲೈನಲ್ಲಿ ನಡೆದ ವರ್ಚುವಲ್ ಸಮಾವೇಶದಲ್ಲಿ ಮಾತನಾಡಿದ್ದ ಅವರು, ಈ ಕಾಯ್ದೆಯ ಅಡಿಯಲ್ಲಿ ಬಂಧಿತರಾದ ಪತ್ರಕರ್ತರು, ಸಾಮಾಜಿಕ ಹೋರಾಟಗಾರರು ಮತ್ತು ನಾಗರಿಕರ ಕುಟುಂಬದ ಸದಸ್ಯರು ಅನುಭವಿಸುವ ಮಾನಸಿಕ ಹಿಂಸೆಯನ್ನು ನ್ಯಾಯಾಲಯ, ಸರ್ಕಾರ ಮತ್ತು ಸಮಾಜ ಗಣನೆಗೆ ತೆಗೆದುಕೊಳ್ಳಬೇಕು ಎಂದಿದ್ದರು.

ಯುಎಪಿಎ ದುರುಪಯೋಗ ಆಗಬಹುದು ಎಂಬುದು ಸಾಬೀತಾಗಿದೆ. ಹಾಗಾಗಿ, ಈ ಕಾಯ್ದೆಯನ್ನು ಹೇಗೆ ಬಳಸಬೇಕು ಎಂಬ ಬಗ್ಗೆ ನ್ಯಾಯಾಲಯಗಳು ಮಾರ್ಗಸೂಚಿ ಸಿದ್ಧಪಡಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದೀಪಕ್ ಗುಪ್ತಾ ಅದೇ ವರ್ಚುವಲ್ ಕಾಯಕ್ರಮದಲ್ಲಿ ಪ್ರತಿಪಾದಿಸಿದ್ದಾರೆ. ಯುಎಪಿಎ ಅಡಿ ಬಂಧಿತರಾಗಿ ಜೈಲಿನಲ್ಲಿ ಮೃತಪಟ್ಟ 84 ವರ್ಷದ ಫಾ. ಸ್ಟ್ಯಾನ್ ಸ್ವಾಮಿ ಪ್ರಕರಣವನ್ನು ಅವರು ಉಲ್ಲೇಖಿಸಿದ್ದಾರೆ. 'ನಾವು ಮನುಷ್ಯರೇ' ಎಂದು ಪ್ರಶ್ನಿಸಿರುವ ಅವರು, 'ಯುಎಪಿಎ ಈಗ ಇರುವ ಸ್ವರೂಪದಲ್ಲಿ ಮುಂದುವರಿಯುವುದು ಸಾಧ್ಯವಿಲ್ಲ' ಎಂದಿದ್ದಾರೆ.

ಈ ಕಾಯ್ದೆ ಅಡಿ ಬಂಧಿತರಾಗಿ ಬಹುಕಾಲ ಜೈಲು ಸೇರಿ ಜೀವನವೇ ಹಾಳಾದವರ ಬಗ್ಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಫ್ತಾಬ್ ಆಲಂ ಮಾತನಾಡಿದ್ದಾರೆ. ಈ ಕಾಯ್ದೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ತಪ್ಪಿತಸ್ಥರು ಎಂದು ಸಾಬೀತಾಗುವ ಪ್ರಮಾಣ ಅತ್ಯಲ್ಪ ಎಂಬುದರತ್ತ ಅವರು ಬೊಟ್ಟು ಮಾಡಿದ್ದಾರೆ. ಯುಎಪಿಎಯನ್ನು ನ್ಯಾಯಾಂಗದ ವಿಮರ್ಶೆಗೆ ಒಳಪಡಿಸಲು ಸೀಮಿತ ಅವಕಾಶವಷ್ಟೇ ಇದೆ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ಹೇಳಿದ್ದಾರೆ. ಸಾಂವಿಧಾನಿಕ ನ್ಯಾಯಾಲಯಗಳ ಜಾಮೀನು ನೀಡುವ ಅಧಿಕಾರವನ್ನೇ ಈ ಕಾಯ್ದೆ ಕಸಿದುಕೊಂಡಿದ್ದು, ಇದು ಸಂವಿಧಾನಬಾಹಿರ ಎಂದು ಅವರು ಪ್ರತಿಪಾದಿಸಿದ್ದಾರೆ.

ರಾಜಕೀಯ ವಲಯದಿಂದಲೂ ಈ ಕಾಯ್ದೆಗೆ ವಿರೋಧ ವ್ಯಕ್ತವಾಗಿದೆ. 'ಯುಎಪಿಎ ರದ್ದುಪಡಿಸಬೇಕು, 2019ರಲ್ಲಿ ತಿದ್ದುಪಡಿ ಕಾಯ್ದೆಯು ಸಂಸತ್ತಿನಲ್ಲಿ ಚರ್ಚೆಯಾದಾಗ ವಿರೋಧಿಸಿದ್ದೆ' ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಇತ್ತೀಚೆಗೆ ಹೇಳಿದ್ದಾರೆ.

ಈ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೂರು ಅರ್ಜಿಗಳು ದಾಖಲಾಗಿವೆ. ಕಾಯ್ದೆಯ 35 ಮತ್ತು 36ನೇ ಸೆಕ್ಷನ್‌ಗಳನ್ನು ರದ್ದುಪಡಿಸಬೇಕು ಎಂದು ಕೋರಿ ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಸಂಘಟನೆಯು ಒಂದು ಅರ್ಜಿ ಸಲ್ಲಿಸಿದೆ. ಸಜಲ್ ಅವಸ್ಥಿ ಎಂಬವರು ಇನ್ನೊಂದು ಅರ್ಜಿ ಸಲ್ಲಿಸಿದ್ದಾರೆ. ಈ ಎರಡೂ ಅರ್ಜಿಗಳು 2019ರಲ್ಲಿ ಸಲ್ಲಿಕೆಯಾಗಿವೆ. ಈ ಅರ್ಜಿಯ ಆಧಾರದಲ್ಲಿ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಲಾಗಿತ್ತು.

ಕಾಯ್ದೆಯಲ್ಲಿರುವ ವಿವಿಧ ಅವಕಾಶಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಭಾರತೀಯ ನಾಗರಿಕ ಸೇವೆಯ ಹಲವು ನಿವೃತ್ತ ಅಧಿಕಾರಿಗಳು ಒಟ್ಟಾಗಿ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್‌ಗೆ 2021ರ ನವೆಂಬರ್‌ನಲ್ಲಿ ಸಲ್ಲಿಸಿದ್ದಾರೆ. ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ನೇತೃತ್ವದ ಪೀಠವು ಅರ್ಜಿಯ ವಿಚಾರಣೆ ನಡೆಸಿ, ಕೇಂದ್ರಕ್ಕೆ ನೋಟಿಸ್ ನೀಡಿದೆ. ಇದೇ ವಿಷಯದ ಬಗ್ಗೆ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳನ್ನು ಒಟ್ಟು ಸೇರಿಸಿ ವಿಚಾರಣೆ ನಡೆಸುವಂತೆ ನಿರ್ದೇಶನ ನೀಡಿದೆ.

ಶೇ 55ರಷ್ಟು ಪ್ರಕರಣಗಳು ವಜಾ



ದೇಶದ್ರೋಹ ಕಾನೂನಿನ ನಂತರ ಸರ್ಕಾರವು ಅತಿಹೆಚ್ಚು ದುರ್ಬಳಕೆ ಮಾಡಿಕೊಳ್ಳುತ್ತಿರುವ ಕಾನೂನು, 'ಯುಎಪಿಎ' ಎಂಬುದು ವಿರೋಧ ಪಕ್ಷಗಳು ಮತ್ತು ಸಾಮಾಜಿಕ ಸಂಘಟನೆಗಳ ಆರೋಪ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ಅಸ್ತಿತ್ವಕ್ಕೆ ಬಂದ ನಂತರ ಈ ಕಾಯ್ದೆಯ ದುರ್ಬಳಕೆ ಹೆಚ್ಚಾಗಿದೆ ಎಂಬ ಆರೋಪವೂ ಇದೆ. ಈ ಕಾಯ್ದೆಯಡಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದ ದತ್ತಾಂಶಗಳೂ ಈ ಆರೋಪಕ್ಕೆ ಪುಷ್ಟಿ ನೀಡಿವೆ. 2016ರಿಂದ 2020ರ ಅವಧಿಯಲ್ಲಿ ಈ ಕಾಯ್ದೆ ಅಡಿ ದಾಖಲಾದ ಪ್ರಕರಣಗಳಲ್ಲಿ ಶೇ 55ರಷ್ಟು ತನಿಖೆ, ವಿಚಾರಣೆಯ ಹಂತದಲ್ಲೇ ವಜಾ ಆಗಿವೆ.

2016ರಿಂದ 2020ರ ಅವಧಿಯಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿ ಪೊಲೀಸರು ಈ ಕಾಯ್ದೆ ಅಡಿ ಒಟ್ಟು 5,003 ಪ್ರಕರಣಗಳನ್ನು ದಾಖಲಿಸಿದ್ದಾರೆ. ಇವುಗಳಲ್ಲಿ 2,479 ಪ್ರಕರಣಗಳನ್ನು ಸಾಕ್ಷ್ಯಗಳ ಕೊರತೆ, ತಪ್ಪಾಗಿ ಪ್ರಕರಣ ದಾಖಲಾಗಿದೆ ಎಂಬ ಕಾರಣಗಳನ್ನು ನೀಡಿ ಪೊಲೀಸರೇ ಕೈಬಿಟ್ಟಿದ್ದಾರೆ. ಒಟ್ಟು ಪ್ರಕರಣಗಳಲ್ಲಿ ಪೊಲೀಸರೇ ಹೀಗೆ ವಜಾ ಮಾಡಿದ ಪ್ರಕರಣಗಳ ಪ್ರಮಾಣ ಶೇ 49.6ರಷ್ಟು. ಅಂದರೆ ಅರ್ಧದಷ್ಟು ಪ್ರಕರಣಗಳು ತನಿಖೆಯ ಹಂತದಲ್ಲೇ ಮುಗಿದುಹೋಗುತ್ತವೆ.

ಈ ಅವಧಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಮತ್ತು ಅದಕ್ಕೂ ಹಿಂದಿನ ವರ್ಷಗಳಿಂದ ಬಾಕಿಯಿದ್ದ ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ವಜಾ ಆದ ಪ್ರಕರಣಗಳ ಸಂಖ್ಯೆ 271. ಈ ಅವಧಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಹೀಗೆ ವಜಾ ಆದ ಪ್ರಕರಣಗಳ ಪ್ರಮಾಣ ಶೇ 5.4ರಷ್ಟು ಮಾತ್ರ. ಈ ಅವಧಿಯಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಪೊಲೀಸರೇ ಕೈಬಿಟ್ಟ ಮತ್ತು ನ್ಯಾಯಾಲಯಗಳು ವಜಾ ಮಾಡಿದ ಪ್ರಕರಣಗಳ ಪ್ರಮಾಣ ಶೇ 55ರಷ್ಟು. ಕಾಯ್ದೆಯನ್ನು ಅನ್ವಯ ಮಾಡಲು ಸಾಧ್ಯವೇ ಇಲ್ಲದ ಪ್ರಕರಣಗಳಲ್ಲೂ ಈ ಕಾಯ್ದೆಯನ್ನು ಅನ್ವಯ ಮಾಡಲಾಗುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ. ಇನ್ನು ಈ ಅವಧಿಯಲ್ಲಿ ಈ ಕಾಯ್ದೆಯ ಅಡಿ ಶಿಕ್ಷೆ ಘೋಷಣೆಯಾದ ಪ್ರಕರಣಗಳ ಸಂಖ್ಯೆ 105 ಮಾತ್ರ. ಈ ಅವಧಿಯಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 2ರಷ್ಟು ಮಾತ್ರ.

ಕಾನೂನುಬಾಹಿರ ಚಟುವಟಿಕೆ...

'ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಂಘಟನೆಯ ಕಾರ್ಯಚಟುವಟಿಕೆಗಳು ಕಾನೂನುಬಾಹಿರ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅಂತಹ ಸಂಘಟನೆಯನ್ನು 'ಕಾನೂನುಬಾಹಿರ ಸಂಘಟನೆ' ಎಂದು ಘೋಷಿಸಬಹುದು. ಆ ಅಧಿಸೂಚನೆಯು ರಾಜ್ಯಪತ್ರದಲ್ಲಿ ಪ್ರಕಟವಾಗಬೇಕು' ಎಂದು ಯುಎಪಿಎ ಕಾಯ್ದೆಯ ಮೂರನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಕಾನೂನುಬಾಹಿರ ಚಟುವಟಿಕೆಗಳು ಯಾವುವು ಎಂಬುದನ್ನು ಇದೇ ಕಾಯ್ದೆಯ 10ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. 'ಕಾನೂನುಬಾಹಿರ ಎಂದು ಘೋಷಿಸಲಾದ ಸಂಘಟನೆಯ ಸದಸ್ಯನಾಗಿ ಮುಂದುವರಿಯುವ, ಸಂಘಟನೆಯನ್ನು ಉತ್ತೇಜಿಸುವ ಮತ್ತು ಸಂಘಟನೆಯಿಂದ ಪ್ರೇರಿತನಾಗಿ ಯಾವುದೇ ಕೃತ್ಯ ಎಸಗುವ ವ್ಯಕ್ತಿಯನ್ನು ಶಿಕ್ಷೆಗೆ ಗುರಿ ಮಾಡಬಹುದಾಗಿದೆ. ಪರವಾನಗಿ ಇಲ್ಲದ ಬಂದೂಕು/ಪಿಸ್ತೂಲು, ಮದ್ದುಗುಂಡುಗಳು, ಸ್ಫೋಟಕ ಅಥವಾ ಯಾವುದೇ ಸಲಕರಣೆ ಅಥವಾ ಸಾಮೂಹಿಕ ವಿನಾಶ ಮಾಡಲು ಸಾಧ್ಯವಿರುವಂತಹ ವಸ್ತುಗಳನ್ನು ಹೊಂದಿರುವ ವ್ಯಕ್ತಿಯ ವಿರುದ್ಧ ಈ ಕಾಯ್ದೆಯ ಅಡಿ ಪ್ರಕರಣ ದಾಖಲಿಸಬಹುದು. ಮಾನವ ಜೀವಕ್ಕೆ ಹಾನಿಯಾಗುವಂತಹ ಅಥವಾ ಗಾಯವಾಗುವಂತಹ ಅಥವಾ ಯಾವುದೇ ಸ್ವತ್ತಿಗೆ ಹಾನಿ ಮಾಡುವಂತಹ ಕೃತ್ಯ ಎಸಗಿದ ವ್ಯಕ್ತಿಯ ವಿರುದ್ಧ ಈ ಕಾಯ್ದೆಯ ಅಡಿ ಪ್ರಕರಣ ದಾಖಲಿಸಬಹುದು' ಎಂದು ಈ ಕಾಯ್ದೆಯ 10ನೇ ಸೆಕ್ಷನ್‌ನ 6ನೇ ಭಾಗದಲ್ಲಿ ವಿವರಿಸಲಾಗಿದೆ.

ಕೆಲವು ಪ್ರಕರಣಗಳು

ಸಿದ್ದಿಕ್ ಕಪ್ಪನ್

2020ರ ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶ ಹಾಥರಸ್‌ನಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣದ ವರದಿಗಾರಿಕೆಗೆ ತೆರಳುತ್ತಿದ್ದ ಕೇರಳದ ಪತ್ರಕರ್ತ ಸಿದ್ದಿಕ್ ಕಪ್ಪನ್ ಅವರನ್ನು ಮಾರ್ಗಮಧ್ಯೆ ಬಂಧಿಸಲಾಗಿತ್ತು. ಶಾಂತಿ ಕದಡುವ ಸಂಚಿನ ಭಾಗವಾಗಿ ಅವರು ಹಾಥರಸ್‌ಗೆ ತೆರಳುತ್ತಿದ್ದಾರೆ ಎಂಬ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಪಾಪ್ಯುಲರ್ ಫ್ರಂಟ್ ಸಂಘಟನೆ ಜತೆ ಗುರುತಿಸಿಕೊಂಡಿದ್ದ ಆರೋಪದಲ್ಲಿ ಇತರ ಎಂಟು ಜನರ ಹೆಸರನ್ನೂ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿತ್ತು.

ಫವಾದ್ ಶಾ

ಕಾಶ್ಮೀರದ ಪತ್ರಕರ್ತ ಫವಾದ್ ಶಾ ವಿರುದ್ಧ ಇದೇ ಫೆಬ್ರುವರಿಯಲ್ಲಿ ಯುಎಪಿಎ ಅಡಿಯಲ್ಲಿನ ಎರಡು ಸೇರಿದಂತೆ ಒಟ್ಟು ಮೂರು ಪ್ರಕರಣಗಳನ್ನು ದಾಖಲಿಸಲಾಗಿತ್ತು. ಒಂದು ಪ್ರಕರಣದಲ್ಲಿ ಜಾಮೀನು ಸಿಗುತ್ತಿದ್ದಂತೆಯೇ, ಮತ್ತೊಂದು ಪ್ರಕರಣದಲ್ಲಿ ಅವರು ಜೈಲು ಸೇರುತ್ತಿದ್ದರು. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವ ಹಾಗೂ ಕ್ರಿಮಿನಲ್ ಉದ್ದೇಶದ ದೇಶವಿರೋಧಿ ಕಂಟೆಂಟ್ ಅನ್ನು ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ ಎಂಬುದು ಫವಾದ್ ವಿರುದ್ಧ ಇರುವ ಆರೋಪ.

ಸಲೀಂ ಖಾನ್

2020ರ ಫೆಬ್ರುವರಿಯಲ್ಲಿ ದೆಹಲಿಯಲ್ಲಿ ಗಲಭೆಗೆ ಸಂಚು ರೂಪಿಸಿದ ಆರೋಪದ ಮೇಲೆ ಸಲೀಂ ಖಾನ್ ಸೇರಿದಂತೆ ಹಲವರ ವಿರುದ್ಧ ಯುಎಪಿಎ ಪ್ರಕರಣ ದಾಖಲಾಗಿತ್ತು. ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಹಾಗೂ ರಾಷ್ಟ್ರೀಯ ಪೌರತ್ವದ ನೋಂದಣಿ (ಎನ್‌ಆರ್‌ಸಿ) ವಿರೋಧಿ ಆಂದೋಲನದ ವೇಳೆ ಈ ಗಲಭೆ ನಡೆದಿತ್ತು. ಪೊಲೀಸರು ದಾಖಲಿಸಿದ್ದ ಎಫ್‌ಐಆರ್‌ನಲ್ಲಿ ಜೆಎನ್‌ಯು ಮಾಜಿ ವಿದ್ಯಾರ್ಥಿ ನಾಯಕ ಉಮರ್ ಖಾಲಿದ್ ಸೇರಿ ಹಲವರ ಹೆಸರುಗಳಿದ್ದವು. ಈ ಆರೋಪಿಗಳು ಚಳವಳಿಗೆ ಕರೆ ನೀಡುವ ಮೂಲಕ ಗಲಭೆ ಸೃಷ್ಟಿಯಾಗಲು ಹಾಗೂ ಕೋಮು ಭಾವನೆ ಕೆರಳಿಸಲು ಉದ್ದೇಶಿಸಿದ್ದರು ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿತ್ತು. ನಾವು ಹೋರಾಡಿದ್ದು ದಬ್ಬಾಳಿಕೆಯ ಕಾಯ್ದೆಯ ವಿರುದ್ಧ ಮಾತ್ರ ಎಂದು ಉಮರ್ ಖಾಲಿದ್ ಸೋಮವಾರವಷ್ಟೇ ದೆಹಲಿ ಹೈಕೋರ್ಟ್‌ನಲ್ಲಿ ವಾದಿಸಿದ್ದಾರೆ.

ಅಖಿಲ್ ಗೊಗೊಯಿ

ಅಸ್ಸಾಂನಲ್ಲಿ ಸಿಎಎ ವಿರೋಧಿ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಶಾಸಕ ಅಖಿಲ್ ಗೊಗೊಯಿ ವಿರುದ್ಧ ಪೊಲೀಸರು ಯುಎಪಿಎ ಅಡಿ ಪ್ರಕರಣ ದಾಖಲಿಸಿದ್ದರು. ಆದರೆ ಎನ್‌ಐಎ ವಿಶೇಷ ಕೋರ್ಟ್, ಇವರ ಮೇಲಿನ ಈ ಆರೋಪವನ್ನು ಕೈಬಿಟ್ಟಿತ್ತು.

ಕೊಯಮತ್ತೂರು ಪ್ರಕರಣ

ಮತಾಂತರಕ್ಕೆ ಒಪ್ಪದ ಕುಮಾರೇಶನ್ ಎಂಬ ವ್ಯಕ್ತಿಯ ಕೊಲೆಗೆ ಸಂಚು ರೂಪಿಸಿದ ಆರೋಪದ ಮೇಲೆ ಐದು ಜನರನ್ನು ಇದೇ ಮಾರ್ಚ್‌ನಲ್ಲಿ ತಮಿಳುನಾಡಿನ ಕೊಯಮತ್ತೂರಿನಲ್ಲಿ ಬಂಧಿಸಿ ಯುಎಪಿಎ ಅಡಿ ಪ್ರಕರಣ ದಾಖಲು ಮಾಡಲಾಗಿತ್ತು.

ಕುಮಾರೇಶನ್ ಅವರ ಮಗ ಮುಸ್ಲಿಂ ಹುಡುಗಿಯನ್ನು ವಿವಾಹವಾಗಿದ್ದರು. ಆದರೆ ಹುಡುಗಿಯ ತಾಯಿ ನೂರ್ ನಿಶಾ ಅವರು ಅಳಿಯನನ್ನು ಇಸ್ಲಾಂಗೆ ಮತಾಂತರಿಸಲು ಒತ್ತಾಯಿಸಿದ್ದರು. ಆದರೆ ಇದನ್ನು ಕುಮಾರೇಶನ್ ವಿರೋಧಿಸಿದ್ದರು. ಹೀಗಾಗಿ ಕುಮಾರೇಶನ್ ಅವರ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ಪ್ರಕರಣದಲ್ಲಿ ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಿದ ಮಾಹಿತಿಯನ್ನು ಕೊಯಮತ್ತೂರು ಪೊಲೀಸರು ಕೇಂದ್ರ ಗೃಹಸಚಿವಾಲಯಕ್ಕೆ ಕೆಲ ದಿನಗಳ ಹಿಂದೆ ಸಲ್ಲಿಸಿದ್ದಾರೆ.

ಆಧಾರ: ಎನ್‌ಸಿಆರ್‌ಬಿಯ ಭಾರತದಲ್ಲಿ ಅಪರಾಧ ವರದಿ 2016, 2017, 2018, 2019, 2020, ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ, ಪಿಟಿಐ, ಸುಪ್ರೀಂ ಕೋರ್ಟ್ ಅಬ್ಸರ್ವರ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 128

ರತಿಯನು ಮದುವೆಯಾದ ಮನ್ಮಥ

ಬ್ರಹ್ಮ ತನ್ನ ಪುತ್ರಿ ಸಂಧ್ಯಾ ಮೇಲೆಯೇ ಮೋಹ ಬರುವಂತೆ ಮಾಡಿದ ಮನ್ಮಥನಿಗೆ ಶಾಪ ಕೊಟ್ಟ ಕಥೆ ಕೇಳಿದ ನಾರದ ಸಂತೃಪ್ತನಾಗಿ, 'ಮುಂದೆ ಏನಾಯಿತೆಂಬುದನ್ನು ಹೇಳು, ನಾನು ಶ್ರದ್ಧೆಯಿಂದ ಶಿವಕಥೆಯನ್ನು ಕೇಳಲು ಸಿದ್ಧನಾಗಿರುವೆ' ಎಂದ. ಬ್ರಹ್ಮ ಮುಂದುವರೆಸಿದ.

ಶಂಕರ ಮತ್ತು ನಾನೂ ಅಂತರ್ಧಾನನಾದ ಮೇಲೆ ದಕ್ಷಬ್ರಹ್ಮನು ಹಿಂದಿನ ನನ್ನ ಮಾತನ್ನು ಸ್ಮರಿಸಿಕೊಂಡು ಮನ್ಮಥನಿಗೆ ಹೇಳಿದ 'ಎಲೈ ಮನ್ಮಥನೆ! ನನ್ನ ಮುಂದಿರುವ ಸಕಲ ಗುಣಪೂರ್ಣಳಾದ ಈ ಸುಂದರಿ ನನ್ನ ಪುತ್ರಿ. ನಿನಗೆ ಅನುರೂಪಳಾದ ಇವಳನ್ನು ಪತ್ನಿಯಾಗಿ ಸ್ವೀಕರಿಸು. ತುಂಬಾ ಕಾಂತಿಮತಿಯಾದ ಇವಳು ಸದಾ ನಿನ್ನೊಡನೆಯೇ ಇದ್ದು, ನಿನ್ನ ಆಜ್ಞೆಯಂತೆ ನಡೆವಳು' ಎಂದ.

ನಂತರ ದಕ್ಷ ತನ್ನ ಶರೀರದ ಬೆವರಿನಿಂದ ಜನಿಸಿದ ಆ ಕನ್ಯೆಗೆ 'ರತಿ' ಎಂದು ಹೆಸರನ್ನಿಟ್ಟು, ಮನ್ಮಥನಿಗೆ ಮದುವೆ ಮಾಡಿಕೊಟ್ಟ. ಇದರಿಂದ ಸುಂದರಿಯೂ ಮುನಿಗಳ ಮನಸ್ಸನ್ನೂ ಮೋಹಗೊಳಿಸುವವಳೂ ಆದಂತಹ ದಕ್ಷಪುತ್ರಿ ರತೀದೇವಿಯನ್ನು ಮನ್ಮಥ ಮದುವೆಯಾಗಿ ತುಂಬಾ ಉಲ್ಲಸಿತನಾದ. ಬಳಿಕ ತನ್ನ ಪತ್ನಿಯಾದ ರತಿಯನ್ನು ನೋಡಿ ತನ್ನ ಕಾಮಬಾಣಗಳಿಂದಲೇ ತಾನೇ ಹೊಡೆಯಲ್ಪಟ್ಟವನಾದಂತೆ ರತಿಯಲ್ಲಿ ಹೆಚ್ಚಾದ ಅನುರಾಗದಿಂದ ಮೋಹಗೊಂಡ. ಸುಂದರಿಯಾದ ರತಿ ಸಹ ಜಿಂಕೆಯಂತೆ ಚಂಚಲವಾದ ನೋಟಗಳುಳ್ಳವಳಾಗಿದ್ದಳು. ಮನೋಹರವಾದ ಮೈಮಾಟದಿಂದ ಸುಖವನ್ನುಂಟುಮಾಡುವವಳಾಗಿದ್ದಳು. ಮನ್ಮಥನಿಗೆ ರತಿಕ್ರೀಡೆಯಲ್ಲಿ ಅನುಕೂಲಳಾಗಿದ್ದಳು. ರತಿಯ ಸುಂದರವಾದ ಹುಬ್ಬುಗಳೆರಡನ್ನು ನೋಡಿ ಮನ್ಮಥ ಮತ್ತಷ್ಟು ಮೋಹಮತ್ತನಾದ. ಇದರಿಂದ ಬ್ರಹ್ಮ ತನ್ನ ಮೇಲೆ ಸೇಡು ತೀರಿಸಿಕೊಳ್ಳಲು ಉನ್ಮಾದನವೆಂಬ ಧನುಸ್ಸನ್ನೇನಾದರೂ ಈ ರತಿಯಲ್ಲಿರಿಸಿರುವನೆ – ಎಂಬ ಸಂಶಯಕ್ಕೂ ಒಳಗಾದ.

ರತೀದೇವಿಯ ಕಟಾಕ್ಷಗಳ ವೇಗವನ್ನೂ ಸೌಂದರ್ಯವನ್ನೂ ನೋಡಿದ ಮದನನಿಗೆ ತನ್ನ ಬಾಣಗಳಲ್ಲಿಯೂ ಇಂತಹ ವೇಗ ಮತ್ತು ಆಕರ್ಷಣೆ ಇಲ್ಲವೆಂದು ಭಾವಿಸಿದ. ರತಿಯ ಮಂದವಾದ ಸುವಾಸನೆಯುಳ್ಳ ನಿಶ್ವಾಸವಾಯುವನ್ನು ಆಘ್ರಾಣಿಸಿದ ಮನ್ಮಥನಿಗೆ ಮಲಯಪರ್ವತದ ಗಂಧದ ಗಾಳಿಯು ಇದಕ್ಕೆ ಸರಿಸಾಟಿಯಾಗುವುದಿಲ್ಲ ಅಂದುಕೊಂಡ. ಹುಣ್ಣಿಮೆಯ ಚಂದಿರನಂತೆ ತುಂಬಿರುವ, ಕುಂಕುಮದ ಬೊಟ್ಟಿನಿಂದ ರಾರಾಜಿಸುತ್ತಿರುವ ರತಿಯ ಮುಖವನ್ನು ನೋಡಿ ಕಾಮನು, ಅವಳ ಮುಖಕ್ಕೂ ಚಂದ್ರನಿಗೂ ಭೇದವನ್ನೇ ತಿಳಿಯದವನಾದ. ರತಿಯ ಕಮಲದಂತಿರುವ ಮುಖದಲ್ಲಿರುವ ಕಣ್ಣುಗಳು ರಕ್ತಕಮಲಗಳಂತೆ ಪ್ರಕಾಶಿಸುತ್ತಿದ್ದವು. ಚಿಕ್ಕದಾದ ನಡುವುಳ್ಳ, ಶರಭಮೃಗದಂತೆ ಶರೀರವುಳ್ಳವಳೂ ಆದ ಆ ರತೀದೇವಿಯು ಸುವರ್ಣವೇದಿಕೆಯಂತೆ ಮನ್ಮಥನಿಗೆ ಕಾಣಿಸಿದಳು. ಬಾಳೆ ಗಿಡದಂತೆ ನಯವೂ, ನೀಳವಾದ ತೊಡೆಗಳು, ಕೆಂಪಾದ ಪಾದಗಳು, ಸುರಹೊನ್ನೆಯ ಚಿಗುರಿನಂಥ ಪಾದದ ಬೆರಳುಗಳು, ದುಂಡನೆಯ ಕೈಗಳು, ಇದಕ್ಕೆ ನಸುಗಿನಂಥ ಬೆರಳುಗಳು ರತಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿದ್ದವು. ಕಾಳಮೇಘದಂತೆ ಕಪ್ಪಾದ ಮತ್ತು ಸುಂದರವಾದ ಕೇಶಪಾಶವು ಚಮರೀಮೃಗದ ಚೌರಿಗಳಂತೆ ಮನೋಹರವಾಗಿತ್ತು. ಕಾಂತಿಜಲದಲ್ಲಿ ಇವಳ ಕುಡಿನೋಟಗಳೇ ದುಂಬಿಗಳಾಗಿ, ನೇತ್ರಗಳೇ ಕನ್ನೈದಿಲೆಗಳಾಗಿದ್ದವು. ಒಟ್ಟಾರೆ, ರತಿಯು ಸರ್ವಾಂಗ ಲಾವಣ್ಯವುಳ್ಳವಳಾಗಿ ಲಕ್ಷ್ಮಿಯಂತೆ ಶೋಭಿಸುತ್ತಲಿದ್ದಳು.

ಹನ್ನೆರಡು ಅಲಂಕಾರ, ಹದಿನಾರು ಶೃಂಗಾರ ವಸ್ತುಗಳಿಂದ ರತಿ ಶೋಭಿಸುತ್ತಿದ್ದಳು. ನೋಡುಗರನ್ನು ತನ್ನ ಸೌಂದರ್ಯದಿಂದ ಮೋಹಗೊಳಿಸುತ್ತಾ, ತನ್ನ ಶರೀರದ ಕಾಂತಿಯಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಲಿದ್ದಳು. ರತಿಯ ಅದ್ಭುತವಾದ ಸೌಂದರ್ಯ ನೋಡಿದ ಮನ್ಮಥ, ತನಗೆ ಬ್ರಹ್ಮ ಕೊಟ್ಟ ಕ್ರೂರ ಶಾಪವನ್ನು ಮರೆತು ರತಿಯ ಮೋಹಪಾಶದಲ್ಲಿ ಮುಳುಗಿದ. ತನ್ನ ಪುತ್ರಿ ರತಿಯನ್ನು ಮನ್ಮಥನಿಗೆ ಅತ್ಯಂತ ವಿಜೃಂಭಣೆಯಿಂದ ವಿವಾಹ ಮಾಡಿಕೊಟ್ಟ ದಕ್ಷ ತುಂಬಾ ಸಮಾಧಾನಚಿತ್ತನಾದ.

ರತೀದೇವಿಯೊಡನೆ ಮದನನು ಪ್ರಿಯವಾದ ಮಾತುಗಳನ್ನಾಡುತ್ತಾ ವಿಹರಿಸುತ್ತಲಿದ್ದ. ಸಂಜೆಕಾಲದಲ್ಲಿ ಮೇಘವು ಮನೋಹರವಾದ ಮಿಂಚಿನಿಂದ ಪ್ರಕಾಶಿಸುವಂತೆ ಆ ರತಿಯಿಂದ ಪ್ರಕಾಶಿಸಿದ. ಯೋಗಿಯು ಯೋಗವಿದ್ಯೆಯನ್ನು ಹೃದಯದಲ್ಲಿ ಧರಿಸುವಂತೆ ರತೀದೇವಿಯನ್ನು ತನ್ನ ಹೃದಯದಲ್ಲಿ ಧರಿಸಿದ. ಅಂದರೆ ಆ ರತಿಯಲ್ಲಿ ಮನ್ಮಥ ತುಂಬಾ ಅನುರಾಗವುಳ್ಳವನಾದ. ರತೀದೇವಿಯೂ ಮನ್ಮಥನನ್ನು ಪತಿಯಾಗಿ ಪಡೆದು, ಶ್ರೀಹರಿಯನ್ನು ಪಡೆದ ಚಂದ್ರಮುಖಿಯಾದ ಲಕ್ಷ್ಮೀದೇವಿಯಂತೆ ಪ್ರಕಾಶಿಸಿದಳು – ಎಂಬಲ್ಲಿಗೆ ಸತೀಖಂಡದ ನಾಲ್ಕನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಹೂಮಾಲೆಗಳು ಮತ್ತು ಹಸಿರು ಬಣ್ಣದ ಧ್ವಜಗಳಿಂದ ಅಲಂಕೃತಗೊಂಡ ಬಸ್ಸೊಂದರ ವಿಡಿಯೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಡಿಯೊವನ್ನು ಮಹಾರಾಷ್ಟ್ರದ ಉಸ್ಮಾನಾಬಾದ್‌ನ ಬಸ್ ನಿಲ್ದಾಣದಲ್ಲಿ ಚಿತ್ರೀಕರಿಸಲಾಗಿದೆ. ಅಲ್ಲಾ ಕುರಿತ ಹಾಡುಗಳನ್ನು ಈ ವೇಳೆ ಹಾಡಲಾಗಿದೆ. ಮುಸ್ಲಿಂ ಧಾರ್ಮಿಕ ಮುಖಂಡರೊಬ್ಬರು ವಿಡಿಯೊದಲ್ಲಿ ಕಾಣುತ್ತಾರೆ. ಮಹಾರಾಷ್ಟ್ರದ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಅಘಾಡಿ ಸರ್ಕಾರವು ಮುಸ್ಲಿಮರ ಓಲೈಕೆಗೆ ಯಾವ ಹಂತಕ್ಕಾದರೂ ಇಳಿಯುತ್ತದೆ ಎಂಬುದಕ್ಕೆ ಈ ವಿಡಿಯೊ ಸಾಕ್ಷಿ ಆಗಿದೆ ಎಂದು ಈ ವಿಡಿಯೊ ಜೊತೆ ವಿವರಣೆ ನೀಡಲಾಗಿದೆ.

ಈ ವಿಡಿಯೊದ ಜೊತೆ ಇರುವ ಮಾಹಿತಿ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ಈ ವಿಡಿಯೊ ಚಿತ್ರೀಕರಣವಾಗಿರುವುದು 2017ರಲ್ಲಿ. ಆಗ ಮಹಾ ವಿಕಾಸ ಅಘಾಡಿ ಸರ್ಕಾರವೇ ಇರಲಿಲ್ಲ. ಬಸ್ ಮೇಲೆ ಕಾಣುವುದು ಪಾಕಿಸ್ತಾನದ ಧ್ವಜವಲ್ಲ ಬದಲಾಗಿ ಇಸ್ಲಾಂ ಧ್ವಜ. ಉರುಸ್ ಸಂದರ್ಭದಲ್ಲಿ ಬಸ್‌ಗಳನ್ನು ಈ ರೀತಿ ಅಲಂಕರಿಸುವುದು 30 ವರ್ಷಗಳಿಂದ ರೂಢಿಯಲ್ಲಿದೆ. ಬಸ್ ನಿಲ್ದಾಣದ ಸಿಬ್ಬಂದಿಯ ಸಮಿತಿಯೊಂದು ಇದನ್ನು ಮಾಡುತ್ತದೆ. ಈ ಸಮಿತಿಯಲ್ಲಿ ಎಲ್ಲ ಧರ್ಮದ ಜನರೂ ಇದ್ದಾರೆ. ಈ ಆಚರಣೆ 2019ರ ವರೆಗೂ ಚಾಲ್ತಿಯಲ್ಲಿ ಇತ್ತು. ಬಳಿಕ ಕೋವಿಡ್ ಸಾಂಕ್ರಾಮಿಕದ ಕಾರಣಕ್ಕಾಗಿ ಈ ಆಚರಣೆಯನ್ನು ತಡೆಯಲಾಗಿದೆ ಎಂದು ಉಸ್ಮಾನಾಬಾದ್‌ನ ಎಸ್‌ಪಿ ತಿಳಿಸಿದ್ದಾರೆ ಎಂದು ಲಾಜಿಕಲ್ ಇಂಡಿಯನ್‌ನ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತಪ್ಪದು ಕರ್ಮಫಲ

ಯುದ್ಧವಾಗಲಿ ರಾಜ್ಯವಿದ್ಯೆಯಾಗಲಿ ಶಾಸ್ತ್ರ - |
ವೃದ್ಧಿಯಾಗಲಿ ನರನ ಹಣೆಯಿನಳಿಯಿಸದಾ ||
ಕ್ಷುದ್ರಕಾರ್ಪಣ್ಯದನ್ಯಾಯದನಿತಿನಿತುಳಿಕೆ - |
ಯಿದ್ದೆಯಿರುವುದು ನಮಗೆ – ಮಂಕುತಿಮ್ಮ
|| 634 ||

ಪದ-ಅರ್ಥ: ರಾಜ್ಯವಿದ್ಯೆ = ರಾಜಕೀಯ ಜ್ಞಾನ, ಹಣೆಯಿನಳಿಯಿಸದಾ = ಹಣೆಯಿನ್ (ಹಣೆಯಿಂದ) + ಅಳಿಸದ + ಆ ಕ್ಷುದ್ರಕಾರ್ಪಣ್ಯದನ್ಯಾಯದನಿತಿನಿತುಳಿಕೆಯಿದ್ದೆಯಿರುವುದು = ಕ್ಷುದ್ರ + ಕಾರ್ಪಣ್ಯದ + ಅನ್ಯಾಯದ + ಅನಿತಿನಿತು(ಅಷ್ಟು-ಇಷ್ಟು-) + ಉಳಿಕೆ(ಬಾಕಿ) + ಇದ್ದೆ + ಇರುವುದು.

ವಾಚ್ಯಾರ್ಥ: ಯುದ್ಧಮಾಡಿ, ರಾಜಕೀಯ ತಂತ್ರಗಳನ್ನು ಬಳಸಿ, ಶಾಸ್ತ್ರಗಳ ಬಳಕೆಯಿಂದ ಮನುಷ್ಯನ ಹಣೆಬರಹವನ್ನು ಅಳಿಸುವುದು ಅಸಾಧ್ಯ. ಯಾಕೆಂದರೆ ನಮ್ಮ ಸಣ್ಣತನದ, ಜಿಪುಣತನದ, ಅನ್ಯಾಯದ ಅಲ್ಪ ಸ್ವಲ್ಪ ಉಳಿಕೆ ನಮ್ಮಲ್ಲಿ ಇದ್ದೇ ಇರುತ್ತದೆ.

ವಿವರಣೆ: ನಮ್ಮ ಹಿಂದೂ ಧರ್ಮದ ಅನೇಕ ನಂಬಿಕೆಗಳಲ್ಲಿ ಕರ್ಮದ ಕಲ್ಪನೆಯೂ ಒಂದು. ನಾವು ಮಾಡಿದ ಕರ್ಮ ನಮ್ಮ ಬೆನ್ನು ಬಿಡುವುದಿಲ್ಲ. ಕರ್ಮಕ್ಷಯವಾಗುವವರೆಗೆ ಕಷ್ಟ ತಪ್ಪಿದ್ದಲ್ಲ. ಇದು ಕೇವಲ ಹಿಂದೂ ಧರ್ಮಕ್ಕೆ ಮಾತ್ರ ಸೀಮಿತವಾದದ್ದಲ್ಲ. ಪ್ರಾಚೀನ ಗ್ರೀಸ್‌ದಲ್ಲಿ ಕೂಡ, ಮನುಷ್ಯನ ಹಣೆಬರಹವನ್ನು ಜೀಯಸ್‌ನಂಥ ದೇವರುಗಳು ನಿಯಂತ್ರಿಸುತ್ತಾರೆ, ಅವರೇ ಪ್ರತಿಯೊಬ್ಬ ಮನುಷ್ಯನ ಭವಿಷ್ಯವನ್ನು ನಿಯಂತ್ರಿಸುತ್ತಾರೆ ಎಂದು ನಂಬುತ್ತಿದ್ದರು.

ನಮ್ಮ ಸರ್ವಜ್ಞ ಹೇಳುತ್ತಾನೆ, ನೀನು ಮಾಡಿದ ಪಾಪಕೃತ್ಯವನ್ನು ಮರೆತರೆ ಆ ಪಾಪ ಹೋಗುವುದೆ? ಅದು ನಿನ್ನನ್ನು ಎಂದಿಗೂ ಬೆನ್ನು ಬಿಡದು.

ಅರಿತು ಮಾಡಿದ ಪಾಪ, ಮರೆತರದು ಪೋಪುದೆ?
ಮರೆತರಾಮರವ ಬಿಡಿಸುವುದು, ಕೊರತೆಯದು,
ಅರಿತು ನೋಡೆಂದ ಸರ್ವಜ್ಞ ||

ಪುರಂದರದಾಸರು ಕರ್ಮದ ಅನುಲ್ಲಂಘನೀಯತೆಯನ್ನು ತಮ್ಮ ಕೀರ್ತನೆಯಲ್ಲಿ ಹೇಳುತ್ತಾರೆ. ಅದು ಬ್ರಹ್ಮಬರೆದ ಲಿಖಿತ. ಅದನ್ನು ತಿದ್ದುವುದು ಸಾಧ್ಯವಿಲ್ಲ. ಬಹುಶ: ಅದನ್ನು ದೇವರೂ ತಿದ್ದಲಾರ. ಅದಕ್ಕೇ ನೀ ಮಾಡುವುದೇನು ಎಂದು ದೇವರನ್ನೇ ಕೇಳುತ್ತಾರೆ.

'ನಾ ಮಾಡಿದ ಕರ್ಮ ಬಲವಂತವಾದರೆ
ನೀ ಮಾಡುವುದೇನೋ ದೇವಾ ?
ಸಾಮಾನ್ಯವಲ್ಲವಿದು ಬ್ರಹ್ಮ ಬರೆದ ಬರಹ
ನೇಮದಿಂದಲಿ ಎನ್ನ ಹಣೆಯಲ್ಲಿ ಬರೆದುದಕೆ.....'

ಕಗ್ಗ ಅದೇ ಮಾತನ್ನು ಹೇಳುತ್ತದೆ. ಯುದ್ಧದಿಂದ, ರಾಜಕೀಯ ತಂತ್ರಗಳಿಂದ ಅಸಾಮಾನ್ಯ ಶಾಸ್ತ್ರಜ್ಞಾನದಿಂದ ಮನುಷ್ಯನ ಹಣೆಬರಹವನ್ನು ಅಳಿಸುವುದು ಅಸಾಧ್ಯ. ಯಾಕೆಂದರೆ ನಾವು ಮಾಡಿದ ಕರ್ಮಗಳ ಉಳಿಕೆ ನಮ್ಮಲ್ಲಿ ಇದ್ದೇ ಇದೆ. ಅದು ನಮ್ಮ ಸಣ್ಣತನ, ಜಿಪುಣತನ, ಅನ್ಯಾಯಗಳ ಫಲಶೃತಿ. ಅದನ್ನು ನಾವು ಅನುಭವಿಸಲೇ ಬೇಕು. ಎಲ್ಲಿಯವರೆಗೆ ಉಳಿಕೆ ಇದೆಯೋ ಅಲ್ಲಿಯವರೆಗೆ ಸತ್ಕರ್ಮಗಳಿಂದ ಅದನ್ನು ಸವೆಸಬೇಕು. ಕರ್ಮಸಿದ್ಧಾಂತವೇ ಪುರೋಹಿತ ತಂತ್ರ ಎನ್ನುವವರೂ ಇದ್ದಾರೆ, ಸಿದ್ಧಾಂತವನ್ನು ನಂಬುವವರೂ ಬೇಕಾದಷ್ಟು ಜನ ಇದ್ದಾರೆ. ಅವರವರ ನಂಬಿಕೆ ಅವರಿಗೆ. ಆದರೆ ಈ ಸಿದ್ಧಾಂತದ ಮೂಲ ನೆಲೆ ಯಾವುದು ಎಂಬುದನ್ನು ನೋಡಿದರೆ, ಉದ್ದೇಶ ಸರಿಯಾಗಿದೆ ಎನ್ನಿಸುತ್ತದೆ. ನಾನು ಯಾವುದೇ ತಪ್ಪು ಮಾಡಿದರೆ ಶಿಕ್ಷೆ ಖಚಿತ, ಅದು ತಪ್ಪುವುದು ಸಾಧ್ಯವಿಲ್ಲವೆನ್ನಿಸಿದಾಗ ಮನಸ್ಸು ತಪ್ಪಿನ ಕಡೆಗೆ ಹೋಗದು. ಹೇಗೆ ಪೊಲೀಸರು, ಶಿಕ್ಷೆ, ಜೈಲು, ಜೀವಾವಧಿ, ಗಲ್ಲಿನ ಶಿಕ್ಷೆಗಳು ಮನುಷ್ಯನ ಮನಸ್ಸು ದಾರಿ ತಪ್ಪದಂತೆ ಎಚ್ಚರಿಕೆಯನ್ನು ನೀಡುತ್ತವೋ, ಹಾಗೆಯೇ ಕರ್ಮಸಿದ್ಧಾಂತ ಕೂಡ ಮನುಷ್ಯನನ್ನು ಧರ್ಮಪಥದಲ್ಲಿಯೇ ಮುನ್ನಡೆಯುವಂತೆ ಪ್ರೇರೇಪಿಸಬಹುದು, ಪ್ರೇರೇಪಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣನವಮಿ ಗಂ. 10-46 ನಕ್ಷತ್ರ: ಪೂರ್ವಾಭಾದ್ರಾ ಗಂ. 22-33 ಯೋಗ: ವಿಷ್ಕಂಭ ಗಂ. 23-40, ಕರಣ: ಗರಜೆ ಗಂ. 10-46, ವೃಷಭ ಮಾಸದ 09 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 - 04:30
ಸೂರ್ಯೋದಯ : 06-07 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 22 ಶವ್ವಾಲ್
ಅದೃಷ್ಟ ಸಂಖ್ಯೆ : 4, 12

ಮೇಷ: ಗೃಹನಿರ್ಮಾಣ, ದೇವತಾಕಾರ್ಯ ಕೈಗೊಳ್ಳುವ ತೀರ್ಮಾನ. ಅವಿವಾಹಿತರಿಗೆ ಕಂಕಣಬಲ ಯೋಗ. ಶತ್ರುಪೀಡೆ, ಕಿರುಕುಳ ಆಗಾಗ ತೋರಿಬಂದರೂ ದೇವರಕೃಪೆಯಿಂದ ಎಲ್ಲವು ನಿರ್ಮೂಲನೆ.

ವೃಷಭ: ವ್ಯವಹಾರಸ್ಥರಿಗೆ ಲಾಭ ಸಿಗಲಾರದು ಹಾಗೆಯೇ ನಷ್ಟವೂ ಇರದು. ಆರೋಗ್ಯ ಸ್ಥಿತಿಯಲ್ಲಿ ಸುಧಾರಣೆ. ನಿರುದ್ಯೋಗಿಗಳಿಗೆ ಹಲವಾರು ಉದ್ಯೋಗಾವಕಾಶ. ನರಸಿಂಹ ದೇವರ ಸೇವೆಯಿಂದ ಉತ್ತಮ ಫಲ.

ಮಿಥುನ: ವಿದ್ಯಾಭ್ಯಾಸದಲ್ಲಿ ನಿರೀಕ್ಷೆಗೂ ಮೀರಿದ ಫಲಿತಾಂಶ. ವೃತ್ತಿರಂಗದಲ್ಲಿ ಹೊಸ ಹೆಜ್ಜೆ ಇಡುವವರಿಗೆ ವಿದ್ಯಾರ್ಹತೆಗಿಂತ ಪ್ರತಿಭೆ ಬಹಳ ಮುಖ್ಯ. ಪತ್ನಿ ಮಕ್ಕಳೊಂದಿಗೆ ಸಂತಸದ ವಾತಾವರಣ.

ಕರ್ಕಾಟಕ: ಹಿರಿಯರ ಪ್ರಭಾವ, ಗುರುವಿನ ಕೃಪೆಯಿಂದ ಜನೋಪಕಾರಿ ಕೆಲಸಗಳು ಕೈಗೂಡಿ ಬರಲಿದೆ. ಜನರ ಮೆಚ್ಚುನುಡಿ, ಗೌರವ ದೊರೆಯಲಿದೆ. ನಿಮ್ಮ ಸ್ವಂತ ಕಾರ್ಯಗಳೆಲ್ಲವೂ ಜಯವಾಗಲಿದೆ.

ಸಿಂಹ: ಶೀತ, ಕಫ ಬೇನೆ ನಿರ್ಲಕ್ಷಿಸಬೇಡಿ. ಬಂಧು-ಬಾಂಧವರಲ್ಲಿ ಯಾವುದೇ ವಿಚಾರದಲ್ಲೂ ವಿರೋಧ ವ್ಯಕ್ತಪಡಿಸಬೇಡಿ. ಕಾರ್ಯ ಕ್ಷೇತ್ರದಲ್ಲಿ ಶಾಂತ ಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಿ.

ಕನ್ಯಾ: ಎಣಿಕೆಯ ಕಾರ್ಯಗಳೆಲ್ಲ ದೈಹಿಕ ಶ್ರಮವಿಲ್ಲದೆ ಪೂರ್ಣಗೊಳ್ಳುವುದರಿಂದ ಈ ದಿನದ ಸಮಯವನ್ನು ಸಂತೋಷದಿಂದ ಕಳೆಯಲಿದ್ದೀರಿ. ಧನ ಆಗಮನಕ್ಕೆ ಕೊರತೆಯಿಲ್ಲ, ಆದರೆ ಸಂಗ್ರಹ ಪೂರ್ತಿ ಸೋರಿ ಹೋಗಬಹುದು.

ತುಲಾ: ಕತ್ತಲೆಯ ಪ್ರಪಂಚದಲ್ಲಿರುವ ಜೀವನಕ್ಕೆ ದೂರದಲ್ಲೊಂದು ಜ್ಯೋತಿ ಕಾಣಲಿದೆ. ಮೇಲಧಿಕಾರಿಗಳ ಕಿರುಕುಳದಿಂದ ಹೊರಬರುವ ಕಾಲ ಸನಿಹಿತ. ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ಬೇಡ.

ವೃಶ್ಚಿಕ: ಅನುವಂಶಿಕವಾದ ಬಹುಕಾಲದ ಬೇಡಿಕೆ ಈಡೇರುವುದರಿಂದ ಕೊಂಚ ನೆಮ್ಮದಿ ಸಿಗಲಿದೆ. ಪ್ರಯಾಣದಲ್ಲಿ ನಷ್ಟದ ಪ್ರಸಂಗಗಳಿವೆ ಎಚ್ಚರ. ಇಟ್ಟಿಗೆ, ಕಬ್ಬಿಣ, ಯಂತ್ರಸಾಮಗ್ರಿಗಳ ಮಾರಾಟದಲ್ಲಿ ಏರುಗತಿ.

ಧನು: ವಾಹನ ಖರೀದಿಯ ಆಲೋಚನೆ ನಿಮ್ಮಿಷ್ಟದಂತೆಯೇ ನೆರವೇರಲಿದೆ. ಭಾಗ್ಯವೃದ್ಧಿಯಿಂದ ಸಂತೋಷ ಸುಖ ಇದ್ದರೂ, ಆರೋಗ್ಯದಲ್ಲಿ ರಕ್ತಸಂಬಂಧಿ ಕಾಯಿಲೆಯ ಲಕ್ಷಣ. ದೈವಚಿಂತನೆಯನ್ನು ಬಿಡದಿರಿ.

ಮಕರ: ನೀವು ಮಾಡಿದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆ ಯೋಗ. ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ ವೃತ್ತಿಯಲ್ಲಿ ಮುಂಬಡ್ತಿ ಅಥವಾ ಸನ್ಮಾನ. ಕೈತಪ್ಪಿ ಹೋದ ಹಣ ಪುನಃ ಕೈ ಸೇರುವುದು.

ಕುಂಭ: ತಂದೆ-ತಾಯಿಯ ಆರೋಗ್ಯದ ಕಡೆಗೆ ಗಮನ ಕೊಡುವುದು ಅನಿವಾರ್ಯ. ಸರ್ವತೋಮುಖ ಅಭಿವೃದ್ಧಿಗೆ ಸಹೋದರರ ಬೆಂಬಲ. ಹನುಮ ಸಮೇತನಾದ ಶ್ರೀರಾಮನ ಪರಿವಾರವನ್ನು ಆರಾಧಿಸಿ.

ಮೀನ: ಸುಖಾಸುಮ್ಮನೆ ಆರೋಪ ಹೊತ್ತಿರುವ ನಿಮಗೆ ನ್ಯಾಯ ಸಿಗಲಿದೆ. ಮನೆಯಲ್ಲಿ ಮಂಗಳ ಕಾರ್ಯ. ಸೇವಕ ವರ್ಗದವರಿಗೆ, ಆರಕ್ಷಕರಿಗೆ, ಹೊರಾಂಗಣ ಕಾರ್ಮಿಕರಿಗೆ ಉದ್ಯೋಗದಲ್ಲಿ ಉನ್ನತ ಸ್ಥಾನಮಾನ.

ಪದಬಂಧ 4967

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಪಾಯದಿ ಹಾಕಿದ ಬುನಾದಿ (4)
3.ಆದಾಯ ಮತ್ತು ಖರ್ಚು (4)
5.ಬಿಡದಿ ಬಳಿಯಿರುವ ಹೆಂಡತಿ (3)
6.ಮರಳ ಹತ್ತಿರ ಹುಚ್ಚನಿದ್ದಾನಲ್ಲಾ! (3)
7.ಗಮನವಿಟ್ಟಾಗ ಗಂಭೀರವಾದುದು-ಕಂಡಿದೆ (3)
9.ತನಯ ಹೀಗೆ ಮಗ್ನ! (3)
11.ರಾಮನಿಗೆ ಸಿಕ್ಕಿರುವ ಬಿಡುವು (3)
12.ಕನ್ನಡಿಗ ಹಿಡಿದಿರುವ ಲೆನ್ಸ್ (3)
14.ಈತ ಮೃತ್ಯುದೇವತೆಯ ಮಗ (4)
15.ಗಣಪತಿಯ ಇನ್ನೊಂದು ಹೆಸರು (4)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ಹಾಡಿನ ಧಾಟಿಯಿಂದ ಮೂಡಿತೇ ಈ ಪ್ರೀತಿ? (4)
2.ಮಯನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ? (2)
3.ಆದಿವಾಸಿಯಲ್ಲಿನ ಮೂಲ ಹುಡುಕಿ! (2)
4.ಯಮನ ಹತ್ತಿರವಿರುವ ಜೋಡಿ(3)
6.ಈತ ಕಟ್ಟಾ ಸಂಪ್ರದಾಯವಂತ (4)
8.ಹೊಸ ಹೂವಿದು (4)
10.ಬಲು ರುಚಿಯಾದ ಅಡುಗೆ (4)
11.ದಾಯಾದಿಯ ಬಿಳ್ಕೊಡುವಿಕೆ! (3)
12.ತಮ್ಮ ನೀಡಿರುವ ಓಟು (2)
13.ವಿರಮಿಸುತ್ತಿದ್ದಾಗ ಮೂಡಿರುವ ಸೂರ್ಯ(2)



4966ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಭಾಷಾಂತರ 5.ಮಲಯಜ 6.ನಿಯಮ 9.ಜವಾನ 10. ಹಯವದನ 11. ಕಡಲು 12.ಕರಗ 14.ಕಮಂಡಲು 15.ಕೆಂಗುಲಾಬಿ 16. ಲಲಲಲಲಲ.
ಮೇಲಿಂದ ಕೆಳಕ್ಕೆ: 1.ಅಭಾಗಿನಿ 2.ಸ್ವರ 3.ಯಜಮಾನ 7.ಮಹಲು 8.ಕವಳ 9.ಜನಕ 11.ಕನಿಕರ 13.ಗಡಿಬಿಡಿ 15.ಕೆಂಡ

ಸುಡೊಕು 5353

		1		8	3		7	5
			2		7		1	
7		3		9		8		2
	5				1			
6		7		5		2		8
	3		9					1
	2				8			
				3				
1		8	5					4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5352 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ ಎ ರಾಮಕೃಷ್ಣರೆಡ್ಡಿ ಶ್ರೀಮತಿ ರುಕ್ಕಮ್ಮ
24.5.2018 ಊರುಬಾಗಿಲು 16.2.2021
ನಿಮ್ಮನ್ನು ಸದಾ ಸ್ಮರಿಸುವ ನಿಮ್ಮ ಕುಟುಂಬದವರು

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಹೆಚ್.ಎಸ್. ಸುರೇಶ
ಪ್ರಾಂಶುಪಾಲರು ಸರ್ಕಾರಿ ಪ.ಪೂ. ಕಾಲೇಜು.
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ನಮ್ಮ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದು,
ನಿಮ್ಮ ಆದರ್ಶಗಳು ಸದಾ ನಮಗೆ ದಾರಿ ದೀಪವಾಗಿದೆ.
ಸದಾ ನಿಮ್ಮನ್ನು ಸ್ಮರಿಸುವ - ಕುಟುಂಬದವರು.

ಸವಿನೆನಪು

ನೀವು ನಮ್ಮನ್ನಗಲಿ ತಂದೆ-37 / ತಾಯಿ-19 ವರ್ಷಗಳು ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಶ್ರೀಮತಿ ಕಲ್ಪನ, ಶ್ರೀ ಎಂ. ಗೋಪಾಲ್ ಮತ್ತು ಮಕ್ಕಳು.
ದಿ|| ಶ್ರೀಮುನಿಶಾಮಪ್ಪ (ಮೊಟಪ್ಪ) ನಿಧನ: 15-08-1984
ದಿ|| ಶ್ರೀಮತಿ ಮುನಿಯಮ್ಮ ನಿಧನ: 24-05-2002
ಮಾಲೀಕರು, ಮೆ: ವೇಣು ಎಂಟರ್‌ಪ್ರೈಸಸ್, ಗುತ್ತಿಗೆದಾರರು, M.M. Towers, Complex & Farm, ಕುಟುಂಬ ವರ್ಗದವರು
ಬಾಚಿಹೊಸಹಳ್ಳಿ, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

For Online Classified Booking
Name Change / Education / Property / Job / Services & many more
Log on to :
dhclassifieds.com

ಮಾತಾ-ಪಿತೃಗಳ ಪುಣ್ಯಸ್ಮರಣೆ

ಶ್ರೀ ಕೋಟೆ ಎನ್.ಎಸ್. ಶ್ರೀನಿವಾಸ ರೆಡ್ಡಿ ಶ್ರೀಮತಿ ಗೌರಮ್ಮನವರು
ಜನನ: 16-12-1931 ನಿಧನ: 24-05-2009 ಜನನ: 05-09-1938 ನಿಧನ: 22-01-2010
KBW Bricks ಕೋದಂಡರಾಮ ನಿಲಯ, ದೊಡ್ಡನೆಕ್ಕುಂದಿ ಮುಖ್ಯರಸ್ತೆ, ಬೆಂಗಳೂರು-37.
ನಮ್ಮ ಬದುಕಿನ ಅಡಿಪಾಯ ಹಾಕಿದ ನೀವು ನಮ್ಮನ್ನಗಲಿದರೂ ನಮ್ಮ ಅಂತರಾಳದಲ್ಲಿ ಸದಾ ನೆಲೆಸಿರುವಿರಿ.
ನಮ್ಮ ಹೃದಯಗಳಲ್ಲಿ ಪ್ರೀತಿ ಚೇತನವಾಗಿದ್ದೀರಿ, ನಿಮ್ಮ ಪ್ರೀತಿ, ಬಾಂಧವ್ಯ, ತಾಳ್ಮೆ, ತ್ಯಾಗ, ಇತರರ ಬಗೆಗಿನ ಕಾಳಜಿ
ನಿಮ್ಮ ಆದರ್ಶಗಳೇ ನಮ್ಮ ಬದುಕಿನ ಮುನ್ನಡಿ ನಿಮ್ಮದೇ ದಾರಿಯಲ್ಲಿ ಸಾಗುತ್ತಿರುವ, ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ,
ಕೋಟೆ ಕುಟುಂಬದವರು ಎನ್. ಎಸ್. ನಾಗರಾಜ ರೆಡ್ಡಿ, ಎನ್. ಎಸ್. ವಸಂತಮ್ಮ ಮತ್ತು ಎನ್. ಎಸ್. ನಂದೀಶ ರೆಡ್ಡಿ ಅಧ್ಯಕ್ಷರು, ಬಿ.ಎಂ.ಟಿ.ಸಿ., (ಮಾಜಿ ಶಾಸಕರು, ಕೆ. ಆರ್. ಪುರ, ಬೆಂಗಳೂರು)
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

'ಕುತುಬ್ ಮಿನಾರ್: ವಿಗ್ರಹಗಳ ಪರಿಶೀಲನೆ'

ನವದೆಹಲಿ (ಪಿಟಿಐ): ದೆಹಲಿಯ ಕುತುಬ್ ಮಿನಾರ್ ಸಂಕೀರ್ಣದಲ್ಲಿ ಪತ್ತೆಯಾದ ಹಿಂದೂ ಮತ್ತು ಜೈನ ವಿಗ್ರಹಗಳ ಪರಿಶೀಲನೆ (ಐಕೋನಗ್ರಫಿ) ನಡೆಸಲಾಗುವುದು. ಸ್ಥಳದ ಉತ್ಖನನ ಮಾಡುವ ಅಥವಾ ಯಾವುದೇ ಧಾರ್ಮಿಕ ಆಚರಣೆ ನಿಲ್ಲಿಸುವ ಯೋಜನೆ ಇಲ್ಲ ಎಂದು ಸಂಸ್ಕೃತಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ದೇವಾಲಯಗಳ ಕಲ್ಲುಗಳಿಂದ ಮಸೀದಿ ನಿರ್ಮಿಸಿರುವುದರಿಂದ, ಅಂತಹ ವಿಗ್ರಹಗಳನ್ನು ಸುತ್ತಲೂ ಕಾಣಬಹುದಾಗಿದೆ. ಸದ್ಯಕ್ಕೆ ಆ ವಿಗ್ರಹಗಳನ್ನು ಪುನರ್ ಪ್ರತಿಷ್ಠಾಪಿಸುವ ಅಥವಾ ಬೇರೆಡೆ ಸ್ಥಳಾಂತರಿಸುವ ಯೋಜನೆ ಇಲ್ಲ. ಆದರೆ, ಆ ವಿಗ್ರಹಗಳನ್ನು ಸಂರಕ್ಷಿಸಿ, ಪ್ರದರ್ಶನಕ್ಕಿಡುವ ಉದ್ದೇಶ ಪರಿಶೀಲನೆಯಲ್ಲಿದೆ ಎಂದು ಅವರು ಹೇಳಿದರು.

ಮಿನಾರ್ ಪಕ್ಕದ ಕುವ್ವಾತ್ ಉಲ್ ಇಸ್ಲಾಂ ಮಸೀದಿಯಲ್ಲಿ ಕಂಡುಬಂದ ಎರಡು ಗಣೇಶನ ವಿಗ್ರಹಗಳನ್ನು ಸ್ಥಳಾಂತರಿಸಲು ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದ ಅಧ್ಯಕ್ಷ ತರುಣ್ ವಿಜಯ್, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಕೆಲವು ದಿನಗಳ ಹಿಂದೆ ಪತ್ರ ಬರೆದಿದ್ದರು. ಕುತುಬ್ ಮಿನಾರ್ ಸಂಕೀರ್ಣದಲ್ಲಿ ಉತ್ಖನನಕ್ಕೆ ಸಚಿವಾಲಯವು ಎಎಸ್‌ಐಗೆ ಆದೇಶಿಸಿದೆ ಎಂಬ ವರದಿಗಳಿಂದ ವಿವಾದ ಭುಗಿಲೆದ್ದಿದೆ. ಸಂಸ್ಕೃತಿ ಸಚಿವ ಜಿ.ಕಿಶನ್ ರೆಡ್ಡಿ ಅವರು ಈ ವರದಿ ನಿರಾಕರಿಸಿದ್ದಾರೆ.

29 ರಿಂದ 18 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದ ತಾಪಮಾನ

ದೆಹಲಿಯಲ್ಲಿ ಧಾರಾಕಾರ ಮಳೆ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾನುವಾರ ರಾತ್ರಿಯಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಪ್ರತಿ ಗಂಟೆಗೆ 70 ಕಿ. ಮೀ. ವೇಗದಲ್ಲಿ ಬೀಸುತ್ತಿರುವ ಗಾಳಿಯ ಜೊತೆಗೆ ಸುರಿಯುತ್ತಿರುವ ಮಳೆಯಿಂದಾಗಿ ರಸ್ತೆ ಮತ್ತು ವಿಮಾನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ.

ಅಲ್ಲದೆ, ಸೋಮವಾರ ಬೆಳಿಗ್ಗೆ 5.40 ಗಂಟೆಯಿಂದ ಬೆಳಗ್ಗೆ 7 ಗಂಟೆ ಮಧ್ಯೆ ತಾಪಮಾನವು 29 ಡಿಗ್ರಿ ಸೆಲ್ಸಿಯಸ್ ನಿಂದ 18 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ತಾಪಮಾನವು 11 ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತ ಕಂಡಿದೆ.

ಪ್ರತಿಕೂಲ ಹವಾಮಾನದ ಕಾರಣ ವಿಮಾನ ನಿಲ್ದಾಣ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ವಿಮಾನ ಸಂಚಾರದ ಕೊನೆ ಕ್ಷಣದ ಮಾಹಿತಿಗಾಗಿ ಪ್ರಯಾಣಿಕರು ವಿಮಾನಯಾನ ಸಂಸ್ಥೆಗಳ ಜತೆ ಸಂಪರ್ಕದಲ್ಲಿರಿ ಎಂದು ದೆಹಲಿ ವಿಮಾನ ನಿಲ್ದಾಣದ ಅಧಿಕೃತ ಟ್ವಿಟರ್ ಖಾತೆಯಿಂದ ಟ್ವೀಟ್ ಮಾಡಲಾಗಿದೆ.

ಗಾಜಿಯಾಬಾದ್, ಹಿಂಡಾನ್ ವಾಯುನೆಲೆ, ನೋಯ್ಡಾ, ಗ್ರೇಟರ್ ನೋಯ್ಡಾ, ಗುರುಗ್ರಾಮ ಸೇರಿದಂತೆ ಹಲವೆಡೆ ಗುಡುಗು ಸಹಿತ ಭಾರಿ ಮಳೆ ಮುಂದುವರಿಯಲಿದೆ ಎಂದು ಸೋಮವಾರ ಮುಂಜಾನೆ ಭಾರತೀಯ ಹವಾಮಾನ ಇಲಾಖೆ ಟ್ವೀಟ್ ಮಾಡಿದೆ. ನಗರದ ಹಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ ಎನ್ನಲಾಗಿದೆ.



ನವದೆಹಲಿಯ ಅಕ್ಷರಧಾಮದ ಬಳಿ ಸೋಮವಾರ ಭಾರಿ ಮಳೆ– ಗಾಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಯಿತು
– ಪಿಟಿಐ ಚಿತ್ರ

ಬಿಹಾರ, ಈಶಾನ್ಯ ರಾಜ್ಯಗಳಲ್ಲಿ ಮಳೆ: 80 ಸಾವು

ಗುವಾಹಟಿ/ಪಟ್ನಾ (ಪಿಟಿಐ): ಬಿಹಾರ ಹಾಗೂ ಈಶಾನ್ಯ ರಾಜ್ಯಗಳು ಮತ್ತು ಬಿಹಾರ ರಾಜ್ಯದ ಹಲವೆಡೆ ಮಳೆಯಾಗುತ್ತಿದ್ದು, ಜನ ಜೀವನ ಅಸ್ತವ್ಯಸ್ತಗೊಂಡಿದೆ. ಮಳೆ ಸಂಬಂಧಿತ ಘಟನೆಗಳಲ್ಲಿ 80ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

ಕಳೆದ ಮೂರು ದಿನಗಳಿಂದ ಈಶಾನ್ಯ ರಾಜ್ಯಗಳು ಹಾಗೂ ಬಿಹಾರದಲ್ಲಿ ಭೀಕರ ಚಂಡಮಾರುತ, ಮಳೆ ಮುಂದುವರೆದಿದ್ದು ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಮಳೆಯಿಂದಾಗಿ ಈ ಎರಡು ರಾಜ್ಯಗಳಲ್ಲಿ 68 ಜನರು ಮೃತಪಟ್ಟಿದ್ದಾರೆ. ಇನ್ನು ತ್ರಿಪುರ, ಮಣಿಪುರ, ಮಿಜೋರಾಂ ಹಾಗೂ ಕೋಲ್ಕತ್ತಾದಲ್ಲಿ 12 ಜನರು ಮಳೆಗೆ ಬಲಿಯಾಗಿದ್ದಾರೆ. ಸುಮಾರು 10 ಲಕ್ಷ ಜನ ತೊಂದರೆಗೆ ಒಳಗಾಗಿದ್ದಾರೆ.

ಈ ಭಾಗಗಳಲ್ಲಿ ಇನ್ನೂ 2-3 ದಿನ ಮಳೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಜಾತಿ ಆಧಾರಿತ ಸಮೀಕ್ಷೆ: ಸರ್ವಪಕ್ಷಗಳ ಸಭೆ- ನಿತೀಶ್

ಪಟ್ನಾ(ಪಿಟಿಐ): ರಾಜ್ಯದಲ್ಲಿನ ಸರ್ವಪಕ್ಷಗಳ ಅಭಿಪ್ರಾಯ ಪಡೆದ ಬಳಿಕ 'ಜಾತಿ' ಸಮೀಕ್ಷೆ ಕಾರ್ಯವನ್ನು ತಮ್ಮ ಸರ್ಕಾರ ಶೀಘ್ರವೇ ಕೈಗೊಳ್ಳಲಿದೆ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಹೇಳಿದ್ದಾರೆ.

ಜಾತಿ ಸಮೀಕ್ಷೆಗೆ ಸಂಬಂಧಿಸಿದಂತೆ ಮೇ 27ರಂದು ಸರ್ವಪಕ್ಷಗಳ ಸಭೆ ನಡೆಯುವ ಸಾಧ್ಯತೆಯಿದೆ ಎಂದು ಅವರು ಇದೇ ವೇಳೆ ತಿಳಿಸಿದ್ದಾರೆ.

ರಾಜ್ಯದಲ್ಲಿ ಜಾತಿ ಆಧಾರಿತ ಸಮೀಕ್ಷೆ ಕುರಿತು ಸರ್ವಪಕ್ಷಗಳ ಸಭೆಯಲ್ಲಿ ಎಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸುತ್ತೇವೆ. ಬಳಿಕ ಈ ಕುರಿತ ಪ್ರಸ್ತಾವನೆಯನ್ನು ರಾಜ್ಯ ಸಂಪುಟದ ಮುಂದಿಡಲಾಗುತ್ತದೆ. ಮೇ 27ರಂದು ಉದ್ದೇಶಿಸಿರುವ ಸರ್ವಪಕ್ಷಗಳ ಸಭೆಗೆ ಕೆಲವು ಪಕ್ಷಗಳು ಸಮ್ಮತಿಸಿವೆ. ಕೆಲವು ಪಕ್ಷಗಳು ಇನ್ನಷ್ಟೇ ಉತ್ತರ ನೀಡಬೇಕಿದೆ. ಈ ಪ್ರಸ್ತಾವನೆಯನ್ನು ಸಂಪುಟದ ಮುಂದಿಟ್ಟ ಬಳಿಕ, ಸಮೀಕ್ಷೆ ಕಾರ್ಯ ಆರಂಭವಾಗಲಿದೆ ಎಂದರು.

ಆದರೆ, ನಿತೀಶ್ ಕುಮಾರ್ ಅವರ ಈ ಪ್ರಸ್ತಾವನೆಗೆ ಮೈತ್ರಿ ಭಾಗವಾಗಿರುವ ಬಿಜೆಪಿಯ ಬೆಂಬಲವಿದೆಯೇ ಎಂಬುದು ಖಚಿತವಾಗಿಲ್ಲ. ಯಾಕೆಂದರೆ, ಜಾತಿ ಆಧಾರಿತ ಸಮೀಕ್ಷೆಯು ಒಡಕು ಉಂಟು ಮಾಡುವ ಪ್ರವೃತ್ತಿ ಎಂದು ಕೇಂದ್ರ ಸರ್ಕಾರದ ಪ್ರತಿಪಾದನೆಯಾಗಿದೆ. ಆದರೆ, ನಿರ್ಲಕ್ಷಿತ ಸಮುದಾಯಗಳಿಗೆ ಉತ್ತಮ ಯೋಜನೆ ರೂಪಿಸಲು ಜಾತಿ ಆಧಾರಿತ ಸಮೀಕ್ಷೆ ಪೂರಕವಾಗಲಿದೆ ಎಂಬುದು ಬಿಹಾರದ ಪಕ್ಷಗಳ ವಾದ.

ಸಾಮಾಜಿಕ ಮಾಧ್ಯಮಗಳಲ್ಲಿ 'ಯೋಗ ದಿನ' ನೇರ ಪ್ರಸಾರ

ನವದೆಹಲಿ (ಪಿಟಿಐ): ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ದೊಡ್ಡ ಆಕರ್ಷಣೆ ಎಂದರೆ ಸುಮಾರು 18ರಿಂದ 20 ದೇಶಗಳ ಯೋಗ ಪ್ರದರ್ಶನ ಕಾರ್ಯಕ್ರಮ ಸಾಮಾಜಿಕ ಮಾಧ್ಯಮಗಳಲ್ಲಿ 'ಗಾರ್ಡಿಯನ್ ರಿಂಗ್ ಪ್ರೋಗ್ರಾಂ' (ನೇರ ಕಾರ್ಯಕ್ರಮ) ರೀತಿಯಲ್ಲಿ ಪ್ರಸಾರವಾಗಲಿದೆ.

ಆಯುಷ್ ಸಚಿವಾಲಯವು ಇದಕ್ಕೆ ವಿದೇಶಾಂಗ ಸಚಿವಾಲಯದ ಸಮ್ಮತಿಯನ್ನು ಕೋರಿದೆ. ಅಂತರರಾಷ್ಟ್ರೀಯ ಯೋಗ ದಿನವಾದ ಜೂನ್ 21ರಂದು ಮೈಸೂರಿನಲ್ಲಿ ನಡೆಯುವ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ. ಕೋವಿಡ್ 19 ಸಾಂಕ್ರಾಮಿಕದಿಂದಾಗಿ ಎರಡು ವರ್ಷಗಳ ನಂತರ ಸಾಮೂಹಿಕ ಯೋಗ ಪ್ರದರ್ಶನವನ್ನು ಭೌತಿಕವಾಗಿ ನಡೆಸಲಾಗುತ್ತಿದೆ.

ವಿವಿಧ ದೇಶಗಳ ವಿವಿಧ ಸಮಯ, ವಲಯಗಳಲ್ಲಿ ನಡೆಯುವ ಯೋಗ ಕಾರ್ಯಕ್ರಮಗಳ 20ರಿಂದ 30 ಆಯ್ದ ವಿಡಿಯೊಗಳನ್ನು 'ಗಾರ್ಡಿಯನ್ ರಿಂಗ್ ಪ್ರೋಗ್ರಾಂ'ನಲ್ಲಿ ಒಟ್ಟಿಗೆ ಬೆಸೆದು, ಸಾಮಾಜಿಕ ಮಾಧ್ಯಮಗಳಲ್ಲಿ 18 ರಿಂದ 20 ಗಂಟೆ ಅವಧಿ ನಿರಂತರ ಪ್ರಸಾರ ಮಾಡಲಾಗುತ್ತದೆ. ಹಿಂದಿನ ವರ್ಷಗಳಂತೆ ಅಂತರಾಷ್ಟ್ರೀಯ ಯೋಗ ದಿನ ಆಚರಿಸಿದ ರೀತಿಯಲ್ಲೇ ಯೋಗ ಚಟುವಟಿಕೆಗಳು, ಚಿಕ್ಕ ಕಾರ್ಯಕ್ರಮಗಳು, ಭಾಷಣಗಳು, ಸ್ಥಳೀಯ ಸೆಲೆಬ್ರಿಟಿಗಳು ಭಾಗವಹಿಸುವ ಯೋಗ ಪ್ರದರ್ಶನಗಳ ವಿಡಿಯೊಗಳು ಇದರಲ್ಲಿರಲಿವೆ ಎಂದು ಅಧಿಕೃತ ಮೂಲಗಳು ಹೇಳಿವೆ.

ಯೋಗ ದಿನಾಚರಣೆಯ ನೇರ ಪ್ರಸಾರ ಜಪಾನ್‌ನಿಂದ ಸ್ಥಳೀಯ ಕಾಲಮಾನ ಬೆಳಿಗ್ಗೆ 6 ಗಂಟೆಗೆ ಪ್ರಾರಂಭವಾಗಲಿದೆ. ನಂತರ, ವಿದೇಶದ ರಾಯಭಾರ ಕಚೇರಿಗಳ ಕಾರ್ಯಕ್ರಮಗಳು ಅಲ್ಲಿನ ಸಮಯ, ವಲಯಗಳ ಆಧಾರದ ಮೇಲೆ ಪ್ರಸಾರವಾಗಲಿದೆ. ನ್ಯೂಜಿಲೆಂಡ್‌ನಲ್ಲಿನ ಯೋಗ ಕಾರ್ಯಕ್ರಮದ ಮೂಲಕ ಇದು ಸಮಾಪನವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಂಕಿಪಾಕ್ಸ್: ಮುಂಬೈನಲ್ಲಿ ಪ್ರತ್ಯೇಕ ಪ್ರಕರಣ

ಮುಂಬೈ (ಪಿಟಿಐ): ಕೆಲವು ದೇಶಗಳಲ್ಲಿ ಮಂಕಿಪಾಕ್ಸ್ ಕಾಯಿಲೆ ಪ್ರಕರಣಗಳ ವರದಿ ಆಗುತ್ತಿರುವ ಹಿನ್ನೆಲೆಯಲ್ಲಿ ಬೃಹನ್‌ಮುಂಬೈ ಮಹಾನಗರ ಪಾಲಿಕೆಯು ಮುನ್ನೆಚ್ಚರಿಕಾ ಕ್ರಮವಾಗಿw ಕಸ್ತೂರ ಬಾ ಆಸ್ಪತ್ರೆಯಲ್ಲಿ 28 ಹಾಸಿಗೆಗಳ ವಾರ್ಡ್‌ಅನ್ನು ಈಗಾಗಲೇ ಕಾಯ್ದಿರಿಸಲಾಗಿದೆ. ಮಂಕಿಪಾಕ್ಸ್ ಶಂಕಿತ ಸೋಂಕಿತರಿಗೆ ಈ ವಾರ್ಡ್‌ನಲ್ಲಿ ಪ್ರತ್ಯೇಕವಾಗಿ ಇರಿಸಲಾಗುವುದು ಮತ್ತು ಶಂಕಿತರ ಮಾದರಿಗಳನ್ನು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ(ಎನ್‌ಐವಿ) ಕಳಿಸಲಾಗುವುದು ಎಂದು ಅಧಿಕಾರಿಗಳು ಸೋಮವಾರ ತಿಳಿಸಿದರು.

ಮೆಟ್ಟೂರು ಜಲಾಶಯದಿಂದ ನೀರು ಬಿಡುಗಡೆ

ಚೆನ್ನೈ: ಕಾವೇರಿ ಅಚ್ಚುಕಟ್ಟು ಪ್ರದೇಶದ ಕುರುವೈ (ಅಲ್ಪಾವಧಿ ಬೆಳೆ) ಕೃಷಿಗೆ ಮೆಟ್ಟೂರು ಜಲಾಶಯದಿಂದ ನೀರು ಬಿಡುಗಡೆಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮಂಗಳವಾರ ಚಾಲನೆ ನೀಡಲಿದ್ದಾರೆ.

ಕರ್ನಾಟಕದ ಕಾವೇರಿ ನದಿಯ ಜಲಾನಯನ ಪ್ರದೇಶಗಳು ಮತ್ತು ತಮಿಳುನಾಡಿನ ಧರ್ಮಪುರಿ ಹಾಗೂ ಕೃಷ್ಣಗಿರಿ ಜಿಲ್ಲೆಗಳಲ್ಲಿ ನಿರಂತರ ಮಳೆಯಿಂದಾಗಿ ಜಲಾಶಯಕ್ಕೆ ನಿರಂತರ ಒಳಹರಿವು ಹೆಚ್ಚಾಗಿದೆ. ಹಾಗಾಗಿ, ಈ ಹಿಂದೆ ನಿಗದಿಪಡಿಸಿದಂತೆ ಜೂನ್12ಕ್ಕೂ ಮುನ್ನವೇ ನೀರು ಬಿಡಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ.

ಎಲ್‌ಇಟಿಯ ಮೂವರು ಉಗ್ರರ ಸೆರೆ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಸೋಮವಾರ ಲಷ್ಕರ್–ಎ–ತೈಯಬಾ(ಎಲ್‌ಇಟಿ) ಸಂಘಟನೆಯ ಮೂವರು ಹೈಬ್ರಿಡ್ ಉಗ್ರರನ್ನು ಜಮ್ಮು–ಕಾಶ್ಮೀರ ಪೊಲೀಸರು ಬಂಧಿಸಿದ್ದಾರೆ.

ಪಠಣ್‌ನ ಗೋಷ್‌ಬಗ್ ನಿವಾಸಿಗಳಾದ ನೂರ್ ಮೊಹಮ್ಮದ್ ಯಾತೂ, ಮೊಹಮ್ಮದ್ ರಫೀಕ್ ಪರ್ರೆ ಮತ್ತು ಮೊಹಮ್ಮದ್ ಅಕ್ಬರ್ ಪರ್ರೆ ಬಂಧಿತ ಹೈಬ್ರಿಡ್ ಉಗ್ರರು.

ಅಂತರ ರಾಜ್ಯ ಮಂಡಳಿ ಪುನರ್ ರಚನೆ

ನವದೆಹಲಿ (ಪಿಟಿಐ): ವಿವಿಧ ರಾಜ್ಯಗಳ ನಡುವಣ ವಿವಾದಗಳನ್ನು ಪರಿಶೀಲಿಸುವ ಹಾಗೂ ಸಲಹೆ ನೀಡುವ ಅಂತರ ರಾಜ್ಯ ಮಂಡಳಿಯನ್ನು ಪುನರ್ ರಚಿಸಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷರಾಗಿದ್ದಾರೆ.

ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು 6 ಕೇಂದ್ರ ಸಚಿವರು ಅದರ ಸದಸ್ಯರಾಗಿದ್ದಾರೆ.

26ರಂದು ಹೈದರಾಬಾದ್‌ಗೆ ಪ್ರಧಾನಿ ಭೇಟಿ

ಹೈದರಾಬಾದ್: 'ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್' ಸಂಸ್ಥೆಯ 20ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಹೈದರಾಬಾದ್ ಪ್ರವಾಸ ಕೈಗೊಳ್ಳಲಿದ್ದಾರೆ.

ದೇಶದಾದ್ಯಂತ ಪರ್ಯಾಯ ಕೂಟ ರಚನೆಗಾಗಿ ಪರ್ಯಾಯ ರಾಜಕೀಯ ನಾಯಕರ ಜೊತೆ ಸಭೆ ನಡೆಸುತ್ತಿರುವ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ಗುರುವಾರ ಜೆಡಿಎಸ್‌ನ ವರಿಷ್ಠ ಅಧ್ಯಕ್ಷ ಎಚ್. ಡಿ. ದೇವೇಗೌಡ ಅವರ ಭೇಟಿಗಾಗಿ ಬೆಂಗಳೂರಿಗೆ ಆಗಮಿಸುತ್ತಿದ್ದಾರೆ.

ಹೀಗಾಗಿ, ಕೆಸಿಆರ್ ಅವರು ಈ ಬಾರಿ ಸಹ ಮೋದಿ ಅವರನ್ನು ಬರ ಮಾಡಿಕೊಳ್ಳಲು ಹೋಗದಿರುವ ಸಾಧ್ಯತೆಯಿದೆ.

ವಿಸ್ಮಯಾ ಆತ್ಮಹತ್ಯೆ ಪ್ರಕರಣ: ಪತಿ ಅಪರಾಧಿ

ಕೊಲ್ಲಂ, ಕೇರಳ (ಪಿಟಿಐ): ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿನಿ ವಿಸ್ಮಯಾ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತಿ ಎಸ್.ಕಿರಣ್ ಕುಮಾರ್‌ನನ್ನು ವರದಕ್ಷಿಣೆ ಕಿರುಕುಳ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಅಪರಾಧಿ ಎಂದು ಕೇರಳದ ನ್ಯಾಯಾಲಯ ಸೋಮವಾರ ತೀರ್ಪು ನೀಡಿದೆ. ಮಂಗಳವಾರ ತೀರ್ಪು ಪ್ರಮಾಣ ಪ್ರಕಟಿಸುವ ನಿರೀಕ್ಷೆ ಇದೆ.

ಕಳೆದ ವರ್ಷ ಜೂನ್‌ನಲ್ಲಿ ಪತಿಯ ಮನೆಯಲ್ಲಿ ವಿಸ್ಮಯಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಅಮರನಾಥ ಯಾತ್ರಾರ್ಥಿಗಳ ಮೇಲೆ ದಾಳಿ: ಎಚ್ಚರಿಕೆ

ಶ್ರೀನಗರ: ಬಿಜೆಪಿ ಸರ್ಕಾರವು ಕಾಶ್ಮೀರದ ಪ್ರಸಿದ್ಧ ಅಮರನಾಥ ಯಾತ್ರೆಯನ್ನು ರಾಜಕೀಯ ದುರುದ್ದೇಶ ಹಾಗೂ ಜನ ಸಮುದಾಯವನ್ನು ಪ್ರಚೋದಿಸುವ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದರ ವಿರುದ್ಧ ಟಿಆರ್‌ಎಫ್(ದಿ ರಿಸಿಸ್ಟೆನ್ಸ್ ಫ್ರಂಟ್) ಉಗ್ರ ಸಂಘಟನೆ ಬೆದರಿಕೆ ಪತ್ರವನ್ನು ಬರೆದಿರುವುದಾಗಿ ವರದಿಯಾಗಿದೆ.

ಈ ಕುರಿತ ಬೆದರಿಕೆ ಪತ್ರವು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, 'ಯಾತ್ರೆಯನ್ನು ರಾಜಕೀಯ ಮತ್ತು ಸಮುದಾಯದಲ್ಲಿ ಒಡಕು ಮೂಡಿಸುವ ಉದ್ದೇಶಕ್ಕಾಗಿ ಬಳಸಿದರೆ ಪ್ರತಿರೋಧ ದಳವಾದ ನಾವು ಅಂತಹ ಮೂಲಭೂತವಾದಿ ಸಂಘದ ಕೊಳಕು ಉದ್ದೇಶವನ್ನು ಖಂಡಿತ ತಡೆಯುತ್ತೇವೆ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸುತ್ತೇವೆ' ಎಂದು ಪತ್ರದಲ್ಲಿ ಎಚ್ಚರಿಕೆ ನೀಡಿದೆ. 'ಯಾವುದೇ ಯಾತ್ರಾರ್ಥಿಯು ಕಾಶ್ಮೀರ ಸಮಸ್ಯೆ ಸಂಬಂಧ ತಲೆಹಾಕದೇ ಯಾತ್ರೆಗಷ್ಟೆ ಸೀಮಿತವಾಗುವ ಯಾತ್ರಾರ್ಥಿಗಳಿಗೆ ನಾವು ಸೂಕ್ತ ರಕ್ಷಣೆ ನೀಡುತ್ತೇವೆ. ಸಂಘದ ದುರುಳರು ಯಾತ್ರಾರ್ಥಿಗಳ ವೇಷದಲ್ಲಿ ಬಂದರೆ ಅದರ ಪರಿಣಾಮ ಬೇರೆಯೇ ಆಗುತ್ತದೆ' ಎಂದು ಹೇಳಿದೆ.

ಬೀಜಿಂಗ್‌ನಲ್ಲಿ ವರ್ಕ್‌ಫ್ರಮ್ ಹೋಂ ವಿಸ್ತರಣೆ

ಬೀಜಿಂಗ್ (ಎಪಿ): ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವರ್ಕ್‌ಫ್ರಮ್ ಹೋಂ ಆದೇಶವನ್ನು ಸೋಮವಾರ ಮತ್ತೆ ವಿಸ್ತರಿಸಲಾಗಿದೆ. ಹೆಚ್ಚುವರಿ ಸಾಮೂಹಿಕ ಕೋವಿಡ್ ಪತ್ತೆ ಪರೀಕ್ಷೆ ನಡೆಸಲು ಆದೇಶಿಸಲಾಗಿದೆ.

ಎಲ್ಲ ಕ್ಷೇತ್ರದ ನೌಕರರಿಗೆ ಮತ್ತು ವಿದ್ಯಾರ್ಥಿಗಳಿಗೆ ಮನೆಯಲ್ಲೇ ಇರುವಂತೆ ಸೂಚಿಸಲಾಗಿದೆ. ನಗರದ ಹಲವು ಕಡೆ ನಿವಾಸಿಗಳು ಮನೆಯಿಂದ ಹೊರ ಬಾರದಂತೆ, ತಡೆಗೋಡೆಗಳನ್ನು ದಾಟದಂತೆ ನಿರ್ಬಂಧ ವಿಧಿಸಲಾಗಿದೆ.

ಬೀಜಿಂಗ್‌ನಲ್ಲಿ ಹೊಸದಾಗಿ 99 ಪ್ರಕರಣಗಳು ವರದಿಯಾಗಿವೆ. ಕಳೆದ ದಿನಕ್ಕಿಂತಲೂ 50 ಪ್ರಕರಣಗಳು ಏರಿಕೆಯಾಗಿವೆ. ದೇಶದಲ್ಲಿ ಒಟ್ಟು 802 ಹೊಸ ಪ್ರಕರಣಗಳು ವರದಿಯಾಗಿವೆ. ಕಟ್ಟುನಿಟ್ಟಾದ ಕ್ವಾರಂಟೈನ್ ನಿಯಮ, ಲಾಕ್‌ಡೌನ್ ಜಾರಿಯಲ್ಲಿದ್ದು, ಹೆಚ್ಚುವರಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ವಾಣಿಜ್ಯ ನಗರಿ ಶಾಂಘೈನಲ್ಲಿ ಲಾಕ್‌ಡೌನ್‌ನಿಂದ 4.80 ಲಕ್ಷ ಮಂದಿ ಮನೆಯಲ್ಲೇ ಕಾಲ ಕಳೆಯುವಂತಾಗಿದೆ. 15.9 ಲಕ್ಷ ಜನರಿಗೆ ಅಕ್ಕಪಕ್ಕದ ಮನೆಗೆ ಓಡಾಡಲು ಅನುಮತಿಸಲಾಗಿದೆ. 2.12 ಕೋಟಿ ಮಂದಿ ಸರಳ ನಿರ್ಬಂಧದಲ್ಲಿ ಇದ್ದಾರೆ.

ಓಮನ್‌ನಲ್ಲಿ ಕೋವಿಡ್ ನಿರ್ಬಂಧ ತೆರವು: ಓಮನ್‌ನಲ್ಲಿ ಕೋವಿಡ್ ಪ್ರಕರಣಗಳು ಮತ್ತು ಅದರಿಂದ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಇಳಿಮುಖವಾಗುತ್ತಿರುವ ಹಿನ್ನೆಲೆಯಲ್ಲಿ ಎರಡು ವರ್ಷದ ಬಳಿಕ ಮಾಸ್ಕ್ ಕಡ್ಡಾಯ ಸೇರಿದಂತೆ ಕೋವಿಡ್ ನಿಯಮಗಳನ್ನು ಓಮನ್ ಸುಲ್ತಾನ್ ತೆರವುಗೊಳಿಸಿದ್ದಾರೆ.

ಸೇನಾಧಿಕಾರಿಯ ಶವಕ್ಕೆ ಹೆಗಲುಕೊಟ್ಟ ಕಿಮ್: ಉತ್ತರ ಕೊರಿಯಾದಲ್ಲಿ 28 ಲಕ್ಷ ಮಂದಿ ಕೋವಿಡ್ ಸೋಂಕಿತರಿದ್ದಾರೆ ಎಂಬ ವರದಿಗಳ ನಡುವೆಯೇ, ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರು ಹಿರಿಯ ಸೇನಾ ಅಧಿಕಾರಿಯೊಬ್ಬರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರು.



ಫೈಝರ್ 3 ಡೋಸ್ ಲಸಿಕೆ ಮಕ್ಕಳಿಗೆ ಪರಿಣಾಮಕಾರಿ

ವಾಷಿಂಗ್ಟನ್(ಎಪಿ): ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ 3 ಡೋಸ್‌ನ ಫೈಝರ್ ಲಸಿಕೆಯು ಕೋವಿಡ್‌ನಿಂದ ಅತಿಹೆಚ್ಚು ರಕ್ಷಣೆ ನೀಡಲಿದೆ ಎಂದು ಅಮೆರಿಕ ಮೂಲದ ಲಸಿಕೆ ಉತ್ಪಾದನೆ ಕಂಪನಿ ಹೇಳಿಕೊಂಡಿದೆ.

ಈ ಲಸಿಕೆಗೆ ಅನುಮತಿ ಪಡೆಯಲು, ಕೋವಿಡ್ ವಿರುದ್ಧ ಲಸಿಕೆ ಎಷ್ಟು ಪರಿಣಾಮಕಾರಿಯಾಗಿದೆ ಹಾಗೂ ಸುರಕ್ಷಿತವಾಗಿದೆ ಎಂಬುದರ ದತ್ತಾಂಶವನ್ನು ಈ ವಾರದ ಅಂತ್ಯದಲ್ಲಿ ಅಮೆರಿಕದ ಔಷಧ ನಿಯಂತ್ರಣಕ್ಕೆ ಸಲ್ಲಿಸಲು ಫೈಝರ್ ಕಂಪನಿ ಯೋಜಿಸಿದೆ.

ಅಮೆರಿಕದಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಹೊರತುಪಡಿಸಿ, ಉಳಿದೆಲ್ಲ ಸಮುದಾಯಗಳು ಲಸಿಕೆಗೆ ಅರ್ಹವಾಗಿವೆ.

ಓಮೈಕ್ರಾನ್ ಬಿಎ.4 ಸೋಂಕಿತ ಯುವತಿ ಗುಣಮುಖ

ಚೆನ್ನೈ (ಪಿಟಿಐ): ಕೊರೊನ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಬಿಎ.4 ಸೋಂಕಿಗೆ ಒಳಗಾಗಿದ್ದ ತಮಿಳುನಾಡಿದ 19 ವರ್ಷದ ಯುವತಿ ಈಗ ಸೋಂಕಿನಿಂದ ಸಂಪೂರ್ಣವಾಗಿ ಗುಣಮುಖಳಾಗಿದ್ದಾಳೆ ಎಂದು ತಮಿಳುನಾಡು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮುಖ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಇದು ತಮಿಳುನಾಡಿನ ಪ್ರಥಮ ಓಮೈಕ್ರಾನ್ ಬಿಎ.4 ಸೋಂಕು ಪ್ರಕರಣವಾಗಿದ್ದು, ತಮಿಳುನಾಡಿನ ಬೇರೆ ಯಾವುದೇ ಭಾಗಕ್ಕೆ ಸೋಂಕು ಹರಡಿಲ್ಲ ಎಂದು ಎಂದು ಅವರು ದೃಢಪಡಿಸಿದ್ದಾರೆ.

ನಾಲ್ವರು ಸದಸ್ಯರಿರುವ ಯುವತಿಯ ಕುಟುಂಬ ಎಲ್ಲಿಗೂ ಪ್ರಯಾಣ ಮಾಡಿರಲಿಲ್ಲ. ಯುವತಿ ಜೊತೆ ಆಕೆಯ ತಾಯಿ ಕೂಡಾ ಕೋವಿಡ್ ಸೋಂಕಿಗೆ ಒಳಗಾಗಿದ್ದರು. ಆದರೆ ಪರೀಕ್ಷೆಯಲ್ಲಿ ಅವರು ಓಮೈಕ್ರಾನ್ ಬಿಎ.2 ಸೋಂಕಿಗೆ ಒಳಗಾಗಿರುವುದು ಪತ್ತೆಯಾಗಿತ್ತು. ತಾಯಿ ಮಗಳು ಇಬ್ಬರೂ ಪ್ರತ್ಯೇಕವಾಗಿ ಇದ್ದು ಚಿಕಿತ್ಸೆ ಪಡೆದಿದ್ದರು. ಇಬ್ಬರೂ ಸೋಂಕು ಮುಕ್ತರಾಗಿದ್ದಾರೆ ಎಂದಿದ್ದಾರೆ.

2,022 ಪ್ರಕರಣಗಳು ಪತ್ತೆ: 46 ಸಾವು

ನವದೆಹಲಿ: 24 ಗಂಟೆಗಳ ಅವಧಿಯಲ್ಲಿ ಭಾರತ ಹೊಸದಾಗಿ 2,022 ಕೋವಿಡ್ ಪ್ರಕರಣಗಳನ್ನು ಕಂಡಿದೆ. ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 4,31,38,393ಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 14,832ಕ್ಕೆ ಇಳಿದಿದೆ.

ಈ ಒಂದು ದಿನದ ಅವಧಿಯಲ್ಲಿ 46 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 5,24,458ಕ್ಕೆ ಏರಿಕೆಯಾಗಿದೆ.

ದೇಶದ ದೈನಂದಿನ ಪಾಸಿಟಿವಿಟಿ ದರ ಶೇ 0.50 ರಷ್ಟು ಇದೆ. ದೇಶದಲ್ಲಿ ಈ ವರೆಗೆ 192 ಕೋಟಿ ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಶಿಕ್ಷಣ
Correspondence Courses
ನೇರ ಪರೀಕ್ಷೆಗಳು DIRECT EXAMS
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್(ರಿ)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
9740258276

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17,800 - 68,000/-, 9538811104, 9538811223

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC,Degree ಸಂಬಳ 15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs
ಕನ್ನಡ /ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Multiple Vacancy
ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೇಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು.ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

ಭವಿಷ್ಯ
Astrology
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರವಾಸ
Travel
22.06.2022 11ದಿನಗಳು ವಿಮಾನ, AC ಬಸ್, ಊಟ, ರೂಂವಸತಿಯೊಂದಿಗೆ ರಾಜಸ್ಥಾನ, ಮೌಂಟ್‌ಅಬು,ಜೈಸಲ್‌ಮೇರ್, ಜೈಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 6363416487/ 9902433500

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 23/06/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ, ಬುದ್ಧಗಯ, ಅಯೋಧ್ಯ. 21/06/22 ಮಧ್ಯಪ್ರದೇಶ ಉಜ್ಜಯಿನಿ ಮಹಾಕಾಲೇಶ್ವರ, ಓಂಕಾರೇಶ್ವರ. 9964527782

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಜಪಾನ್ ಉದ್ಯಮಿಗಳ ಜೊತೆ ಪ್ರಧಾನಿ ಮೋದಿ ಸಂವಾದ

‘ಜಪಾನ್ ವೀಕ್’ ಸಂಭ್ರಮಕ್ಕೆ ಕರೆ

ಟೋಕಿಯೊ (ಪಿಟಿಐ): ಭಾರತದ ಅಭಿವೃದ್ಧಿಯ ಪಯಣದಲ್ಲಿ ಜಪಾನ್‌ನ ಕೊಡುಗೆಯನ್ನು ಆಚರಿಸುವ ಉದ್ದೇಶದಿಂದ ‘ಜಪಾನ್ ವೀಕ್’ ಕಾರ್ಯಕ್ರಮ ಹಮ್ಮಿಕೊಳ್ಳುವ ಪ್ರಸ್ತಾವವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಡಿಸಿದರು. ಈ ಸಂಭ್ರಮದಲ್ಲಿ ಜಪಾನ್ ಕಂಪನಿಗಳು ಭಾಗಿಯಾಗಬೇಕು ಎಂದು ಅವರು ಮನವಿ ಮಾಡಿದರು.

ಜಪಾನ್‌ನ ಉದ್ಯಮಿಗಳ ಜೊತೆ ದುಂಡುಮೇಜಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಸೋಮವಾರ ಮಾತನಾಡಿದರು. ಜಪಾನ್‌ನ 34 ಕಂಪನಿಗಳ ಮುಖ್ಯಸ್ಥರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಪೈಕಿ ಬಹುತೇಕ ಕಂಪನಿಗಳು ಭಾರತದಲ್ಲಿ ಹೂಡಿಕೆ ಮಾಡಿದ್ದು, ದೇಶದಲ್ಲಿ ಈಗಾಗಲೇ ಕಾರ್ಯಾಚರಣೆ ನಡೆಸುತ್ತಿವೆ. ಆಟೊಮೊಬೈಲ್, ಎಲೆಕ್ಟ್ರಾನಿಕ್, ಸೆಮಿಕಂಡಕ್ಟರ್, ಉಕ್ಕು, ತಂತ್ರಜ್ಞಾನ, ವ್ಯಾಪಾರ ಹಾಗೂ ಬ್ಯಾಂಕಿಂಗ್ ವಲಯದಲ್ಲಿ ಈ ಕಂಪನಿಗಳು ಕೆಲಸ ಮಾಡುತ್ತಿವೆ.

ಹೋಂಡಾ ಮೋಟಾರ್ ಕಾರ್ಪ್, ಟೊಯೊಟ ಮೋಟಾರ್ ಕಾರ್ಪೊರೇಷನ್, ಸುಜುಕಿ ಮೋಟಾರ್ ಕಾರ್ಪೊರೇಷನ್, ಕವಾಸಾಕಿ ಹೆವಿ ಇಂಡಸ್ಟ್ರೀಸ್, ನಿಪ್ಪೋನ್ ಸ್ಟೀಲ್ಸ್ ಸೇರಿದಂತೆ ಪ್ರಮುಖ ಕಂಪನಿಗಳ ಪ್ರತಿನಿಧಿಗಳು ಪ್ರಧಾನಿ ಸಭೆಯಲ್ಲಿ ಭಾಗಿಯಾಗಿದ್ದರು.

‘ಜಪಾನ್‌ನ ಅಗ್ರಗಣ್ಯ ಕಂಪನಿಗಳ ಸಿಇಒಗಳ ಜೊತೆ ಮಾತುಕತೆ ನಡೆಸಿದ್ದು, ಭಾರತದಲ್ಲಿ ಹೂಡಿಕೆಗೆ ಇರುವ ಅಪಾರ ಅವಕಾಶಗಳನ್ನು ಪ್ರಸ್ತಾಪಿಸಲಾಯಿತು’ ಎಂದು ಪ್ರಧಾನಿ ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಭಾರತ ಹಾಗೂ ಜಪಾನ್ ಸಹಜ ಭಾಗೀದಾರ ದೇಶಗಳಾಗಿದ್ದು, ಈ ಮೈತ್ರಿಯನ್ನು ಇನ್ನಷ್ಟು ಗಟ್ಟಿಗೊಳಿಸುವಲ್ಲಿ ಉದ್ಯಮ ವಲಯವು ರಾಯಭಾರಿಗಳ ರೀತಿ ಕೆಲಸ ಮಾಡಿದೆ ಎಂದು ಪ್ರಧಾನಿ ಶ್ಲಾಘಿಸಿದರು. 2020ರ ಮಾರ್ಚ್‌ನಲ್ಲಿ ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ ಅವರು ಭಾರತಕ್ಕೆ ಭೇಟಿ ನೀಡಿದ ವೇಳೆ, ಮುಂದಿನ ಐದು ವರ್ಷಗಳಲ್ಲಿ ಸುಮಾರು ₹3 ಲಕ್ಷ ಕೋಟಿ (5 ಲಕ್ಷ ಕೋಟಿ ಜಪಾನ್ ಯೆನ್) ಹೂಡಿಕೆ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದು ಹೇಳಿದ್ದನ್ನು ಪ್ರಧಾನಿ ಉಲ್ಲೇಖಿಸಿದರು.

ಭಾರತದಲ್ಲಿ ನವೋದ್ಯಮಗಳ ಉತ್ತೇಜನಕ್ಕೆ ಇರುವ ಸರ್ಕಾರದ ಹಲವು ಕಾರ್ಯಕ್ರಮಗಳನ್ನು ವಿವರಿಸಿದರು. ಜಾಗತಿಕ ಹಿನ್ನಡೆಯ ನಡುವೆಯೂ ಭಾರತವು 6.5 ಲಕ್ಷ ಕೋಟಿ (8,400 ಕೋಟಿ ಡಾಲರ್) ವಿದೇಶಿ ಹೂಡಿಕೆ ಆಕರ್ಷಿಸಿದೆ ಎಂದರು.

ಜಪಾನ್ ಉದ್ಯಮಿಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಸಭೆ ನಡೆಸಿದ ಬಳಿಕ ಛಾಯಾಚಿತ್ರಕ್ಕೆ ಪೋಸು ನೀಡಿದರು —ಪಿಟಿಐ ಚಿತ್ರ

> ಪ್ರತಿಯೊಬ್ಬ ಭಾರತೀಯರು ಜಪಾನ್‌ಗೆ ಒಮ್ಮೆಯಾದರೂ ಭೇಟಿ ನೀಡಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಇದೇ ರೀತಿ ಜಪಾನಿಯರು ಭಾರತಕ್ಕೆ ಭೇಟಿ ನೀಡಬೇಕು
>
> **ನರೇಂದ್ರ ಮೋದಿ,** ಪ್ರಧಾನಿ

‘ಭಾರತಕ್ಕೆ ಬನ್ನಿ, ಕೈಜೋಡಿಸಿ’

ಜಪಾನ್‌ನಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು ‘ಭಾರತಕ್ಕೆ ಬನ್ನಿ, ಭಾರತದ ಜೊತೆ ಕೈಜೋಡಿಸಿ’ (ಭಾರತ್ ಚಲೋ, ಭಾರತ್ ಸೇ ಜುಡೊ) ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು. ಇತ್ತೀಚಿನ ದಿನಗಳಲ್ಲಿ ಮೂಲಸೌಕರ್ಯ, ಆಡಳಿತ, ಡಿಜಿಟಲ್ ಕ್ರಾಂತಿ ಕ್ಷೇತ್ರಗಳಲ್ಲಿ ಸರ್ಕಾರ ತೆಗೆದುಕೊಂಡಿರುವ ಸುಧಾರಣಾ ಕ್ರಮಗಳು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಪ್ರಧಾನಿ ಒತ್ತಿ ಹೇಳಿದರು. ಕಾರ್ಯಕ್ರಮದಲ್ಲಿ 700 ಜನರು ಭಾಗಿಯಾಗಿದ್ದರು.

ಜಪಾನ್‌ನಲ್ಲಿ ನೆಲೆಸಿರುವ ಭಾರತೀಯರು ಭಾರತದ ಜೊತೆ ಇಟ್ಟುಕೊಂಡಿರುವ ನಂಟು, ಅವರ ಕೌಶಲ, ಪ್ರತಿಭೆ ಹಾಗೂ ಉದ್ಯಮಶೀಲತೆಯನ್ನು ಪ್ರಧಾನಿ ಶ್ಲಾಘಿಸಿದರು.

ಬಾಲಕನಿಗೆ ಹಸ್ತಾಕ್ಷರ: ತಮ್ಮ ಭೇಟಿಗೆ ಹೋಟೆಲ್ ಹೊರಗಡೆ ಕಾಯುತ್ತಿದ್ದ ಮಕ್ಕಳು ಹಾಗೂ ಅವರ ಪೋಷಕರ ಜೊತೆ ಪ್ರಧಾನಿ ಸಂವಾದ ನಡೆಸಿದರು. ಈ ವೇಳೆ ನಿರರ್ಗಳವಾಗಿ ಹಿಂದಿ ಮಾತನಾಡಿದ ರಿಟ್ಸ್ ಕೀ ಎಂಬ ಬಾಲಕನನ್ನು ಪ್ರಧಾನಿ ಶ್ಲಾಘಿಸಿದರು. ಬಾಲಕನಿಗೆ ಹಸ್ತಾಕ್ಷರ ನೀಡಿದರು.

ಒಪ್ಪಂದಕ್ಕೆ ಸಹಿ

ಭಾರತ–ಅಮೆರಿಕ ಹೂಡಿಕೆ ಪ್ರೋತ್ಸಾಹ ಒಪ್ಪಂದಕ್ಕೆ (ಐಐಎ) ಸಹಿ ಹಾಕಿದವು. ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಹಾಗೂ ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಹಣಕಾಸು ಸಂಸ್ಥೆ (ಡಿಸಿಎಫ್) ಸಿಇಒ ಸ್ಕಾಟ್ ನಾಥನ್ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದರು. ಕ್ವಾಡ್ ಶೃಂಗಸಭೆಯಲ್ಲಿ ಮೋದಿ–ಬೈಡನ್ ಸಭೆಗೂ ಮುನ್ನ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಭಾರತದಲ್ಲಿ ₹30,000 ಕೋಟಿ ಹೂಡಿಕೆಯನ್ನು ಡಿಸಿಎಫ್ ಪರಿಗಣಿಸುತ್ತಿದೆ

ಉಕ್ರೇನ್ ಪೂರ್ವದಲ್ಲಿ ದಾಳಿ ಹೆಚ್ಚಿಸಿದ ರಷ್ಯಾ

ಕೀವ್/ಮಾಸ್ಕೊ (ಎಪಿ/ರಾಯಿಟರ್ಸ್): ಉಕ್ರೇನ್‌ನ ಪೂರ್ವ ಕೈಗಾರಿಕಾ ಪ್ರದೇಶದ ಹೃದಯಭಾಗದಲ್ಲಿ ರಷ್ಯಾ ಪಡೆಗಳು ಸೋಮವಾರ ಶೆಲ್ ದಾಳಿ ತೀವ್ರಗೊಳಿಸಿವೆ.

ಡಾನ್‌ಬಾಸ್ ಪ್ರದೇಶವು ಈಗ ತೀವ್ರ ಸಂಘರ್ಷ ಪೀಡಿತ ಪ್ರದೇಶವಾಗಿದೆ. ಇಲ್ಲಿ ನಡೆಯುತ್ತಿರುವ ಕದನ ನಾಗರಿಕರು ತಮ್ಮ ಮನೆಗಳನ್ನು ತೊರೆಯುವಂತೆ ಮಾಡಿದೆ.

ಉಕ್ರೇನಿನ ಪರ್ವತ ದಾಳಿ ಬ್ರಿಗೇಡ್‌ನ ಭಾರಿ ಸೇನಾ ಉಪಕರಣಗಳನ್ನು ಸೋಮವಾರ ಕಪ್ಪು ಸಮುದ್ರದಲ್ಲಿನ ಜಲಾಂತರ್ಗಾಮಿ ನೌಕೆಯಿಂದ ಸಿಡಿಸಿದ ನಾಲ್ಕು ಕಲಿಬ್ ಕ್ಷಿಪಣಿಗಳು ನಾಶಪಡಿಸಿವೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ.

ಏತನ್ಮಧ್ಯೆ, ಆಕ್ರಮಣದ ಆರಂಭದ ದಿನಗಳಲ್ಲಿ ಎಸಗಿರುವ ಯುದ್ಧಾಪರಾಧಗಳ ವಿಚಾರಣೆಯಲ್ಲಿ ಉಕ್ರೇನ್ ನ್ಯಾಯಾಲಯವು ರಷ್ಯಾದ ಸೇನಾಧಿಕಾರಿ 21 ವರ್ಷದ ಶಿಶಿಮರಿನ್ ಅವರಿಗೆ ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ. ಹಿರಿಯ ನಾಗರಿಕನ ತಲೆಗೆ ಗುಂಡು ಹಾರಿಸಿ ಹತ್ಯೆ ಮಾಡಿದ ಅಪರಾಧವನ್ನು ಶಿಶಿಮರಿನ್ ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದ್ದರು.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಶೃಂಗ ಸಭೆ ಉದ್ದೇಶಿಸಿ ಸೋಮವಾರ ವರ್ಚುವಲ್ ಮೂಲಕ ಮಾತನಾಡಿದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಕಳೆದ ಮಂಗಳವಾರ ಡೆಸ್ನಾ ಗ್ರಾಮದ ಮೇಲೆ ರಷ್ಯಾ ನಡೆಸಿರುವ ವೈಮಾನಿಕ ದಾಳಿಯಲ್ಲಿ 87 ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದರು.

ಉಕ್ರೇನ್‌ನಲ್ಲಿ ನಡೆಸುತ್ತಿರುವ ‘ಆಕ್ರಮಣಕಾರಿ ಯುದ್ಧ’ದ ವಿರುದ್ಧ ತನಿಖೆ ನಡೆಸುತ್ತಿರುವ ವಿದೇಶಗಳಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಕಟುವಾದ ಪತ್ರ ಕಳುಹಿಸುವ ಮೊದಲು ಜಿನೀವಾದಲ್ಲಿನ ವಿಶ್ವಸಂಸ್ಥೆಯ ಕಚೇರಿಯ ರಷ್ಯಾದ ಹಿರಿಯ ರಾಜತಾಂತ್ರಿಕ ಬೋರಿಸ್ ಬೊಂಡರೆವ್ (41) ಅವರು ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಮಾತುಕತೆಗೆ ಉತ್ಸುಕ: ಉಕ್ರೇನ್‌ನಲ್ಲಿನ ಘರ್ಷಣೆ ಕೊನೆಗೊಳಿಸಲು ಇಟಲಿಯ ಶಾಂತಿ ಪ್ರಸ್ತಾವನೆಯ ಅನುಷ್ಠಾನಕ್ಕೆ ತಾನು ಎದುರು ನೋಡುತ್ತಿರುವುದಾಗಿ ರಷ್ಯಾ ಸೋಮವಾರ ಹೇಳಿದೆ.

ರಷ್ಯಾ ನಿಯೋಗದ ಪ್ರಮುಖ ಪ್ರತಿನಿಧಿ ವ್ಲಾಡಿಮಿರ್ ಮೆಡಿನ್‌ಸ್ಕಿ, ‘ಮಾತುಕತೆ ಪುನರಾರಂಭಿಸಲು ರಷ್ಯಾ ಸಿದ್ಧವಿದೆ. ಆದರೆ, ಆ ಜವಾಬ್ದಾರಿಯು ಉಕ್ರೇನ್ ಮೇಲಿದೆ’ ಎಂದು ಹೇಳಿದರು.

ಶ್ರೀಲಂಕಾ: ಸಚಿವ ಸಂಪುಟ ವಿಸ್ತರಣೆ

ಕೊಲಂಬೊ (ಪಿಟಿಐ): ಬಿಕ್ಕಟ್ಟಿನ ನಡುವೆಯೂ ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ಸೋಮವಾರ ಸಚಿವ ಸಂಪುಟ ವಿಸ್ತರಣೆ ಮಾಡಿದ್ದಾರೆ. 8 ಮಂದಿಯನ್ನು ಹೊಸದಾಗಿ ಸಂಪುಟಕ್ಕೆ ಸೇರ್ಪಡೆಗೊಳಿಸಲಾಗಿದೆ. ಆದರೆ, ಅವರು ಹಣಕಾಸು ಸಚಿವರನ್ನು ಇನ್ನೂ ನೇಮಕ ಮಾಡಿಲ್ಲ.

ಶುಕ್ರವಾರವಷ್ಟೇ 9 ಮಂದಿ ಸಚಿವರ ನೇಮಕ ಮಾಡಲಾಗಿತ್ತು.

ಅಧ್ಯಕ್ಷರ ಅಧಿಕಾರ ಮೊಟಕು–ವಿಫಲ: ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಇರುವ ಅನಿರ್ಬಂಧಿತ ಅಧಿಕಾರವನ್ನು ಮೊಟಕುಗೊಳಿಸಲು ಅವಕಾಶ ನೀಡುವ, ಸಂವಿಧಾನದ 21ನೇ ತಿದ್ದುಪಡಿಗೆ ಅನುಮೋದನೆ ಪಡೆಯಲು ಸಂಪುಟಕ್ಕೆ ಶಿಫಾರಸು ಮಾಡುವಲ್ಲಿ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ವಿಫಲರಾಗಿದ್ದಾರೆ.

ಡ್ರಾಗೆ ಸಮಾಧಾನಪಟ್ಟುಕೊಂಡ ಭಾರತ

ಏಷ್ಯಾ ಕಪ್ ಹಾಕಿ: ಅಂತಿಮ ನಿಮಿಷದಲ್ಲಿ ಮಿಂಚಿದ ಪಾಕಿಸ್ತಾನದ ಅಬ್ದುಲ್

ಜಕಾರ್ತ (ಪಿಟಿಐ): ಕೊನೆಯ ಕ್ವಾರ್ಟರ್‌ನಲ್ಲಿ ಗೋಲು ಬಿಟ್ಟುಕೊಟ್ಟ ಹಾಲಿ ಚಾಂಪಿಯನ್ ಭಾರತ ತಂಡ ಏಷ್ಯಾಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಜೊತೆ 1–1ರ ಡ್ರಾಗೆ ಸಮಾಧಾನಪಟ್ಟುಕೊಂಡಿತು.

ಸೋಮವಾರ ಸಂಜೆ ನಡೆದ ‘ಎ’ ಗುಂಪಿನ ಪಂದ್ಯದ 9ನೇ ನಿಮಿಷದಲ್ಲಿ ಕಾರ್ತಿ ಸೆಲ್ವಂ ಗಳಿಸಿದ ಗೋಲಿನೊಂದಿಗೆ ಮುನ್ನಡೆ ಸಾಧಿಸಿದ ಭಾರತ ಕೊನೆಯ ಕ್ವಾರ್ಟರ್ ವರೆಗೂ ಅದನ್ನು ಉಳಿಸಿಕೊಂಡಿತು. ಆದರೆ 59ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶ ಬಿಟ್ಟುಕೊಟ್ಟು ಕೈಸುಟ್ಟುಕೊಂಡಿತು. ಅಬ್ದುಲ್ ರಾಣಾ ಗೋಲು ಗಳಿಸಿ ಬದ್ಧ ಎದುರಾಳಿಗಳಿಗೆ ಸಮಬಲ ತಂದುಕೊಟ್ಟರು. ಮಂಗಳವಾರ ಭಾರತ ತಂಡ ಜಪಾನ್ ವಿರುದ್ಧ ಸೆಣಸಲಿದೆ.

3ನೇ ನಿಮಿಷದಲ್ಲೇ ಭಾರತ ಪೆನಾಲ್ಟಿ ಕಾರ್ನರ್ ಬಿಟ್ಟುಕೊಟ್ಟಿತ್ತು. ಆದರೆ ಗೋಲು ಗಳಿಸಲು ಪಾಕಿಸ್ತಾನಕ್ಕೆ ಸಾಧ್ಯವಾಗಲಿಲ್ಲ. ಕೆಲವೇ ಸೆಕೆಂಡುಗಳ ನಂತರ ಭಾರತಕ್ಕೂ ಪೆನಾಲ್ಟಿ ಅವಕಾಶ ಲಭಿಸಿತು. ಆದರೆ ನೀಲಂ ಸಂಜೀವ್ ಕ್ಸೆಸ್ ಹೊಡೆದ ಚೆಂಡನ್ನು ತಡೆಯುವಲ್ಲಿ ಎದುರಾಳಿ ತಂಡದ ಗೋಲ್ ಕೀಪರ್ ಅಕ್ಮಲ್ ಹುಸೇನ್ ಯಶಸ್ವಿಯಾದರು. ನಂತರವೂ ಭಾರತ ಆಕ್ರಮಣಕಾರಿ ಆಟದ ಮೂಲಕ ಪಾಕಿಸ್ತಾನದ ರಕ್ಷಣಾ ವಿಭಾಗದ ಮೇಲೆ ಒತ್ತಡ ಹೇರಿತು. ಹೀಗಾಗಿ ಮೊದಲಾರ್ಧದಲ್ಲಿ ಇನ್ನೂ ಎರಡು ಪೆನಾಲ್ಟಿ ಕಾರ್ನರ್‌ಗಳು ತಂಡಕ್ಕೆ ಲಭಿಸಿದವು.

9ನೇ ನಿಮಿಷದಲ್ಲಿ ಲಭಿಸಿದ ಅವಕಾಶದಲ್ಲಿ ಕಾರ್ತಿ ಫ್ಲಿಕ್ ಮಾಡಿದ ಚೆಂಡು ಪಾಕ್ ಆಟಗಾರನ ಸ್ಟಿಕ್‌ಗೆ ಹೊಡೆದು ಗುರಿ ಮುಟ್ಟಿತು. ಮೊದಲ ಅಂತರರಾಷ್ಟ್ರೀಯ ಗೋಲು ಗಳಿಸಿದ ಕಾರ್ತಿ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ನಂತರ ಪಾಕಿಸ್ತಾನ ಪೆನಾಲ್ಟಿ ಕಾರ್ನರ್ ಅವಕಾಶ ಕೈಚೆಲ್ಲಿತು.

ಮಿಂಚಿದ ಪಾಕಿಸ್ತಾನ ಗೋಲ್‌ಕೀಪರ್: ಮೊದಲಾರ್ಧದ ಮುಕ್ತಾಯಕ್ಕೆ ಕೆಲವೇ ನಿಮಿಷಗಳ ಮುನ್ನ ಸಮೀಪದಿಂದ ಪವನ್ ರಾಜ್‌ಭರ್ ಅವರು ಹೊಡೆದ ಚೆಂಡನ್ನು ತಡೆದು ಪಾಕ್ ಗೋಲ್‌ಕೀಪರ್ ಮಿಂಚಿದರು. ಆದರೂ ಭಾರತದ ಆಕ್ರಮಣಕಾರಿ ಆಟ ಮುಂದುವರಿಯಿತು. ಎರಡು ನಿಮಿಷಗಳ ನಂತರ ಪಾಕಿಸ್ತಾನಕ್ಕೆ ಉತ್ತಮ ಅವಕಾಶವೊಂದು ಒದಗಿತ್ತು. ಆದರೆ ವಿಷ್ಣುಕಾಂತ್ ಸಿಂಗ್ ಭಾರತದ ರಕ್ಷಣೆಗೆ ಬಂದರು.

ದ್ವಿತೀಯಾರ್ಧದಲ್ಲಿ ಪಾಕಿಸ್ತಾನ ಆಕ್ರಮಣಕ್ಕೆ ಮುಂದಾಯಿತು. ಆರಂಭದಲ್ಲೇ ಪೆನಾಲ್ಟಿ ಕಾರ್ನರ್ ಅವಕಾಶ ಗಳಿಸಿತು. ಆದರೆ ರಿಜ್ವಾನ್ ಅಲಿ ಅವರ ಫ್ಲಿಕ್ ಗೋಲು ಪೆಟ್ಟಿಗೆಯಿಂದ ಹೊರ ಸಾಗಿತು. ನಂತರ ಸೂರಜ್ ಕರ್ಕೇರ ಅವರ ಅಮೋಘ ಆಟದಿಂದಾಗಿ ಭಾರತ ಅಪಾಯದಿಂದ ಪಾರಾಯಿತು. ಆದರೆ ಕೊನೆಗೂ ಗೋಲು ಗಳಿಸುವಲ್ಲಿ ಪಾಕಿಸ್ತಾನ ಯಶಸ್ವಿಯಾಯಿತು.

ಕಾರ್ತಿ ಸೆಲ್ವಂ –ಟ್ವಿಟರ್ ಚಿತ್ರ

ಚೆಂಡಿಗಾಗಿ ಭಾರತದ ಮಂಜೀತ್ (ಮುಂದೆ ಇರುವವರು) ಮತ್ತು ಪಾಕಿಸ್ತಾನದ ರಜಾಕ್ ಮುಹಮ್ಮದ್ ಪೈಪೋಟಿ ನಡೆಸಿದರು –ಟ್ವಿಟರ್ ಚಿತ್ರ

ಫ್ರೆಂಚ್ ಓಪನ್ ಟೆನಿಸ್: ಅಮೆರಿಕದ ಅಮಾಂಡ ಅನಿಸಿಮೊವಗೆ ಗೆಲುವು

ನಡಾಲ್‌ಗೆ ಜಯ; ಒಸಾಕಗೆ ಆಘಾತ

ಪ್ಯಾರಿಸ್ (ಎಎಫ್‌ಪಿ): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ 14ನೇ ಬಾರಿ ಪ್ರಶಸ್ತಿ ಗೆಲ್ಲುವ ಕನಸಿನೊಂದಿಗೆ ಕಣಕ್ಕೆ ಇಳಿದಿರುವ ಸ್ಪೇನ್‌ನ ರಫೆಲ್ ನಡಾಲ್ ಮೊದಲ ಪಂದ್ಯದಲ್ಲಿ ಜಯಭೇರಿ ಮೊಳಗಿಸಿದ್ದಾರೆ.

ಸೋಮವಾರ ನಡೆದ ಪಂದ್ಯದಲ್ಲಿ ಅವರು ಆಸ್ಟ್ರೇಲಿಯಾದ ಥಾಮ್ಸನ್ ವಿರುದ್ಧ 6–2, 6–2, 6–2ರಲ್ಲಿ ಜಯ ಗಳಿಸಿದರು. ಈ ಮೂಲಕ ರೊಲ್ಯಾಂಡ್ ಗ್ಯಾರೋಸ್‌ನಲ್ಲಿ 106 ಪಂದ್ಯಗಳನ್ನು ಗೆದ್ದ ಸಾಧನೆ ಮಾಡಿದರು.

ಮಹಿಳೆಯರ ವಿಭಾಗದಲ್ಲಿ ಹಾಲಿ ಚಾಂಪಿಯನ್ ಜೆಕ್ ಗಣರಾಜ್ಯದ ಬಾರ್ಬರಾ ಕ್ರೆಜಿಕೋವ ಮತ್ತು ನಾಲ್ಕು ಬಾರಿಯ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ವಿಜೇತೆ ಜಪಾನ್‌ನ ನವೊಮಿ ಒಸಾಕ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಪೋಲೆಂಡ್‌ನ ಇಗಾ ಸ್ವಾಟೆಕ್ ಎರಡನೇ ಸುತ್ತು ಪ್ರವೇಶಿಸಿದರು.

ಸೋಮವಾರ ನಡೆದ ಪಂದ್ಯದಲ್ಲಿ ಒಸಾಕ 7–5, 6–4ರಲ್ಲಿ ಅಮೆರಿಕದ ಅಮಾಂಡ ಅನಿಸಿಮೊವ ಎದುರು ಸೋತರು. ಜನವರಿಯಲ್ಲಿ ನಡೆದ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲೂ ಒಸಾಕ ಅವರು ಅಮಾಂಡಗೆ ಮಣಿ ದಿದ್ದರು.

ಎಂಟು ಡಬಲ್ ಫಾಲ್ಟ್‌ಗಳನ್ನು ಎಸಗಿದ ಅವರು 29 ಸ್ವಯಂ ತಪ್ಪುಗಳನ್ನು ಮಾಡಿದರು. ಅಮಾಂಡ ಮೂರು ವರ್ಷಗಳ ಹಿಂದೆ ಫ್ರೆಂಚ್ ಓಪನ್‌ನ ಸೆಮಿಫೈನಲ್ ಪ್ರವೇಶಿಸಿದ್ದರು.

ಸ್ವಾಟೆಕ್ ಅಜೇಯ ಓಟ: ಪೋಲೆಂಡ್‌ನ ಇಗಾ ಸ್ವಾಟೆಕ್ ಅರ್ಹತಾ ಸುತ್ತಿನಲ್ಲಿ ಆಡಿ ಬಂದಿದ್ದ ಉಕ್ರೇನ್‌ನ ಲಿಸಿಯಾ ಸುರೆಂಕೊ ವಿರುದ್ಧ 6-2, 6-0ಯಿಂದ ಗೆದ್ದು ಸತತ 29 ಪಂದ್ಯಗಳಲ್ಲಿ ಜಯ ಗಳಿಸಿದ ಸಾಧನೆ ಮಾಡಿದರು. ಫಿಲಿಪ್ ಚಾಟ್ರಿಯರ್ ಅಂಗಣದ ಹೊರಗೆ ಮಳೆ ಸುರಿಯುತ್ತಿದ್ದರೆ, ಒಳಗೆ ಅಮೋಘ ಆಟವಾಡಿದ ಸ್ವಾಟೆಕ್ 54 ನಿಮಿಷಗಳಲ್ಲಿ ಎದುರಾಳಿಯನ್ನು ಮಣಿಸಿದರು.

ಆ್ಯಶ್ಲಿ ಬಾರ್ಟಿ ದಿಢೀರ್ ನಿವೃತ್ತಿ ಪ್ರಕಟಿಸಿದ ನಂತರ ವಿಶ್ವ ಕ್ರಮಾಂಕದ ಒಂದನೇ ಸ್ಥಾನಕ್ಕೇರಿರುವ 20 ವರ್ಷದ ಸ್ವಾಟೆಕ್ ಈ ಹಿಂದೆ ಆಡಿರುವ ಐದು ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದಾರೆ. ಫ್ರೆಂಚ್ ಓಪನ್‌ನಲ್ಲಿ ಎರಡನೇ ಬಾರಿ ಪ್ರಶಸ್ತಿ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ. 2020ರಲ್ಲಿ ಅವರು ಚಾಂಪಿಯನ್ ಆಗಿದ್ದರು. ಎರಡು ವಿಂಬಲ್ಡನ್ ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಜೆಕ್ ಗಣರಾಜ್ಯದ ಪೆಟ್ರಾ ಕ್ವಿಟೋವ ಅವರು ಹಂಗರಿಯ ಅನಾ ಬೋಂದಾರ್ ವಿರುದ್ಧ ಗೆದ್ದು ಎರಡನೇ ಸುತ್ತಿಗೆ ಲಗ್ಗೆ ಇರಿಸಿದರು. ಮುಂದಿನ ಹಂತದಲ್ಲಿ ಅವರು ಆಸ್ಟ್ರೇಲಿಯಾದ ದರಿಯಾ ಸವಿಲ್ಲೆ ವಿರುದ್ಧ ಸೆಣಸುವರು.

ಜೆಕ್ ಗಣರಾಜ್ಯದ ಪೆಟ್ರಾ ಕ್ವಿಟೋವ ಹಂಗರಿಯ ಅನಾ ಬೋಂದಾರ್ ಎದುರು 7-6 (7/0), 6-1ರಲ್ಲಿ; ಆಸ್ಟ್ರೇಲಿಯಾದ ದರಿಯಾ ಸವಿಲ್ಲೆ ಗ್ರೀಸ್‌ನ ವೆಲೆಂಟಿನಿ ಗ್ರಾಮಟಿಕೊಪೊಲು ವಿರುದ್ಧ 6-1, 6-2ರಲ್ಲಿ, ಚೀನಾದ ಜೆಂಗ್ ಕ್ವಿವೆನ್ ಬೆಲ್ಜಿಯಂನ ಮರಿನಾ ಜನೆವ್‌ಸ್ಕ ವಿರುದ್ಧ 6-3, 6-1ರಲ್ಲಿ, ಇಟಲಿಯ ಮಾರ್ಟಿನಾ ಟ್ರೆವಿಸನ್ ಬ್ರಿಟನ್‌ನ ಹರಿಯೆಟ್ ಡಾರ್ಟ್ ವಿರುದ್ಧ 6-0, 6-2ರಲ್ಲಿ, ಜರ್ಮನಿಯ ಆ್ಯಂಡ್ರಿಯಾ ಪೆಟ್ಕೊವಿಚ್ ಫ್ರಾನ್ಸ್‌ನ ಒಶಿಯಾನಿ ದೊಡಿನ್ ವಿರುದ್ಧ 6-4, 6-2ರಲ್ಲಿ ಜಯ ಗಳಿಸಿದರು.

ರಫೆಲ್ ನಡಾಲ್ ಚೆಂಡನ್ನು ರಿಟರ್ನ್ ಮಾಡಿದ ಬಗೆ –ಎಎಫ್‌ಪಿ ಚಿತ್ರ


ಇಗಾ ಸ್ವಾಟೆಕ್ –ಎಎಫ್‌ಪಿ ಚಿತ್ರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,266
ಇಂದಿನ ಅಂತ್ಯ	16,215
▼	51
ದಿನದ ಕನಿಷ್ಠ	16,185

ವಿನಿಮಯ ದರ

$ ಡಾಲರ್	77.55
£ ಪೌಂಡ್	97.56
€ ಯುರೊ	82.34
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1560 (1555)
ಸೂರ್ಯಕಾಂತಿ (ರಿಫೈನ್ಡ್)	₹1870 (1870)
ಪಾಮೋಲಿನ್	₹1525 (1527)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹23-503
ದ್ವಿತಳಿ (ಬಿ.ವಿ)	₹202-855

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹172
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹159.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1200
ಮಧ್ಯಮ	₹800-1000
ಸಣ್ಣ	₹400-600

ರೆಪೊ ದರ ಹೆಚ್ಚಳ: ದಾಸ್ ಸುಳಿವು

ನವದೆಹಲಿ (ಪಿಟಿಐ): ಹಣದುಬ್ಬರವನ್ನು ಕಡಿಮೆ ಮಾಡಲು ಜೂನ್‌ನಲ್ಲಿ ರೆಪೊ ದರವನ್ನು ಮತ್ತೆ ಹೆಚ್ಚಿಸುವ ಸೂಚನೆಯನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೀಡಿದ್ದಾರೆ.

‘ದರ ಹೆಚ್ಚಾಗುತ್ತದೆ ಎಂಬುದನ್ನು ಹೇಳಲು ಬುದ್ಧಿವಂತಿಕೆ ಬೇಕಾಗಿಲ್ಲ. ರೆಪೊ ಏರಿಕೆ ಆಗುತ್ತದೆ’ ಎಂದು ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ಇಂದು ಬಹುತೇಕ ದೇಶಗಳಲ್ಲಿ ಠೇವಣಿಗಳ ಮೇಲಿನ ಬಡ್ಡಿ ದರವು ಹಣದುಬ್ಬರ ಪ್ರಮಾಣಕ್ಕಿಂತ ಕಡಿಮೆ ಇದೆ. ಬಡ್ಡಿ ದರಕ್ಕಿಂತ ಹಣದುಬ್ಬರ ಕಡಿಮೆ ಆಗುವ ಸಂದರ್ಭ ಬರುತ್ತದೆ. ಎಷ್ಟು ಬೇಗ ಅದು ಆಗುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ’ ಎಂದು ದಾಸ್ ತಿಳಿಸಿದ್ದಾರೆ.

ಜೊಮ್ಯಾಟೊ: ಹೆಚ್ಚಿದ ನಷ್ಟ

ನವದೆಹಲಿ (ಪಿಟಿಐ): ಆಹಾರ ವಸ್ತುಗಳನ್ನು ಮನೆಬಾಗಿಲಿಗೆ ತಲುಪಿಸುವ ಜೊಮ್ಯಾಟೊ ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ₹ 359 ಕೋಟಿ ನಷ್ಟ ಅನುಭವಿಸಿದೆ. ವೆಚ್ಚಗಳು ಹೆಚ್ಚಾಗಿದ್ದು ನಷ್ಟಕ್ಕೆ ಒಂದು ಕಾರಣ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿ ₹ 134.2 ಕೋಟಿ ನಷ್ಟ ದಾಖಲಿಸಿತ್ತು. 2021–22ರ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿ ₹ 1,211 ಕೋಟಿ ವರಮಾನ ಗಳಿಸಿದೆ.

ಮುಂಬೈ ಧಾರಣೆ

ಶೇಂಗಾ

23-5-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10850-10900
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1510 (1500)
ಪಾಮ್ ವಾರದ ಡೆಲಿವರಿ	1523 (1525)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,000 (51,975)

ಬೆಳ್ಳಿ ಕೆ.ಜಿ 62,200 (61,600)

ಆವರಣದಲ್ಲಿ ಶನಿವಾರದ ಧಾರಣೆ

‘ಗರಿಷ್ಠ ತಾಪಮಾನದಿಂದ ಆರ್ಥಿಕ ಬೆಳವಣಿಗೆಗೆ ಅಡ್ಡಿ’

ನವದೆಹಲಿ (ಪಿಟಿಐ): ತಾಪಮಾನ ಗರಿಷ್ಠ ಮಟ್ಟದಲ್ಲಿ ಇರುವುದು ಭಾರತದಲ್ಲಿ ಹಣದುಬ್ಬರವನ್ನು ಇನ್ನಷ್ಟು ಹೆಚ್ಚಾಗುವಂತೆ ಮಾಡಲಿದ್ದು, ಆರ್ಥಿಕ ಬೆಳವಣಿಗೆ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಮೂಡಿಸ್ ಇನ್‌ವೆಸ್ಟರ್ಸ್ ಸರ್ವೀಸ್ ಸೋಮವಾರ ಹೇಳಿದೆ.

ಬಿಸಿ ಗಾಳಿಯು ಭಾರತದಲ್ಲಿ ಸಾಮಾನ್ಯವಾಗಿದ್ದು, ಮೇ ಮತ್ತು ಜೂನ್‌ನಲ್ಲಿ ಬೀಸುತ್ತದೆ. ಆದರೆ, ದೆಹಲಿಯಲ್ಲಿ ಮೇ ತಿಂಗಳ ಗರಿಷ್ಠ ತಾಪಮಾನವು ಈ ಬಾರಿ 49 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ.

ತಾಪಮಾನವು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ವಾಯವ್ಯ ಭಾಗದಲ್ಲಿ ಹೆಚ್ಚಿನ ಪರಿಣಾಮ ಉಂಟಾಗಲಿದ್ದು, ಗೋಧಿ ಉತ್ಪಾದನೆ ಕಡಿಮೆ ಆಗುತ್ತದೆ. ವಿದ್ಯುತ್ ಸಂಪರ್ಕ ಕಡಿತಕ್ಕೂ ಕಾರಣವಾಗುತ್ತದೆ. ಈಗಾಗಲೇ ಗರಿಷ್ಠ ಮಟ್ಟದಲ್ಲಿ ಇರುವ ಹಣದುಬ್ಬರವು ಇನ್ನಷ್ಟು ಹೆಚ್ಚಾಗಲಿದ್ದು, ಆರ್ಥಿಕ ಬೆಳವಣಿಗೆಗೆ ಅಡ್ಡಿಯುಂಟು ಮಾಡುತ್ತದೆ ಎಂದು ಹೇಳಿದೆ.

ಹಿಂಜರಿತ ಇಲ್ಲ: ಐಎಂಎಫ್

ದಾವೋಸ್ (ರಾಯಿಟರ್ಸ್): ಜಗತ್ತಿನ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಆರ್ಥಿಕ ಹಿಂಜರಿತ ಎದುರಾಗುವ ಸಾಧ್ಯತೆ ಇಲ್ಲ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜೀವಾ ಹೇಳಿದ್ದಾರೆ.

ವಿಶ್ವ ಆರ್ಥಿಕ ಶೃಂಗದಲ್ಲಿ ಜಾರ್ಜೀವಾ ಅವರಿಗೆ ‘ಹಿಂಜರಿತದ ನಿರೀಕ್ಷೆ ಇದೆಯೇ’ ಎಂಬ ಪ್ರಶ್ನೆ ಎದುರಾಯಿತು. ‘ಈ ಸಂದರ್ಭದಲ್ಲಿ ಹಿಂಜರಿತ ಎದುರಾಗುವುದಿಲ್ಲ. ಆದರೆ, ಇದರ ಅರ್ಥ ಮುಂದೆ ಬರುವುದೇ ಇಲ್ಲ ಎಂದಲ್ಲ’ ಎಂಬ ಉತ್ತರವನ್ನು ಜಾರ್ಜೀವಾ ನೀಡಿದ್ದಾರೆ.

ಕ್ರಿಸ್ಟಲೀನಾ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	48229-48669
ಬೆಟ್ಟೆ	38619-39099
ಕೆಂಪುಗೋಟು	31609-32010
ರಾಶಿ	47739-48189
ಕುಮಟ	
ಚಿಪ್ಪು	25089-30569
ಕೋಕ	16189-29099
ಫ್ಯಾಕ್ಟರಿ	10189-19399
ಹಳೆಚಾಲಿ	45609-49399
ಹೊಸಚಾಲಿ	35199-38399
ಪುತ್ತೂರು	
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	24980-31800
ಚಾಲಿ	35099-38899
ಕೋಕ	24899-32669
ಕೆಂಪುಗೋಟು	27499-31599
ರಾಶಿ	44699-48599
ತಟ್ಟಿಬೆಟ್ಟೆ	35109-45689
ಶಿರಸಿ	
ಬೆಟ್ಟೆ	12001-46999
ಬಿಳಿಗೋಟು	21601-32799
ಚಾಲಿ	33001-39361
ರಾಶಿ	35001-49669
ಯಲ್ಲಾಪುರ	
ಬಿಳಿಗೋಟು	28299-33899
ಚಾಲಿ	35929-39341
ಕೋಕ	18899-29299
ಕೆಂಪುಗೋಟು	29036-34699
ರಾಶಿ	48899-55569
ತಟ್ಟಿಬೆಟ್ಟೆ	38899-46069
ಶಿವಮೊಗ್ಗ	
ಬೆಟ್ಟೆ	48800-52269
ಗೊರಬಲು	16009-37399
ರಾಶಿ	43199-49399
ಸರಕು	56619-79196
ಸಾಗರ	
ಬಿಳಿಗೋಟು	24009-31889
ಚಾಲಿ	28690-38499
ಕೋಕ	21219-35299
ಕೆಂಪುಗೋಟು	22989-3669
ರಾಶಿ	34299-49299
ಸಿಪ್ಪೆಗೋಟು	4786-23099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	16000	218.70 ಸೆಂಟ್ಸ್
ಎಸಿ	8900	8500	8675	
ಆರ್‌ಪಿ	9500	9900	10000	ಲಂಡನ್
ಆರ್‌ಸಿ	4650	4350	4475	2080ಡಾಲರ್ಸ್

ಜ್ಯೂಬಿಲಿಯಂಟ್, ಹಿಟಾಚಿ, ಹೀರೊ, ಸೀಮನ್ಸ್ ಮುಖ್ಯಸ್ಥರೊಂದಿಗೆ ಸಿಎಂ ಚರ್ಚೆ

ರಾಜ್ಯದಲ್ಲಿ ಲುಲು ₹2 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬುದಾಬಿಯ ಲುಲು ಗ್ರೂಪ್ ರಾಜ್ಯದಲ್ಲಿ ಸುಮಾರು ₹ 2 ಸಾವಿರ ಕೋಟಿ ಹೂಡಿಕೆ ಮಾಡಲು ಮುಂದಾಗಿದ್ದು, ಈ ಕುರಿತಂತೆ ಒಪ್ಪಂದಕ್ಕೆ ಗುರುವಾರ ಸಹಿ ಹಾಕಲಾಯಿತು ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಒಕ್ಕೂಟದ ವಾರ್ಷಿಕ ಸಮಾವೇಶದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಲುಲು ಗ್ರೂಪ್ ಇಂಟರ್‌ನ್ಯಾಷನಲ್‌ನ ನಿರ್ದೇಶಕ ಎ.ವಿ. ಅನಂತರಾಮನ್ ಮತ್ತು ರಾಜ್ಯ ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ ಸಹಿ ಹಾಕಿದರು.

ಲುಲು ಗ್ರೂಪ್ ರಾಜ್ಯದಲ್ಲಿ ನಾಲ್ಕು ಶಾಪಿಂಗ್ ಮಾಲ್ ಮತ್ತು ಹೈಪರ್ ಮಾರ್ಕೆಟ್ ಹಾಗೂ ರಫ್ತು ಆಧಾರಿತ ಆಹಾರ ಮಳಿಗೆಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಆ ಮೂಲಕ, 10 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ಪ್ರಮುಖ ಸಂಸ್ಥೆಗಳ ಮುಖ್ಯಸ್ಥರ ಜೊತೆ ಚರ್ಚೆ: ಜ್ಯೂಬಿಲಿಯಂಟ್ ಗ್ರೂಪ್, ಹಿಟಾಚಿ ಎನರ್ಜಿ, ಸೀಮನ್ಸ್ ಸೇರಿದಂತೆ ವಿವಿಧ ಸಂಸ್ಥೆಗಳ ಮುಖ್ಯಸ್ಥರ ಜೊತೆ ಮುಖ್ಯಮಂತ್ರಿ ಬೊಮ್ಮಾಯಿ ಚರ್ಚಿಸಿದರು.

ಕರ್ನಾಟಕದಲ್ಲಿ ಫಾರ್ಮಾ ಮತ್ತು ಎಫ್‌ಎಂಸಿಜಿ ವಲಯದಲ್ಲಿ ಹೂಡಿಕೆ ಅವಕಾಶಗಳನ್ನು ಅನ್ವೇಷಿಸುವಂತೆ ಜ್ಯೂಬಿಲಿಯೆಂಟ್ ಗ್ರೂಪ್‌ನ ಮುಖ್ಯಸ್ಥರಿಗೆ ತಿಳಿಸಿದ ಬೊಮ್ಮಾಯಿ, ಧಾರವಾಡದಲ್ಲಿ ಎಫ್‌ಎಂಸಿಜಿ ವಲಯದಲ್ಲಿ ಹೂಡಿಕೆಗೆ ವಿಶೇಷ ಪ್ರೋತ್ಸಾಹಕ ಪ್ಯಾಕೇಜ್ ಬಗ್ಗೆ ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರಮುಖ ಅಂಶಗಳು:

- ಜ್ಯೂಬಿಲಿಯಂಟ್ ಫುಡ್ ವರ್ಕ್ಸ್ ನೂತನ ಕೇಂದ್ರೀಕೃತ ಪಾಕಶಾಲೆ ಆರಂಭಿಸಲು ಹಾಗೂ ದೇವನಹಳ್ಳಿಯಲ್ಲಿ 10 ಎಕರೆ ಪ್ರದೇಶದಲ್ಲಿ ಜ್ಯೂಬಿಲಿಯಂಟ್ ಬಯೋಸಿಸ್ ನೂತನವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಲು ತೀರ್ಮಾನಿಸಿದೆ.
- ಇ. ವಿ. ಚಾರ್ಜಿಂಗ್‌ಗಾಗಿ ಮೂಲಸೌಕರ್ಯ ಘಟಕ ಸ್ಥಾಪನೆಗೆ ಯೋಜಿಸುತ್ತಿರುವುದಾಗಿ ಹಿಟಾಚಿ ಎನರ್ಜಿ ಸಂಸ್ಥೆ ಹೇಳಿದೆ. ಬೆಂಗಳೂರಿನಲ್ಲಿ ಪ್ರತಿಭೆಯ ಲಭ್ಯತೆ ಇರುವುದರಿಂದ ನವೀಕರಿಸಬಹುದಾದ ಇಂಧನ ಮತ್ತು ಡಿಜಿಟಲೀಕರಣದ ಅವಕಾಶಗಳ ಬಗ್ಗೆ ಆಸಕ್ತಿ ತೋರಿದೆ.
- ಮ್ಯಾಗ್ನೆಟಿಕ್ ಇಮೇಜಿಂಗ್ ಮತ್ತು ಡಯಾಗ್ನಾಸ್ಟಿಕ್ ಮೇಲೆ ಕೇಂದ್ರೀಕೃತವಾದ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಯನ್ನು ಬೆಂಗಳೂರಿನಲ್ಲಿ ಕೈಗೆತ್ತಿಕೊಳ್ಳಲು ಸೀಮೆನ್ಸ್ ಸಂಸ್ಥೆ ಉದ್ದೇಶಿಸಿದೆ. ಸ್ಥಳೀಯ ಮಾರುಕಟ್ಟೆಗಳಿಗೆ ಮಾರಾಟ ಮಾಡಲು ವೈದ್ಯಕೀಯ ಸಲಕರಣೆಗಳನ್ನು ಉತ್ಪಾದಿಸುವ ಘಟಕವನ್ನು ಬೊಮ್ಮಸಂದ್ರದಲ್ಲಿ ಸ್ಥಾಪಿಸಲು ಇದೇ ಸೆಪ್ಟೆಂಬರ್‌ನಲ್ಲಿ ಶಂಕುಸ್ಥಾಪನೆಗೆ ಉದ್ದೇಶಿಸಿದೆ. ‘ಬಿಯಾಂಡ್ ಬೆಂಗಳೂರು’ ಯೋಜನೆಯಡಿ ತುಮಕೂರು, ಹುಬ್ಬಳ್ಳಿ-ಧಾರವಾಡ ಮತ್ತು ಮೈಸೂರು ನಗರಗಳಲ್ಲಿಯೂ ಹೂಡಿಕೆ ಮಾಡುವ ಕುರಿತು ಸೀಮನ್ಸ್ ಸಂಸ್ಥೆಯ ಅಧಿಕಾರಿಗಳು ಮಾತುಕತೆ ನಡೆಸಿದರು.
- ನೆಸ್ಲೆ ಕಾರ್ಯಕಾರಿ ಉಪಾಧ್ಯಕ್ಷ ಮಗ್ಗಿ ಬತಾಟೋ, ದಸ್ಸಾಲ್ಟ್ ಸಿಸ್ಟಮ್ಸ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಫ್ಲಾರೆನ್ಸ್ ವರ್ಜಿಲೆನ್ ಜೊತೆ ಮುಖ್ಯಮಂತ್ರಿ ಮಾತುಕತೆ ನಡೆಸಿದ್ದಾರೆ.

ಇಂಧನ ಚಿಲ್ಲರೆ ವಹಿವಾಟು ಕಷ್ಟ: ರಿಲಯನ್ಸ್ ಬಿಪಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯನ್ನು ಮಾಡದೆ ಇರುವ ಕಾರಣದಿಂದಾಗಿ, ಇಂಧನದ ಚಿಲ್ಲರೆ ವಹಿವಾಟು ಖಾಸಗಿ ವಲಯದ ಪಾಲಿಗೆ ನಷ್ಟ ಉಂಟುಮಾಡುತ್ತಿದೆ ಎಂದು ರಿಲಯನ್ಸ್ ಬಿಪಿ ಮೊಬಿಲಿಟಿ ಲಿಮಿಟೆಡ್ ಕಂಪನಿಯು ಕೇಂದ್ರ ಸರ್ಕಾರಕ್ಕೆ ಹೇಳಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಳವಾಗಿದ್ದರೂ ಐಒಸಿ, ಎಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 2021ರ ನವೆಂಬರ್‌ನಿಂದ 137 ದಿನಗಳವರೆಗೆ ಹೆಚ್ಚಿಸಿರಲಿಲ್ಲ. ಆಗ ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ಚುನಾವಣೆ ಹತ್ತಿರವಾಗಿತ್ತು. ಈ ವರ್ಷದ ಮಾರ್ಚ್‌ನಿಂದ 47 ದಿನಗಳವರೆಗೆ ಬೆಲೆಯನ್ನು ಹೆಚ್ಚಿಸಲಿಲ್ಲ.

‘ರಿಲಯನ್ಸ್ ಬಿಪಿ ಮೊಬಿಲಿಟಿ (ಆರ್‌ಬಿಎಂಎಲ್) ಕಂಪನಿಯು ಇಂಧನ ಬೆಲೆ ನಿಗದಿ ವಿಚಾರವಾಗಿ ಪೆಟ್ರೋಲಿಯಂ ಸಚಿವಾಲಯಕ್ಕೆ ಪತ್ರ ಬರೆದಿದೆ’ ಎಂದು ಮೂಲಗಳು ತಿಳಿಸಿವೆ.

ಆರ್‌ಬಿಎಂಎಲ್ ಕಂಪನಿಯು ಪ್ರತಿ ತಿಂಗಳು ₹ 700 ಕೋಟಿ ನಷ್ಟ ಅನುಭವಿಸುತ್ತಿದ್ದು, ಇದನ್ನು ತಗ್ಗಿಸಲು ತನ್ನ ವಹಿವಾಟು ಕಡಿಮೆ ಮಾಡುತ್ತಿದೆ. ರಷ್ಯಾದ ರೊಸ್ನೆಫ್ಟ್ ಕಂಪನಿಯ ಹೂಡಿಕೆ ಇರುವ ನಯಾರಾ ಎನರ್ಜಿ ಕಂಪನಿಯು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರಿಗೆ ₹ 3ರಷ್ಟು ಜಾಸ್ತಿ ಮಾಡಿದೆ.

ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಹಿಂದಿನ ವಾರ ತಗ್ಗಿಸಿದ ನಂತರ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಯು ಅದರ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಿವೆ. ತಮ್ಮ ನಷ್ಟವನ್ನು ಕಡಿಮೆ ಮಾಡಿಕೊಳ್ಳಲು ಅವು ಎಕ್ಸೈಸ್ ಸುಂಕ ಇಳಿಕೆಯನ್ನು ಬಳಸಿಕೊಂಡಿಲ್ಲ.

ಮೇ 16ರ ಲೆಕ್ಕಾಚಾರದ ಪ್ರಕಾರ ತೈಲ ಮಾರಾಟ ಕಂಪನಿಗಳಿಗೆ ಪ್ರತಿ ಲೀಟರ್ ಪೆಟ್ರೋಲ್ ಮಾರಾಟದಿಂದ ₹ 13.08ರಷ್ಟು, ಡೀಸೆಲ್ ಮಾರಾಟದಿಂದ ₹ 24.09ರಷ್ಟು ನಷ್ಟ ಆಗುತ್ತಿತ್ತು.

ಸರ್ಕಾರಿ ಕಂಪನಿಗಳು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಕಚ್ಚಾ ತೈಲದ ಬೆಲೆ ಹಾಗೂ ತಮ್ಮ ಇತರ ವಹಿವಾಟುಗಳಿಂದ ಸಿಗುವ ಲಾಭವನ್ನು ಪರಿಗಣಿಸಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ನಿರ್ಧರಿಸುತ್ತಿವೆ ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೆಟ್ರೋಲಿಯಂ ಸಚಿವಾಲಯ ಹಾಗೂ ಆರ್‌ಬಿಎಂಎಲ್ ಕಡೆಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಉಕ್ಕಿನ ಬೆಲೆ ಶೇ 15ರವರೆಗೆ ಇಳಿಕೆ ಸಾಧ್ಯತೆ

ಒಂದನೇ ಪುಟದಿಂದ...

‘ಉಕ್ಕಿನ ಕಚ್ಚಾ ಸಾಮಗ್ರಿಗಳ ಆಮದು ಸುಂಕ ಕೈಬಿಡುವ ನಿರ್ಧಾರದಿಂದ ದೇಶಿ ಮಾರುಕಟ್ಟೆಯಲ್ಲಿ ಉಕ್ಕಿನ ಬೆಲೆ ಕಡಿಮೆ ಆಗಲಿದೆ. ಕಬ್ಬಿಣದ ಅದಿರಿನ ರಫ್ತು ಸುಂಕ ಹೆಚ್ಚಳದಿಂದ ದೇಶದಲ್ಲಿ ಲಭ್ಯತೆಯು ಸುಧಾರಿಸಲಿದೆ’ ಎಂದು ದೇಸಾಯಿ ಹೇಳಿದ್ದಾರೆ.

‘ಪೆಟ್ರೋಲ್, ಡೀಸೆಲ್ ದರವನ್ನು ಕಡಿಮೆ ಮಾಡಿರುವುದರಿಂದ ಸರಕು ಸಾಗಣೆ ವೆಚ್ಚ ಕಡಿಮೆ ಆಗಲಿದೆ’ ಎಂದು ಹೇಳಿದ್ದಾರೆ. ‘ಟಿಎಂಟಿ ಬಾರ್‌ಗಳ ಬೆಲೆಯು ಈಗಾಗಲೇ ಇಳಿಕೆ ಕಾಣಲು ಆರಂಭವಾಗಿದೆ’ ಎಂದು ಆಲ್ ಇಂಡಿಯಾ ಇಂಡಕ್ಷನ್ ಫರ್ನೇಸಸ್ ಅಸೋಸಿಯೇಷನ್ (ಎಐಐಎಫ್‌ಎ) ಪ್ರಧಾನ ಕಾರ್ಯದರ್ಶಿ ಕಮಲ್ ಅಗರ್‌ವಾಲ್ ಹೇಳಿದ್ದಾರೆ.

‘ಟಿಎಂಟಿ ಬಾರ್ ಬೆಲೆಯು ಸೋಮವಾರ ಪ್ರತಿ ಟನ್‌ಗೆ ₹ 52 ಸಾವಿರದಂತೆ ಮಾರಾಟ ಆಗಿದೆ. ಭಾನುವಾರ ಪ್ರತಿ ಟನ್‌ಗೆ ₹ 57 ಸಾವಿರ ಇತ್ತು. ಅಂದರೆ ಪ್ರತಿ ಟನ್‌ಗೆ ₹ 5 ಸಾವಿರ ಇಳಿಕೆ ಆಗಿದೆ’ ಎಂದು ಮಾಹಿತಿ ನೀಡಿದ್ದಾರೆ. ‘ಉಕ್ಕಿನ ಗಟ್ಟಿಗಳು ಮತ್ತು ಸರಳುಗಳ ಬೆಲೆಯು ಪ್ರತಿ ಟನ್‌ಗೆ ₹ 5 ಸಾವಿರದಷ್ಟು ಕಡಿಮೆ ಆಗಿದೆ. ಉಕ್ಕಿನ ಗಟ್ಟಿ ಬೆಲೆಯು ₹ 50 ಸಾವಿರ ಮತ್ತು ಸರಳುಗಳ ಬೆಲೆಯು ₹ 51 ಸಾವಿರ ಇದೆ’ ಎಂದು ತಿಳಿಸಿದ್ದಾರೆ.

ಶಿಯೊಮಿ: ಮಧ್ಯಂತರ ತಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಯೊಮಿ ಇಂಡಿಯಾ ಕಂಪನಿಗೆ ಸೇರಿದ ನಾಲ್ಕು ಬ್ಯಾಂಕ್ ಖಾತೆಗಳಲ್ಲಿನ ₹ 5,551.27 ಕೋಟಿ ಮೊತ್ತವನ್ನು ಜಪ್ತಿ ಮಾಡಬೇಕೆಂಬ ಜಾರಿ ನಿರ್ದೇಶನಾಲಯದ (ಇಡಿ) ಆದೇಶಕ್ಕೆ ನೀಡಿರುವ ಮಧ್ಯಂತರ ತಡೆಯನ್ನು ಹೈಕೋರ್ಟ್ ಮುಂದುವರಿಸಿದೆ.

ಶಿಯೊಮಿ ಕಂಪನಿ ಕಚೇರಿಯ ಪ್ರತಿನಿಧಿ ಸಮೀರ್ ಬಿ.ಎಸ್. ರಾವ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ಈ ಹಿಂದಿನ ಆದೇಶವನ್ನು ಜೂನ್ 1ರವರೆಗೂ ಮುಂದುವರಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಏನಿದು ಪ್ರಕರಣ?: ‘ಶಿಯೊಮಿ ಕಂಪನಿಯು, ಭಾರತದಲ್ಲಿ ಗಳಿಸಿದ ಹಣವನ್ನು ರಾಯಧನ ನೀಡುವ ನೆಪದಲ್ಲಿ ವಿದೇಶಿ ಕಂಪನಿಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡುತ್ತಿದೆ. ಆದ್ದರಿಂದ, ಇದು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) 1999ರ ನಿಯಮಗಳ ಉಲ್ಲಂಘನೆ’ ಎಂಬುದು ಇ.ಡಿ ಆರೋಪ.

ಮೊದಲ ಕ್ವಾಲಿಫೈಯರ್ ಇಂದು; ರಶೀದ್ –ಚಾಹಲ್ ಮುಖಾಮುಖಿ

ರಾಜಸ್ಥಾನಕ್ಕೆ ಟೈಟನ್ಸ್ ಸವಾಲು

ಕೋಲ್ಕತ್ತ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ಸ್ ತಂಡ ಇದೇ ಮೊದಲ ಬಾರಿ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುತ್ತಿದೆ.

ಇದೀಗ ಲೀಗ್ ಹಂತದಲ್ಲಿ ಅಗ್ರಸ್ಥಾನ ಗಳಿಸಿ ಪ್ಲೇ ಆಫ್‌ಗೆ ಪ್ರವೇಶಿಸಿದೆ. ಈಡನ್ ಗಾರ್ಡನ್‌ನಲ್ಲಿ ಮಂಗಳವಾರ ನಡೆಯಲಿರುವ ಮೊದಲ ಕ್ವಾಲಿಫೈಯ-ರ್‌ನಲ್ಲಿ ಗುಜರಾತ್ ತಂಡವು ರಾಜಸ್ಥಾನ ರಾಯಲ್ಸ್ ಎದುರು ಸೆಣಸಲಿದೆ.

ಅಂಕಪಟ್ಟಿಯಲ್ಲಿ ಗುಜರಾತ್ ಮೊದಲ ಮತ್ತು ರಾಯಲ್ಸ್ ಎರಡನೇ ಸ್ಥಾನ ಪಡೆದಿವೆ. ಆದರೆ, ಆಟಗಾರರ ಸಾಮರ್ಥ್ಯವನ್ನು ನೋಡಿದರೆ ಸಮಬ-ಲಶಾಲಿಗಳಂತೆ ಕಾಣುತ್ತಿವೆ. ಉಭಯ ತಂಡಗಳ ನಾಯಕರಾದ ಹಾರ್ದಿಕ್ ಮತ್ತು ಸಂಜು ಸ್ಯಾಮ್ಸನ್ ಬ್ಯಾಟಿಂಗ್‌ನಲ್ಲಿ-ಯೂ ಉಪಯುಕ್ತ ಕಾಣಿಕೆ ನೀಡಿದ್ದಾರೆ. ಗುಜರಾತ್ ಅರಂಭಿಕ ಶುಭಮನ್ ಗಿಲ್ ಮತ್ತು ರಾಜಸ್ಥಾನದ ಆರಂಭಿಕ ಆಟಗಾರ ಜೋಸ್ ಬಟ್ಲರ್ ಕೂಡ ಲಯದಲ್ಲಿದ್ದಾರೆ. ಬಟ್ಲರ್ ಈ ಟೂರ್ನಿಯಲ್ಲಿ ಮೂರು ಶತಕ ದಾಖಲಿಸಿದ್ದಾರೆ.

ಗುಜರಾತ್ ತಂಡದ ಸ್ಪಿನ್ನರ್ ರಶೀದ್ ಖಾನ್ ಮತ್ತು ರಾಯಲ್ಸ್‌ನ ಯಜುವೇಂದ್ರ ಚಾಹಲ್ ಅವರ ನಡುವಿನ ಹಣಾಹಣಿಗೆ ಈ ಪಂದ್ಯ ವೇದಿಕೆಯಾಗಲಿದೆ. ಇಬ್ಬರು ಪಂದ್ಯ ಜಯಿಸಿ ಕೊಡುವ ಸಮರ್ಥ ಸ್ಪಿನ್ನರ್‌ಗ-ಳಾಗಿದ್ದಾರೆ. ಮೊಹಮ್ಮದ್ ಶಮಿ ಮತ್ತು ಪ್ರಸಿದ್ಧ ಕೃಷ್ಣ ಕೂಡ ಪೈಪೋಟಿ ನಡೆಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗ-ದು. ರಾಜಸ್ಥಾನ ತಂಡದಲ್ಲಿ ರಿಯಾನ್ ಪರಾಗ್ ಮತ್ತು ಟೈಟನ್ಸ್‌ನ ರಾಹುಲ್ ತೆವಾಟಿಯಾ ಮಧ್ಯೆ ಸಿಕ್ಸರ್ ಸಿಡಿಸುವ ಪೈಪೋಟಿ ನಡೆಯುವ ನಿರೀಕ್ಷೆಯೂ ಇದೆ.

ಈ ಪಂದ್ಯದಲ್ಲಿ ಜಯಿಸಿದವರು ನೇರವಾಗಿ ಫೈನಲ್ ಪ್ರವೇಶಿಸುವರು. ಸೋತವರು ಎರಡನೇ ಕ್ವಾಲಿಫೈಯರ್ ಆಡಲಿದ್ದಾರೆ. ಆದ್ದರಿಂದ ಎರಡೂ ತಂಡಗಳು ಗೆಲುವಿಗಾಗಿ ಸಂಪೂರ್ಣ ಸಾಮರ್ಥ್ಯ ಪಣಕ್ಕೊಡ್ಡುವ ಛಲದಲ್ಲಿವೆ. ಲೀಗ್ ಹಂತದಲ್ಲಿ ಉಭಯ ತಂಡಗಳು ಒಂದು ಬಾರಿ ಮುಖಾಮುಖಿಯಾಗಿದ್ದ-ವು. ಗುಜರಾತ್ ಜಯಿಸಿತ್ತು.

ಹಾರ್ದಿಕ್ ಪಾಂಡ್ಯ

ಸಂಜು ಸ್ಯಾಮ್ಸನ್

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಮಳೆಯಿಂದ ಪಂದ್ಯ ನಿಂತರೆ ಸೂಪರ್ ಓವರ್!

ನವದೆಹಲಿ (ಪಿಟಿಐ): ಈ ಸಲದ ಐಪಿಎಲ್ ಟೂರ್ನಿಯ ಫೈನಲ್ ಪಂದ್ಯವು ಮಳೆಯಿಂದ ನಡೆಯದಿದ್ದರೆ ಸೂಪರ್ ಓವರ್ ಮೂಲಕ ವಿಜೇತ ತಂಡವನ್ನು ನಿರ್ಧರಿಸಲಾಗುವುದು. ಸೂಪರ್ ಓವರ್ ಕೂಡ ಸಾಧ್ಯವಾಗದಿದ್ದರೆ ಲೀಗ್ ಹಂತದಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ವಿಜಯಿಯನ್ನು ನಿರ್ಧರಿಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ವಾಲಿಫೈಯರ್ 1, ಎಲಿಮಿನೇಟರ್ ಮತ್ತು ಕ್ವಾಲಿಫೈಯರ್ 2 ಪಂದ್ಯಗಳಿಗೂ ಇದೇ ನಿಯಮ ಅನ್ವಯವಾಗಲಿದೆ. ಈ ಪಂದ್ಯಗಳಿಗೆ ಕಾಯ್ದಿಟ್ಟ ದಿನಗಳನ್ನು ನಿಗದಿಪಡಿಸಿಲ್ಲ. ಆದರೆ ಫೈನಲ್ ಪಂದ್ಯಕ್ಕೆ ಒಂದು ಮೀಸಲು ದಿನವನ್ನು (ಮೇ 30) ಇರಿಸಲಾಗಿದೆ. ರಾತ್ರಿ 8ಕ್ಕೆ ಪಂದ್ಯ ಆರಂಭವಾಗಲಿದೆ.

‘ನಿಗದಿಯ ಅವಧಿಯಲ್ಲಿ ಆಟ ನಡೆಯದಿದ್ದರೆ ಸೂಪರ್ ಓವರ್ ಮಾಡಿಸಲಾಗುತ್ತದೆ. ಆದರೆ ನಿಗದಿತ ಸಮಯದಲ್ಲಿ ಅವಕಾಶ ಸಿಕ್ಕರೆ ಕನಿಷ್ಠ 5 ಓವರ್‌ಗಳಾದರೂ ಸರಿ ಆಟ ನಡೆಸಲಾಗುವುದು’ ಎಂದು ಐಪಿಎಲ್ ನಿಯಮದಲ್ಲಿ ತಿಳಿಸಲಾಗಿದೆ.

‘ನನ್ನ ತವರು ಈಡನ್ ಅಲ್ಲ’: ಕೋಲ್ಕತ್ತ (ಪಿಟಿಐ): ಭಾರತ ತಂಡದ ವಿಕೆಟ್‌ಕೀಪರ್ ಬ್ಯಾಟರ್ ವೃದ್ಧಿಮಾನ್ ಸಹಾ ಅವರು ತಮ್ಮ ತವರು ಈಡನ್ ಗಾರ್ಡನ್ ಅಲ್ಲ. ಮೊಟೇರಾ ಕ್ರೀಡಾಂಗಣ ಎಂದು ಹೇಳಿದ್ದಾರೆ.

ಮೂಲತಃ ಬಂಗಾಳದ ಆಟಗಾರನಾಗಿರುವ ಸಹಾ ಐಪಿಎಲ್‌ನಲ್ಲಿ ಗುಜರಾತ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

ಸೂಪರ್‌ನೋವಾಸ್‌ಗೆ ಗೆಲುವು

ಮಹಿಳೆಯರ ಟ್ವೆಂಟಿ20 ಚಾಲೆಂಜ್: ಮಿಂಚಿದ ಪೂಜಾ, ಹರ್ಮನ್‌ಪ್ರೀತ್

ಪುಣೆ (ಪಿಟಿಐ): ಪೂಜಾ ವಸ್ತ್ರಕರ್ ಅವರ ಪ್ರಭಾವಿ ದಾಳಿಗೆ ನಲುಗಿದ ಟ್ರೇಲ್‌ಬ್ಲೇಜರ್ಸ್ ತಂಡ ಕುಸಿಯಿತು. ಸೂಪರ್‌ನೋವಾಸ್ ತಂಡ ಭರ್ಜರಿ ಜಯ ಗಳಿಸಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮಹಿಳೆಯರ ಟಿ20 ಚಾಲೆಂಜರ್ಸ್ ಟೂರ್ನಿಯ ಪಂದ್ಯದಲ್ಲಿ ಸೂಪರ್‌ನೋವಾಸ್ 49 ರನ್‌ಗಳಿಂದ ಟ್ರೇಲ್‌ಬ್ಲೇಜರ್ಸ್ ತಂಡವನ್ನು ಮಣಿಸಿತು.

164 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಟ್ರೇಲ್ ಬ್ಲೇಜರ್ಸ್ 9ಕ್ಕೆ 114 ರನ್ ಗಳಿಸಿತು. ಅಗ್ರ ಕ್ರಮಾಂಕದ ಮೂವರನ್ನು ಬಿಟ್ಟರೆ ಉಳಿದ ಯಾರಿಗೂ ಮಿಂಚಲು ಸಾಧ್ಯವಾಗಲಿಲ್ಲ.

ಟಾಸ್ ಗೆದ್ದ ಸೂಪರ್‌ನೋವಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪ್ರಿಯಾ ಪೂನಿಯಾ ಮತ್ತು ಡಾಟಿನ್ ಜೋಡಿ ಹಾಕಿದ ಅಡಿಪಾಯದ ಮೇಲೆ ತಂಡ ಉತ್ತಮ ಮೊತ್ತ ದಾಖಲಿಸಿತು.

ಟ್ರೇಲ್‌ಬ್ಲೇಜರ್ಸ್ ತಂಡದ ಬೌಲರ್ ಹೇಯಲಿ ಮ್ಯಾಥ್ಯೂಸ್ (29ಕ್ಕೆ3) ಸೂಪರ್‌ನೋವಾಸ್ ತಂಡಕ್ಕೆ ಸ್ವಲ್ಪ ಕಡಿವಾಣ ಹಾಕುವಲ್ಲಿ ಯಶಸ್ವಿಯಾದರು. ಆರಂಭಿಕ ಜೋಡಿ ಪ್ರಿಯಾ ಮತ್ತು ಡಾಟಿನ್ ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಕೇವಲ ಐದು ಓವರ್‌ಗಳಲ್ಲಿ ಈ ಮೊತ್ತ ಕಲೆಹಾಕಿದರು. ಡಾಟಿನ್ ರನೌಟ್ ಆಗಿದ್ದರಿಂದ ಜೊತೆಯಾಟ ಮುರಿಯಿತು.

ಎಂಟನೇ ಓವರ್ ನಲ್ಲಿ ಹೇಯಲಿ ಬೌಲಿಂಗ್‌ನಲ್ಲಿ ಪ್ರಿಯಾ ಕ್ಲೀನ್‌ಬೌಲ್ಡ್ ಆದರು. ಈ ಹಂತದಲ್ಲಿ ಜೊತೆಗೂಡಿನದ ಹರ್ಲೀನ್ ಡಿಯೊಲ್ (35; 19ಎ) ಮತ್ತು ಹರ್ಮನ್‌ಪ್ರೀತ್ ಕೌರ್ (37; 29) ಇನಿಂಗ್ಸ್‌ಗೆ ಬಲ ತುಂಬಿದರು. 12ನೇ ಓವರ್‌ನಲ್ಲಿ ಸಲ್ಮಾ ಖಾತೂನ್ ಜೊತೆಯಾಟ ಮುರಿದರು. ನಂತರ ಬಂದ ಬ್ಯಾಟರ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.

ಪೂಜಾ ವಸ್ತ್ರಕರ್ ಮತ್ತು ಸೂನ್ ಲೂಜ್ ಮಾತ್ರ ಎರಡಂಕಿ ಮುಟ್ಟಿದರು.

ಹರ್ಮನ್‌ಪ್ರೀತ್ ಕೌರ್

ಸ್ಕೋರ್ ಕಾರ್ಡ್

ಸೂಪರ್‌ನೋವಾಸ್ 163 (20 ಓವರ್)
ಪ್ರಿಯಾ ಬಿ ಮ್ಯಾಥ್ಯೂಸ್ 22 (20 ಎ, 4x2, 6x1), ಡಿಯಾಂಡ್ರ ರನ್ ಔಟ್ (ಶರ್ಮಿನ್) 32 (17 ಎ, 4x5, 6x1), ಹರ್ಲೀನ್ ಎಲ್‌ಬಿಡಬ್ಲ್ಯು ಬಿ ಸಲ್ಮಾ 35 (19 ಎ, 4x5), ಹರ್ಮನ್‌ಪ್ರೀತ್ ರನ್ ಔಟ್ (ಅರುಂಧತಿ/ರಿಚಾ) 37 (29 ಎ, 4x4), ಸೂನ್ ಲೂಜ್ ಸಿ ರೇಣುಕಾ ಬಿ ರಾಜೇಶ್ವರಿ 10 (11 ಎ, 4x1), ಅಲಾನ ಸಿ ಸ್ಮೃತಿ ಬಿ ಸಲ್ಮಾ 5 (4 ಎ, 4x1), ಪೂಜಾ ಸಿ ರಿಚಾ ಬಿ ಪೂನಂ 14 (12 ಎ, 4x1) ಸೋಫಿ ಎಲ್‌ಬಿಡಬ್ಲ್ಯು ಬಿ ಮ್ಯಾಥ್ಯೂಸ್ 5 (3 ಎ, 4x1), ತಾನಿಯಾ ಔಟಾಗದೆ 1 (1 ಎ), ಮೇಘನಾ ರನ್ ಔಟ್ (ಡಂಕ್ಲಿ/ರಿಚಾ 2 (2 ಎ), ಚಂದು ಎಲ್‌ಬಿಡಬ್ಲ್ಯು ಬಿ ಮ್ಯಾಥ್ಯೂಸ್ 0 (2 ಎ)
ವಿಕೆಟ್ ಪತನ: 1-50 (ಡಿಯಾಂಡ್ರ ದೊತಿನ್, 4.6), 2-63 (ಪ್ರಿಯಾ ಪೂನಿಯಾ, 7.1), 3-100 (ಹರ್ಲೀನ್ ಡಿಯೋಲ್, 11.2), 4-121 (ಸೂನ್ ಲೂಜ್, 14.3), 5-128 (ಅಲಾನ ಕಿಂಗ್, 15.3), 6-155 (ಪೂಜಾ ವಸ್ತ್ರಕಾರ್, 18.4), 7-160 (ಹರ್ಮನ್‌ಪ್ರೀತ್ ಕೌರ್, 18.6), 8-160 (ಸೋಫಿ ಎಕ್ಲೆಸ್ಟೋನ್, 19.1), 9-163 (ಮೇಘನಾ ಸಿಂಗ್, 19.4), 10-163 (ವಿ.ಚಂದು, 19.6)
ಬೌಲಿಂಗ್: ರೇಣುಕಾ ಸಿಂಗ್ 2–0–22–0, ರಾಜೇಶ್ವರಿ 4–0–34–1, ಅರುಂಧತಿ ರೆಡ್ಡಿ 2–0–19–0, ಹಯೆಲಿ ಮ್ಯಾಥ್ಯೂಸ್ 4–0–29–3, ಪೂನಂ ಯಾದವ್ 4–0–29–1, ಸಲ್ಮಾ ಖಾತೂನ್ 4–0–30–2

ಟ್ರೇಲ್‌ಬ್ಲೇಜರ್ಸ್ 9ಕ್ಕೆ 114 (20 ಓವರ್)
ಸ್ಮೃತಿ ಸಿ ಪೂನಿಯಾ ಬಿ ವಸ್ತ್ರಕರ್ 34 (23 ಎ, 4x4), ಹಯೆಲಿ ಮ್ಯಾಥ್ಯೂಸ್ ಸಿ ಭಾಟಿಯಾ ಬಿ ವಸ್ತ್ರಕರ್ 18 (14 ಎ, 4x2, 6x1), ಜೆಮಿಮಾ ಡಿ ಡಿಯೋಲ್ ಬಿ ಮೇಘನಾ 24 (21 ಎ, 4x4), ಸೋಫಿಯಾ ಸಿ ಪೂನಿಯಾ ಬಿ ವಸ್ತ್ರಕರ್ 1 (2 ಎ), ಶರ್ಮಿನ್ ಬಿ ಕಿಂಗ್ 0 (4 ಎ), ರಿಚಾ ಡಿ ದೊತಿನ್ ಬಿ ಎಕ್ಲೆಸ್ಟೋನ್ 2 (8 ಎ), ಅರುಂಧತಿ ಸ್ಟಂಪ್ಡ್ ಭಾಟಿಯಾ ಬಿ ಎಕ್ಲೆಸ್ಟೋನ್ 0 (1 ಎ), ಸಲ್ಮಾ ಖಾತೂನ್ ಸಿ ಎಕ್ಲೆಸ್ಟೋನ್ ಬಿ ವಸ್ತ್ರಕಾರ್ 0 (7 ಎ), ಪೂನಂ ಸಿ ಡಿಯೋಲ್ ಬಿ ಕಿಂಗ್ 7 (12 ಎ), ರೇಣುಕಾ ಔಟಾಗದೆ 14 (18 ಎ, 4x2), ರಾಜೇಶ್ವರಿ ಔಟಾಗದೆ 7 (10 ಎ, 4x1)
ಇತರೆ (ಲೆಗ್‌ಬೈ 4, ವೈಡ್ 3) 7
ವಿಕೆಟ್ ಪತನ: -1-39 (ಹಯೆಲಿ ಮ್ಯಾಥ್ಯೂಸ್, 4.6), 2-63 (ಸ್ಮೃತಿ ಮಂದಾನ, 7.2), 3-65 (ಸೋಫಿಯಾ ಡಂಕ್ಲಿ, 7.5), 4-67 (ಶರ್ಮಿನ್ ಅಕ್ತರ್, 8.4), 5-72 (ರಿಚಾ ಘೋಷ್, 10.2), 6-72 (ಅರುಂಧತಿ ರೆಡ್ಡಿ, 10.3), 7-73 (ಸಲ್ಮಾ ಖಾತೂನ್, 11.5), 8-86 (ಜೆಮಿಮಾ ರಾಡ್ರಿಗಸ್, 13.5), 9-94 (ಪೂನಂ ಯಾದವ್, 16.2)
ಬೌಲಿಂಗ್: ವಿ.ಚಂದು 3–0–26–0, ಮೇಘನಾ ಸಿಂಗ್ 3–0–16–1, ಸೋಫಿ ಎಕ್ಲೆಸ್ಟೋನ್ 4–0–19–2, ಪೂಜಾ ವಸ್ತ್ರಕಾರ್ 4–0–12–4, ಅಲಾನ ಕಿಂಗ್ 4–0–30–2, ಡಿಯಾಂಡ್ರ ದೊತಿನ್ 2–0–7–0

ಫಲಿತಾಂಶ: ಸೂಪರ್‌ನೋವಾಸ್‌ಗೆ 49 ರನ್ ಜಯ

ಟೆಸ್ಟ್: ರಹೀಂ, ಲಿಟನ್ ಶತಕ

ಢಾಕಾ (ಪಿಟಿಐ): ಮುಷ್ಫಿಕುರ್ ರಹೀಮ್ ಮತ್ತು ಲಿಟನ್ ದಾಸ್ ಗಳಿಸಿದ ಶತಕಗಳ ಬಲದಿಂದ ಬಾಂಗ್ಲಾದೇಶ ತಂಡವು ಸೋಮವಾರ ಇಲ್ಲಿ ಆರಂಭವಾದ ಎರಡನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮೊತ್ತ ಕಲೆಹಾಕಿದೆ.

ಶೇರ್ ಎ ಬಾಂಗ್ಲಾ ಕ್ರೀಡಾಂಗಣ-ದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಲಂಕಾದ ಬೌಲರ್ ಕಸುನ್ ರಜಿತಾ ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಮೆಹಮುದುಲ್ಲಾ ಹಸನ್ ಜಾಯ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಎರಡನೇ ಓವರ್‌ನಲ್ಲಿ ಅಸಿತಾ ಫರ್ನಾಂಡೊ ಎಸೆತದಲ್ಲಿ ತಮಿಮ್ ಇಕ್ಬಾಲ್ ಔಟಾದರು. ಇಬ್ಬರೂ ಆರಂಭಿಕರು ಖಾತೆ ತೆರೆಯಲಿಲ್ಲ. ನಜ್ಮುಲ್ ಹುಸೇನ್ ಮತ್ತು ನಾಯಕ ಮೊಮಿನುಲ್ ಹಕ್ ಕೂಡ ಒಂದಂಕಿ ಗಳಿಸಿದರು. ಶಕೀಬ್ ಅಲ್ ಹಸನ್ ಸೊನ್ನೆ ಸುತ್ತಿದರು. ಇದರಿಂದಾಗಿ ತಂಡವು 24 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು.

ಈ ಹಂತದಲ್ಲಿ ಜೊತೆಗೂಡಿದ ರಹೀಮ್ (ಬ್ಯಾಟಿಂಗ್ 115; 252ಎ, 4X13) ಮತ್ತು ದಾಸ್ (ಬ್ಯಾಟಿಂಗ್ 135; 221ಎ, 4X16, 6X1) ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 253 ರನ್‌ಗಳನ್ನು ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 85 ಓವರ್‌ಗಳಲ್ಲಿ 5ಕ್ಕೆ277 (ಮುಷ್ಫಿಕುರ್ ರಹೀಮ್ ಬ್ಯಾಟಿಂಗ್ 115, ಲಿಟನ್ ದಾಸ್ ಬ್ಯಾಟಿಂಗ್ 135, ಕಸುನ್ ರಜಿತಾ 43ಕ್ಕೆ3, ಅಶಿತಾ ಫರ್ನಾಂಡೊ 80ಕ್ಕೆ2)

ಚೆಸ್: ಎಂಟರ ಘಟ್ಟಕ್ಕೆ ಪ್ರಜ್ಞಾನಂದ

ಚೆನ್ನೈ (ಪಿಟಿಐ): ಯುವ ಗ್ರ್ಯಾಂಡ್‌ಮಾ-ಸ್ಟರ್ ಆರ್. ಪ್ರಜ್ಞಾನಂದ ಮೆಲ್ಟ್‌ವಾಟರ್ ಚಾಂಪಿಯನ್ಸ್ ಚೆಸ್ ಚೆಸೆಬಲ್ ಮಾಸ್ಟರ್ಸ್ ಟೂರ್ನಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

ಭಾನುವಾರ ತಡರಾತ್ರಿ ನಡೆದ 15ನೇ ಸುತ್ತಿನಲ್ಲಿ 16 ವರ್ಷದ ಪ್ರಜ್ಞಾನಂದ ಭಾರತದವರೇ ಆದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಎದುರು ಜಯಿಸಿದರು.

ಈ ಟೂರ್ನಿಯ ಆರನೇ ಸುತ್ತಿನಲ್ಲಿ ಪ್ರಜ್ಞಾನಂದ ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲಸನ್ ವಿರುದ್ಧ ಜಯಿಸಿದ್ದರು.

ಒಟ್ಟು 25 ಅಂಕ ಗಳಿಸಿ ನಾಲ್ಕನೇ ಸ್ಥಾನ ಪಡೆದರು.

ಭಾರತದ ಅನೀಶ್ ಗಿರಿ (29 ಪಾಯಿಂಟ್), ಕಾರ್ಲಸನ್ (28 ಪಾಯಿಂಟ್) ಮತ್ತು ಡಿಂಗ್ ಲಿರೆನ್ (25 ಪಾಯಿಂಟ್) ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿದ್ದಾರೆ.

ಟೇಬಲ್ ಟೆನಿಸ್: ಸಬ್ ಜೂನಿಯರ್, ಕೆಡೆಟ್ ತಂಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದೋರ್‌ನಲ್ಲಿ ನಡೆಯಲಿರುವ ಸಬ್ ಜೂನಿಯರ್ ಮತ್ತು ಕೆಡೆಟ್ ವಿಭಾಗದ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಆಡುವ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ವಿಭಾಗದ ಆಟಗಾರರ ಹೆಸರನ್ನು ಪ್ರಕಟಿಸಲಾಗಿದೆ.

ಮೂರು ವಯೋಮಾನದ ಟೂರ್ನಿ ಇದೇ 26ರಿಂದ ಜೂನ್ 1ರ ವರೆಗೆ ಅಭಯ್ ಪ್ರಶಾಲ್ ಕ್ರೀ-ಡಾಂಗಣದಲ್ಲಿ ನಡೆಯಲಿದೆ ಎಂದು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ಜಿ.ಉಪಾಧ್ಯ ತಿಳಿಸಿದ್ದಾರೆ.

ತಂಡಗಳು: 15 ವರ್ಷದೊಳಗಿನ ಬಾಲಕರು: ಅಭಿನವ್ ಮೂರ್ತಿ, ವರುಣ್ ಕಶ್ಯಪ್, ಹೃಷಿಕೇಶ್ ಶೆಟ್ಟೂರ್, ತೇಶುಭ್ ದಿನೇಶ್.

ಬಾಲಕಿಯರು: ನಿಹಾರಿಕಾ ಎ, ಸಾನ್ವಿ ಮಾಂಡೇಕರ್, ಪರ್ಣವಿ ಎಚ್.ಎ. ನೀತಿ ಅಗರವಾಲ್; 13 ವರ್ಷದೊಳಗಿನ ಬಾಲಕಿಯರು: ಆಯುಷಿ ಗೋಡ್ಸೆ, ವೃಷಾಲಿ ಕಿಣಿ, ಸಾನ್ವಿ ಮಾಂಡೇಕರ್, ಕೈರಾ ಬಾಳಿಗ; 11 ವರ್ಷದೊಳಗಿನ ಬಾಲಕರು: ರೆಯಾಂಶ್ ಜಲನ್, ಅಭಿನವ್ ಪ್ರಸನ್ನ, ತನಿಷ್ಕಾ ಕಾಳಭೈರವ್, ರಾಶಿ ರಾವ್. ದಿನೇಶ್ ಜೆ: ಬಾಲಕರ ವಿಭಾಗದ ಕೋಚ್, ಮ್ಯಾನೇಜರ್; ಸಂಗಮ್ ಬೈಲೂರು: ಬಾಲಕಿಯರ ವಿಭಾಗದ ಕೋಚ್, ಮ್ಯಾನೇಜರ್.